24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 64 | ನವದೆಹಲಿ | ಬೆಲೆ ₹10 | ಆಗಸ್ಟ್ 30, 2026 ಭಾನುವಾರ




ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು



ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು

## ಆಕೆ ನಮ್ಮ ಕನಸುಗಳನ್ನು ಸಾಕಾರಗೊಳಿಸುತ್ತಾಳೆ
## ಆಕೆ ನಮ್ಮ ಭವಿಷ್ಯವನ್ನು ರೂಪಿಸುತ್ತಾಳೆ

ಪ್ರತಿ ಕುಟುಂಬದ ಯಜಮಾನಿಯ ಕೈ ಸೇರುವ ರೂ. 2000 ಹಣವು ಕುಟುಂಬದ ಹಲವು ಕನಸುಗಳನ್ನು ಈಡೇರಿಸಲು ಸಹಕಾರಿಯಾಗಿದೆ.

ಇವು ಗೃಹಲಕ್ಷ್ಮಿಯರ ಕಥೆಗಳು




**₹76,500+** ಕೋಟಿ ವಿತರಿಸಲಾಗಿದೆ

ಗೃಹಲಕ್ಷ್ಮಿ

**1.2+** ಕೋಟಿ ಫಲಾನುಭವಿಗಳು

ಗ್ಯಾರಂಟಿ ಸರ್ಕಾರ

ಶಕ್ತಿ ಅನ್ನಭಾಗ್ಯ ಗೃಹಜ್ಯೋತಿ ಯುವನಿಧಿ

ಸ್ಕ್ಯಾನ್ ಮಾಡಿ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

CMofKarnataka | https://dipr.karnataka.gov.in/ | Karnatakavarthe | ಕರ್ನಾಟಕ ವಾರ್ತೆ

## ನಿತ್ಯ ಪಂಚಾಂಗ 30.08.2026 ಭಾನುವಾರ



**ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ, ಆಷಾಢ-ಶ್ರಾವಣ ಮಾಸ**

ಶ್ರಾವಣ ಬಹುಳ, ಬಿದಿಗೆ, ಉತ್ತರಾ ಭಾದ್ರಾ ನಕ್ಷತ್ರ, ರಾಘವೇಂದ್ರ ಸ್ವಾಮಿ/ಉಡುಪಿ ಅರಾಧನೆ, ಕೂಡಲಿ ವಿದ್ಯಾಭಿನವ ನೃಸಿಂಹಭಾರತೀ ವರ್ಧಂತಿ, ಶಂಕರಲಿಂಗ ಭಗವಾನ್ ಜಯಂತಿ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಸಿಗದ ಸಚಿವ ಸ್ಥಾನ: ಶಾಸಕ ಸ್ಥಾನ ತೊರೆಯುವಂತೆ ಒತ್ತಡ: ಟಿ.ಬಿ. ಜಯಚಂದ್ರ

**ಬೆಂಗಳೂರು, ಆ.29:** ಮತ್ತೆ ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಪ್ರಶ್ನಿಸಿರುವ ಕಾಂಗ್ರೆಸ್ ಹಿರಿಯ ಶಾಸಕ ಟಿ.ಬಿ.ಜಯಚಂದ್ರ ಸಚಿವರ ಆಡಳಿತಾತ್ಮಕ ಅನುಭವ ಮತ್ತು ರಾಜ್ಯ ಸರ್ಕಾರದ ಕಾರ್ಯವೈಖರಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಸಂಪುಟ ವಿಸ್ತರಣೆ ಬಗ್ಗೆ ರಾಜ್ಯದ ಮತದಾರರು ಹಾಗೂ ಅವರ ಕ್ಷೇತ್ರದ ಜನರು ಪ್ರಶ್ನಿಸುತ್ತಿದ್ದಾರೆ, ತಮ್ಮ ಕ್ಷೇತ್ರಕ್ಕೆ ರಾಜೀನಾಮೆ ನೀಡಿ ಸರ್ಕಾರದಿಂದ ಹೊರಬರುವಂತೆ ಸಮುದಾಯದ ಜನರು ಒತ್ತಾಯಿಸುತ್ತಿದ್ದಾರೆ ಎಂದು ಹೇಳಿದರು.

ಕರ್ನಾಟಕ ಕಾಂಗ್ರೆಸ್‌ನ ಹಿರಿಯ ನಾಯಕರಲ್ಲಿ ಒಬ್ಬರಾದ ಜಯಚಂದ್ರ, ಪಕ್ಷದೊಂದಿಗಿನ ತಮ್ಮ ದೀರ್ಘ ಸಂಬಂಧ ಮತ್ತು ಶಾಸಕರಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ನಾನು 1978 ರಿಂದ ಶಾಸಕರಾಗಿ ಸೇವೆ ಸಲ್ಲಿಸಿದ್ದೇನೆ, ನನ್ನ ರಾಜಕೀಯ ಜೀವನದಲ್ಲಿ ಗಾಂಧಿ ಕುಟುಂಬದ ನಾಲ್ಕು ತಲೆಮಾರುಗಳನ್ನು ಕಂಡಿದ್ದೇನೆ ಎಂದು ಹೇಳಿದರು.

ನಾನು ಸುಮಾರು 56 ವರ್ಷಗಳ ಹಿಂದೆ ಕಾಂಗ್ರೆಸ್ ಸೇರಿದ್ದೆ. ನಾನು 1978 ರಲ್ಲಿ ಶಾಸಕನಾಗಿದ್ದೆ. ಇದು ಶಾಸಕನಾಗಿ ನನ್ನ 49ನೇ ವರ್ಷ. ಇಂದಿರಾ ಗಾಂಧಿ ನನ್ನ ಚುನಾವಣಾ ಪ್ರಚಾರಕ್ಕಾಗಿ ಬಂದರು, ರಾಜೀವ್ ಗಾಂಧಿ ಬಂದರು, ಸೋನಿಯಾ ಗಾಂಧಿ ಬಂದರು, ರಾಹುಲ್ ಗಾಂಧಿ ಬಂದರು.

ನಾನು ಸೋಲನ್ನು ಸಹ ಎದುರಿಸಿದ್ದೇನೆ ಮತ್ತು ಚುನಾವಣೆಗಳನ್ನು ಗೆದ್ದಿದ್ದೇನೆ. ಮಲ್ಲಿಕಾರ್ಜುನ ಖರ್ಗೆ ನಂತರ, ನಾನು ಕರ್ನಾಟಕದ ಅತ್ಯಂತ ಹಿರಿಯ ವ್ಯಕ್ತಿ. ಆದರೆ ಇನ್ನೂ, ಅವರು ನನ್ನ ಕ್ಷೇತ್ರದ ಮತದಾರರ ಆಕಾಂಕ್ಷೆಗಳನ್ನು ಈಡೇರಿಸಲು ಸಾಧ್ಯವಾಗುತ್ತಿಲ್ಲ. ಅವರು (ನನ್ನ ಅನುಭವ) ಬಳಸಿ ಕೊಳ್ಳುತ್ತಿಲ್ಲ. ನಾನು ದೆಹಲಿಯಲ್ಲೂ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದೇನೆ ಎಂದಿದ್ದಾರೆ.

ಪ್ರಸ್ತಾವಿತ ಸಚಿವ ಸಂಪುಟದಲ್ಲಿನ ಆಡಳಿತಾತ್ಮಕ ಅನುಭವವನ್ನು ಪ್ರಶ್ನಿಸಿದ ಜಯಚಂದ್ರ, ರಾಜ್ಯ ಸರ್ಕಾರದ ಕಾರ್ಯವೈಖರಿಯನ್ನು ಟೀಕಿಸಿದರು ಮತ್ತು ಕರ್ನಾಟಕ ಕಾವೇರಿ ವಿವಾದ ಮತ್ತು ಬರ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದು ಹೇಳಿದರು.

# ರಸ್ತೆಗಳ ಇಕ್ಕೆಲಗಳಲ್ಲಿ ತೇಗದ ಸಿರಿ; ವರ್ಷಕ್ಕೆ 1 ಕೋಟಿ ತೇಗದ ಸಸಿ ನೆಡುವ ಯೋಜನೆ: ಸಿಎಂ

- ತೇಗದ ಸಿರಿ ಲಾಭಾಂಶ ರೈತರಿಗೆ ಶೇ.70; ಸರ್ಕಾರಕ್ಕೆ ಶೇ.30 ರಷ್ಟು
- ನನಗೆ ದೊರಕಿರುವ ಅಧಿಕಾರ, ಅವಕಾಶ ಜನಸೇವೆಗೆ
- ಕೊಟ್ಟ ಮಾತನ್ನು ಈಡೇರಿಸುವವನೇ ನಿಜವಾದ ನಾಯಕ
- ಸರ್ಕಾರದ ಶಿಕ್ಷಣ ಕ್ರಾಂತಿಗೆ ಮಠಮಾನ್ಯಗಳು ಕೈಜೋಡಿಸಿವೆ
- ನಾಡಿನ ನೆಲ, ಜಲ, ಭಾಷೆಗಳ ವಿಚಾರಗಳು ಪಕ್ಷ, ಧರ್ಮ ಜಾತಿಗೆ ಸೇರಿಲ್ಲ
- ಮಹಾರಾಷ್ಟ್ರದಲ್ಲಿ ಗ್ಯಾರಂಟಿ ಘೋಷಿಸಿ, ನುಡಿದಂತೆ ನಡೆಯಲಿಲ್ಲ




**ಮೈಸೂರು, ಆ.29:** "ಸರ್ಕಾರಿ ರಸ್ತೆಗಳ ಇಕ್ಕೆಲಗಳಲ್ಲಿ ಇರುವ ರೈತರ ಹಾಗೂ ಸರ್ಕಾರಿ ಜಮೀನಿನಲ್ಲಿ ಅರಣ್ಯ ಇಲಾಖೆಯಿಂದ ತೇಗದ ಸಸಿಗಳನ್ನು ನೆಟ್ಟು ರೈತರೇ ಪೋಷಿಸುವ 'ತೇಗದ ಸಿರಿ' ಯೋಜನೆ ಜಾರಿಗೆ ತರಲಾಗುವುದು. ಈ ಯೋಜನೆಯಡಿ ವರ್ಷಕ್ಕೆ 1 ಕೋಟಿ ತೇಗದ ಸಸಿ ನೆಡಲಾಗುವುದು ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಮೈಸೂರಿನ ಸುತ್ತೂರು ಶಾಖಾಮಠದಲ್ಲಿ ಶನಿವಾರ ನಡೆದ ಪೂಜ್ಯ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 111 ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

"ಸರ್ಕಾರಿ ರಸ್ತೆಗಳ ಅಕ್ಕಪಕ್ಕದ ಪ್ರತಿಯೊಬ್ಬರ ಜಮೀನಿನಲ್ಲೂ ತೇಗದ ಸಸಿಗಳನ್ನು ನೆಡಬೇಕು. ಅಲ್ಲದೇ, ಜಮೀನಿನ ಮಾಲೀಕರು ಆ ತೇಗದ ಸಸಿಯ ನಿರ್ವಹಣೆ ಹೊರಬೇಕು. ಅದರಿಂದ ಬರುವ ಲಾಭವನ್ನು ಶೇ.70 ರಷ್ಟು ರೈತರು ಅಥವಾ ಭೂ ಮಾಲೀಕರಿಗೆ ಮತ್ತು ಸರ್ಕಾರಕ್ಕೆ ಶೇ.30ರಷ್ಟು ಹಂಚಲಾಗುವ ವಿಶಿಷ್ಟ ಯೋಜನೆಯನ್ನು ರೂಪಿಸಲಾಗುತ್ತಿದೆ" ಎಂದರು.

"ಇದು ಸರ್ಕಾರ ಮತ್ತು ಭೂಮಾಲೀಕರ ಪರಸ್ಪರ ಸಹಕಾರದಿಂದ ರಾಜ್ಯದ ಅರಣ್ಯ ಸಂಪತ್ತು ಹೆಚ್ಚಿಸುವ ವಿಶಿಷ್ಟ ಯೋಜನೆಯಾಗಿದೆ. ಮುಂದಿನ 25 ವರ್ಷಕ್ಕೆ ರಾಜ್ಯದಲ್ಲಿ ಹಸಿರು ಸಂಪತ್ತಾಗಿ ರೂಪುಗೊಳ್ಳುತ್ತದೆ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮೀಜಿಯವರು 5 ಕೋಟಿ ಸಸಿಗಳನ್ನು ನೆಡುವ ಕಾರ್ಯಕ್ರಮ ವನ್ನು ರೂಪಿಸಿದ್ದರು. ಅದರಂತೆ ಈಗ ಈ ಕಾರ್ಯಕ್ರಮ ರೂಪಿಸಲಾಗಿದೆ" ಎಂದರು.

ಅರಣ್ಯ ಇಲಾಖೆ, ಹಾಗೂ ಖಾಸಗಿ ನರ್ಸರಿಗಳಿಗೆ ತೇಗದ ಸಸಿಗಳನ್ನು ಬೆಳೆಸುವಂತೆ ಹೇಳಲಾಗುವುದು. ಅರಣ್ಯ ಅಧಿಕಾರಿಗಳು ಈ ಆಲೋಚನೆಯಿಂದ ರಾಜ್ಯದಲ್ಲಿ ಹಸಿರು ಹೆಚ್ಚಲಿದೆ ಎಂದಿದ್ದಾರೆ ಎಂದರು.

**ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೂ ಅನುಕೂಲವಾಗಲಿದೆ:**

ಚೆನ್ನೈನಲ್ಲಿ ಕೇಂದ್ರ ಗೃಹಸಚಿವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ, ಮೇಕೆದಾಟು ಯೋಜನೆ ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ, ತಮಿಳುನಾಡಿಗೂ ಅನುಕೂಲ ವಾಗಲಿದೆ ಎಂಬುದನ್ನು ಮನವರಿಕೆ ಮಾಡಿದ್ದೇನೆ. ಈ ಬಗ್ಗೆ ತಮಿಳುನಾಡು ಮುಖ್ಯಮಂತ್ರಿಗಳು ಚರ್ಚೆಗೆ ಮುಂದಾಗಿದ್ದಾರೆ. ತುಂಗಭದ್ರಾ ವಿಚಾರದಲ್ಲಿ ತೆಲಂಗಾಣ, ಆಂಧ್ರ ಜೊತೆ ಸೇರಿ ಚರ್ಚಿಸಲಾಗಿದೆ. ಆಲಮಟ್ಟಿ, ಕೆಆರ್‌ಎಸ್‌ನಲ್ಲಿ ಹೂಳು ಎತ್ತಲು ಕೇಂದ್ರ ಸರ್ಕಾರ ಹೊಸ ನೀತಿ ರೂಪಿಸುವುದಾಗಿ ತಿಳಿಸಿದೆ. ಮೊದಲ ಬಾರಿಗೆ ಮೂರು ರಾಜ್ಯದ ಮುಖ್ಯಮಂತ್ರಿಗಳು ಸೇರಿ ಅಂತರಾಜ್ಯ ನೀರಾವರಿ ವಿಚಾರದಲ್ಲಿ ಒಮ್ಮತಕ್ಕೆ ಬಂದಿರುವುದು, ಐತಿಹಾಸಿಕ ಬೆಳವಣಿಗೆ ಎಂದರು.

**ಮಠಗಳು ಸಮಾಜದ ಶಾಂತಿ ಸೌಹಾರ್ದಕ್ಕೆ ಮಾರ್ಗದರ್ಶಕ:**

"ಕಿರಿಯ ವಯಸ್ಸಿನಲ್ಲಿಯೇ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿ ತ್ರಿವಿಧ ದಾಸೋಹಗಳಲ್ಲಿ ಸಾರ್ಥಕತೆಯನ್ನು ಕಂಡವರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಇವರ ಜಯಂತೋತ್ಸವದಲ್ಲಿ ಭಾಗವಹಿಸಿದ್ದು ನನ್ನ ಸೌಭಾಗ್ಯ. ಸಾಂಸ್ಕೃತಿಕ, ಸಾಮಾಜಿಕ ಸೇವೆಯಲ್ಲಿ ನಿರತರಾದ ಮಹನೀಯರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ" ಎಂದರು.

"ಹೊಟ್ಟೆ ಹಸಿವಿಗೆ, ಮನಸ್ಸಿನ ಹಸಿವಿಗೆ ಪ್ರಾರ್ಥನೆ ಅಗತ್ಯ. ಸಮಾಜದಲ್ಲಿ ಹಲವು ಧರ್ಮಗಳಿದ್ದರೂ ತತ್ವ ಒಂದೇ. ದೇವನೊಬ್ಬ ನಾಮ ಹಲವು ಎಂಬುದನ್ನು ನಾನು ನಂಬಿದ್ದೇನೆ. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದು ಹೇಳುತ್ತಿರುತ್ತೇನೆ. ನಮ್ಮ ಬದುಕಿನಲ್ಲಿ ಕಷ್ಟಬಂದಾಗ ದೇವರನ್ನು ಪ್ರಾರ್ಥಿಸುತ್ತೇವೆ. ಮನಸ್ಸು ಆರೋಗ್ಯವಾಗಿದ್ದರೆ ಸಂಸ್ಕಾರ, ಮಠಗಳು ಸರಿಯಿದ್ದರೆ ಉತ್ತಮ ಸಮಾಜ, ಮಠಗಳು ಸಮಾಜದ ಶಾಂತಿ ಸೌಹಾರ್ದಕ್ಕೆ ಮಾರ್ಗದರ್ಶನ ನೀಡುತ್ತಾ ಬಂದಿವೆ" ಎಂದರು.

**ವಿವಿಧ ಜಾತಿವರ್ಗಗಳ ಜನರಿಗೆ ಮಠಗಳಿಂದ ಅನುಕೂಲ:**

"ಜಾತಿ–ವರ್ಗಗಳ ಭೇದವಿಲ್ಲದೇ ಮಠಗಳಿಂದ ಜನರು ಅನುಕೂಲ ಕಾಣುತ್ತಿದ್ದಾರೆ. ದಕ್ಷಿಣ ಭಾರತದಲ್ಲಿನ ಶಿಕ್ಷಣ ಕ್ರಾಂತಿಗೆ ಮಠ–ಮಾನ್ಯಗಳು ಮಹತ್ತರ ಕೊಡುಗೆ ನೀಡಿದೆ. ಕರ್ನಾಟಕ ಶೈಕ್ಷಣಿಕ ಕೇಂದ್ರ. ಇಲ್ಲಿನ ಜ್ಞಾನಸಂಪತ್ತು, ಮಾನವ ಸಂಪನ್ಮೂಲಗಳು ಉತ್ತಮವಾಗಿವೆ ಎಂದು ಅನೇಕ ಮಹನೀಯರು ತಿಳಿಸಿದ್ದಾರೆ. ರಾಜ್ಯದಲ್ಲಿ 46,302 ಸರ್ಕಾರಿ ಪ್ರಾಥಮಿಕ ಶಾಲೆ, 24,000 ಸಾವಿರ ಖಾಸಗಿ ಶಾಲೆಗಳಿವೆ. ಅದರಲ್ಲಿ 36 ಲಕ್ಷ ವಿದ್ಯಾರ್ಥಿಗಳು ಸರ್ಕಾರಿ ಶಾಲೆಯಲ್ಲಿ ಹಾಗೂ 57 ಲಕ್ಷ ವಿದ್ಯಾರ್ಥಿಗಳು ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಮಠಮಾನ್ಯಗಳು, ಸರ್ಕಾರದ ಶಿಕ್ಷಣ ಕ್ರಾಂತಿಗೆ ಕೈಜೋಡಿಸದಿದ್ದರೆ, ಕರ್ನಾಟಕವನ್ನು ಅಭಿವೃದ್ಧಿಶೀಲ ರಾಜ್ಯವಾಗಿಸಲು ಸಾಧ್ಯವಾಗುತ್ತಿರಲಿಲ್ಲ. ಸರ್ಕಾರವೊಂದರಿಂದಲೇ ಸಾಧ್ಯವಾಗದ ಕೆಲಸದಲ್ಲಿ ಮಠಮಾನ್ಯಗಳೂ ಕೈಜೋಡಿಸಿವೆ" ಎಂದರು.

**ನಮ್ಮ ನೀರು ನಮ್ಮ ಹಕ್ಕು ಹೋರಾಟಕ್ಕೆ ಆಶೀರ್ವದಿಸಿದ್ದ ಸುತ್ತೂರು ಶ್ರೀಗಳು:**

"ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾದ ನಂತರ ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದಿದ್ದೆ. ನಮ್ಮ ನೀರು ನಮ್ಮ ಹಕ್ಕು ಹೋರಾಟಕ್ಕೆ ಸುತ್ತೂರು ಶ್ರೀಗಳು ಬೆಂಬಲ ಸೂಚಿಸಿದ್ದರು. ಈ ಹೋರಾಟ ಯಶಸ್ವಿಯಾಯಿತು. ಸುಪ್ರೀಂ ಕೋರ್ಟ್ ಕೂಡ, ಕರ್ನಾಟಕದಲ್ಲಿ ಮೇಕೆದಾಟು ಯೋಜನೆ ಕೈಗೊಳ್ಳಲು ಯಾವುದೇ ರಾಜ್ಯದ ಅನುಮತಿ ಬೇಕಿಲ್ಲ. ಈ ಯೋಜನೆಯನ್ನು ಕೈಗೊಳ್ಳಬಹುದು ಎಂದು ಹೇಳಿತು. ಇದೇ ಉತ್ತರವನ್ನು ಕೇಂದ್ರ ಸರ್ಕಾರವೂ ಸದನದಲ್ಲಿ ತಿಳಿಸಿದೆ" ಎಂದರು.

**ಧರ್ಮ ಎಂದರೆ ಮನುಷ್ಯತ್ವ, ದಾಸೋಹವೆಂದರೆ ಮನುಷ್ಯತ್ವದ ಬೆಳವಣಿಗೆ:**

"ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು ನನ್ನ ಕಷ್ಟಸುಖಗಳಲ್ಲಿ ನನಗೆ ಮಾರ್ಗದರ್ಶನ ಮಾಡಿದ್ದಾರೆ. ಮಾನವ ಧರ್ಮವೇ ಹಿರಿದು, ಮಾನವೀಯತೆಯೇ ಪರಮ ಧರ್ಮ ಎಂಬ ಶ್ರೀಗಳ ಮಾರ್ಗ ದರ್ಶನವನ್ನು ಪಾಲಿಸುತ್ತಾ ಬಂದಿದ್ದೇನೆ. ಜಾತಿಧರ್ಮಗಳ ಭೇದ ಎಣಿಸದೆ ಸಮಾಜದ ಐಕ್ಯತೆಗೆ ಒತ್ತು ನೀಡಬೇಕು. ಧರ್ಮ ಎಂದರೆ ಮನುಷ್ಯತ್ವ, ದಾಸೋಹವೆಂದರೆ ಮನುಷ್ಯತ್ವದ ಬೆಳವಣಿಗೆ" ಎಂದು ಹೇಳಿದರು.

"ನಮ್ಮದು ಗುರುಪರಂಪರೆಯಾಗಿದ್ದು, ಶ್ರೀಗಳು ಕಿರಿಯ ವಯಸ್ಸಿನಲ್ಲಿಯೇ ಅಕ್ಷರ ದಾಸೋಹವನ್ನು ಕೈಗೊಂಡವರು. ವಿದ್ಯಾ ದದಾತಿ ವಿನಯಂ ಎಂಬ ಶ್ಲೋಕದಂತೆ ವಿದ್ಯೆಯಿದ್ದವನಿಗೆ ವಿನಯ, ಯೋಗ್ಯತೆ, ಸಂಪತ್ತಿನ ಜೊತೆಗೆ ಧರ್ಮದ ಹಾದಿಯಲ್ಲಿ ನಡೆಯುವ ಮಾರ್ಗದರ್ಶನ ನೀಡುತ್ತದೆ. ನಮಗೆಲ್ಲರಿಗೂ ಮಾನವೀಯತೆ ಮುಖ್ಯ.

"ಶ್ರೀಮಠಗಳು ಸಮಾಜದ ಋಣವನ್ನು ತೀರಿಸುತ್ತಿವೆ. ಮನುಷ್ಯನ ತನ್ನ ನಾಲ್ಕು ಋಣವನ್ನು ತೀರಿಸುವಂತೆ , ಶ್ರೀಗಳು ಈ ಋಣಗಳನ್ನು ಧರ್ಮಕಾರ್ಯಗಳ ಮೂಲಕ ತೀರಿಸುತ್ತಿದ್ದಾರೆ. ಧರ್ಮೋಪಕಾರಗಳು ನಮ್ಮ ಬದುಕಾಗಬೇಕು. ದೇವರು ಅವಕಾಶಗಳನ್ನು ಕೊಡುತ್ತಾನೆ. ಅಂತೆಯೇ ನನಗೆ ದೊರಕಿರುವ ಜನರಿಗೆ ಸೇವೆ ಮಾಡುವ ಅವಕಾಶವನ್ನು ಬಳಸಿಕೊಳ್ಳುವ ಆಶಯವಿದೆ" ಎಂದರು.

**ಕಾಯಕದಿಂದ ನಾಯಕತ್ವ:**

"ಕಾಯಕದಿಂದ ನಾಯಕತ್ವ ಸಿಗುತ್ತದೆ. ಅಧಿಕಾರವೆಂಬುದು ಶಕ್ತಿಯ ಸಂಕೇತವಲ್ಲ, ಜವಾಬ್ದಾರಿಯ ಸಂಕೇತ ಎಂಬುದನ್ನು ನಂಬಿರುವವನು ನಾನು. ನನಗೆ ದೊರಕಿರುವ ಅಧಿಕಾರ, ಜನಸೇವೆಗೆ ದೊರಕಿರುವ ಅವಕಾಶ ಎಂದರು. ರಾಜ್ಯದಲ್ಲಿ 72 ವೈದ್ಯಕೀಯ ಕಾಲೇಜಿದ್ದು, ಸಾವಿರಾರು ವೈದ್ಯರು ಪ್ರತಿ ವರ್ಷ ಸಿದ್ದರಾಗುತ್ತಿದ್ದಾರೆ. ವರ್ಷಕ್ಕೆ ಒಂದು ಲಕ್ಷಕ್ಕೂ ಹೆಚ್ಚು ಇಂಜಿನಿಯರ್ ಗಳು ತಯಾರಾಗುತ್ತಾರೆ. ಬೆಂಗಳೂರಿನಲ್ಲಿ 26 ಲಕ್ಷ ಇಂಜಿನಿಯರ್ಗಳು ಕೆಲಸ ಮಾಡುತ್ತಿದ್ದಾರೆ. ಇಡೀ ವಿಶ್ವವೇ ಬೆಂಗಳೂರಿನತ್ತ ಗಮನ ಹರಿಸುವಂತಾಗಲು ಇಂತಹ ಮಠಮಾನ್ಯಗಳೂ ಕಾರಣ. ಇಂತಹ ಮಠಮಾನ್ಯಗಳಿಗೆ ಸರ್ಕಾರ ಎಲ್ಲ ರೀತಿಯ ಸಹಕಾರ ನೀಡಲಿದೆ ಎಂದರು.

# ಮಂಡ್ಯ ಜಿಲ್ಲೆಯಲ್ಲಿ 2538ಕ್ಕೂ ಅಧಿಕ ಗ್ಯಾರಂಟಿ ಸದಸ್ಯರ ನೇಮಕ ಶೀಘ್ರ: ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ, ಶಾಸಕ ದಿನೇಶ್ ಗೂಳಿಗೌಡ

**ವಾರ್ಡ್, ಗ್ರಾಮ ಪಂಚಾಯಿತಿ ಮಟ್ಟದಲ್ಲಿ 423 ಗ್ಯಾರಂಟಿ ಸಮಿತಿಗಳ ರಚನೆಗೆ ವೇಗ**

**ಪ್ರತಿ ಗ್ಯಾರಂಟಿ ಸಮಿತಿಯಲ್ಲಿ 6 ಸದಸ್ಯರ ನೇಮಕ**

**ಗ್ಯಾರಂಟಿ ಯೋಜನೆಗಳಿಂದ ಅರ್ಹರು ವಂಚಿತರಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಸದಸ್ಯರ ನೇಮಕಕ್ಕೆ ಸಿಎಂ ಡಿ.ಕೆ.ಶಿವಕುಮಾರ್ ಸೂಚನೆ**

**ಹತ್ತು ದಿನದೊಳಗೆ ಪಟ್ಟಿ ತಯಾರಿಸುವಂತೆ ಜಿಲ್ಲಾ, ತಾಲೂಕು ಸಮಿತಿ ಸದಸ್ಯರಿಗೆ ಸೂಚನೆ**



**ಮಂಡ್ಯ, ಆ.29:** ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪುವಂತೆ ಮಾಡಲು ಜಿಲ್ಲೆಯಲ್ಲಿ 2538ಕ್ಕೂ ಅಧಿಕ ಗ್ಯಾರಂಟಿ ಸದಸ್ಯರನ್ನು ನೇಮಕ ಮಾಡುವ ಕಾರ್ಯ ತ್ವರಿತವಾಗಿ ಆಗಬೇಕಿದ್ದು ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ಪಟ್ಟಿ ಅಂತಿಮಗೊಳಿಸಬೇಕೆಂದು ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ಶಾಸಕರಾದ ದಿನೇಶ್ ಗೂಳಿಗೌಡ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಸಮಿತಿ ಸದಸ್ಯರಿಗೆ ಸೂಚನೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಈಗಾಗಲೇ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಗ್ಯಾರಂಟಿ ಸಮಿತಿ ರಚನೆ ಮಾಡಲಾಗಿದೆ. ಇದೀಗ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರತಿ ವಾರ್ಡ್ ಅಥವಾ ಪಂಚಾಯಿತಿಗೆ 6 ಜನರನ್ನು ಒಳಗೊಂಡ ಗ್ಯಾರಂಟಿ ಸದಸ್ಯರನ್ನು ನೇಮಕ ಮಾಡಬೇಕೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ ನೀಡಿರುವುದರಿಂದ ಜಿಲ್ಲಾ ಮತ್ತು ತಾಲೂಕು ಸಮಿತಿ ಸದಸ್ಯರು 10 ದಿನದೊಳಗೆ ಸದಸ್ಯರ ಪಟ್ಟಿ ಸಿದ್ಧಪಡಿಸಿ ಕೊಡಬೇಕು ಎಂದು ಹೇಳಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ 2 ನಗರಸಭೆ (66 ವಾರ್ಡ್), 6 ಪುರಸಭೆ (115 ವಾರ್ಡ್), 1 ಪಟ್ಟಣ ಪಂಚಾಯತಿ (13 ವಾರ್ಡ್) ಹಾಗೂ 229 ಗ್ರಾಮ ಪಂಚಾಯತಿಗಳಲ್ಲಿ 423 ಗ್ಯಾರಂಟಿ ಸಮಿತಿಗಳನ್ನು ರಚಿಸಲಾಗುತ್ತಿದೆ. ಒಂದು ಸಮಿತಿಯಲ್ಲಿ 6 ಜನ ಗ್ಯಾರಂಟಿ ಸದಸ್ಯರನ್ನು ಒಳಗೊಂಡಂತೆ 2538ಕ್ಕೂ ಅಧಿಕ ಸದಸ್ಯರನ್ನು ನೇಮಕ ಮಾಡಬೇಕಿದೆ.

ಪ್ರತಿ ಸಮಿತಿಯಲ್ಲಿ ಎಸ್‌ಸಿ/ಎಸ್‌ಟಿ–1, ಅಲ್ಪಸಂಖ್ಯಾತರು–1, ಮಹಿಳೆಯರು2, ಹಿಂದುಳಿದ ವರ್ಗ–1 ಹಾಗೂ ಸಾಮಾನ್ಯ ವರ್ಗ–1 ಸದಸ್ಯರಿಗೆ ಪ್ರಾತಿನಿಧ್ಯ ಕಲ್ಪಿಸಲಾಗುತ್ತಿದೆ. ಅಲ್ಪಸಂಖ್ಯಾತರ ಪ್ರಾತಿನಿಧ್ಯ ಲಭ್ಯವಿಲ್ಲದ ಸಂದರ್ಭದಲ್ಲಿ ಸಾಮಾನ್ಯ ವರ್ಗದಿಂದ ಸದಸ್ಯರನ್ನು ನೇಮಿಸಲು ಅವಕಾಶವಿದೆ ಎಂದು ಹೇಳಿದ್ದಾರೆ.

ಸ್ಥಳೀಯ ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನವನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡುವುದು, ಫಲಾನುಭವಿಗಳ ಸಮಸ್ಯೆಗಳನ್ನು ಗುರುತಿಸಿ ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತಂದು ಪರಿಹರಿಸುವುದು ಹಾಗೂ ಯೋಜನೆಗಳಿಂದ ಅರ್ಹರು ವಂಚಿತರಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಸಮಿತಿಗಳನ್ನು ರಚನೆ ಮಾಡಲಾಗುತ್ತಿದೆ. ಈ ಕೂಡಲೇ ಸಮಿತಿ ಸದಸ್ಯರನ್ನು ನೇಮಕ ಮಾಡುವ ಕುರಿತು ಶೀಘ್ರದಲ್ಲೇ ಪಟ್ಟಿ ತಯಾರಿಸಿ ರಾಜ್ಯ ಸಮಿತಿಗೆ ಸಲ್ಲಿಸಬೇಕೆಂದು ಹೇಳಿದ್ದಾರೆ.

| ನಗರಸಭೆ, ಪುರಸಭೆ ಮಾಹಿತಿ |
|---|
| ಮಂಡ್ಯ ನಗರಸಭೆ–35 ವಾರ್ಡ್ |
| ಮದ್ದೂರು ನಗರಸಭೆ–31 ವಾರ್ಡ್ |
| ಮಳವಳ್ಳಿ ಪುರಸಭೆ–23 ವಾರ್ಡ್ |
| ಶ್ರೀರಂಗಪಟ್ಟಣ ಪುರಸಭೆ–23 ವಾರ್ಡ್ |
| ಕೆ.ಆರ್.ಪೇಟೆ ಪುರಸಭೆ–23 ವಾರ್ಡ್ |
| ಪಾಂಡವಪುರ ಪುರಸಭೆ–23 ವಾರ್ಡ್ |
| ನಾಗಮಂಗಲ ಪುರಸಭೆ–23 ವಾರ್ಡ್ |
| ಬೆಳ್ಳೂರು ಪಟ್ಟಣ ಪಂಚಾಯತಿ–23 ವಾರ್ಡ್ |
| 229 ಗ್ರಾಮ ಪಂಚಾಯತಿ |
| ಮದ್ದೂರು: 38 |
| ಕೆ.ಆರ್.ಪೇಟೆ: 34 |
| ಮಳವಳ್ಳಿ: 39 |
| ಮಂಡ್ಯ ತಾಲೂಕು: 46 |
| ನಾಗಮಂಗಲ: 27 |
| ಪಾಂಡವಪುರ: 24 |
| ಶ್ರೀರಂಗಪಟ್ಟಣ: 21 |

**119 ಸದಸ್ಯರ ಜೊತೆಗೆ 2538 ಸದಸ್ಯರ ನೇಮಕ**

ಪ್ರಸ್ತುತ ರಾಜ್ಯ ಸರ್ಕಾರ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಗ್ಯಾರಂಟಿ ಸಮಿತಿ ರಚನೆ ಮಾಡಿದೆ. ಮಂಡ್ಯ ಜಿಲ್ಲೆಯಲ್ಲಿ 21 ಸದಸ್ಯರನ್ನು ಒಳಗೊಂಡ ಜಿಲ್ಲಾ ಸಮಿತಿ ಜೊತೆಗೆ ಪ್ರತಿ ತಾಲೂಕಿನಲ್ಲಿ 14 ಸದಸ್ಯರನ್ನು ಒಳಗೊಂಡ ತಾಲೂಕು ಸಮಿತಿ ಸದಸ್ಯರು ಸೇರಿದಂತೆ 119 ಗ್ಯಾರಂಟಿ ಸಮಿತಿ ಸದಸ್ಯರನ್ನು ನೇಮಿಸಲಾಗಿದೆ. ಈಗ ವಾರ್ಡ್ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ 2538 ಸದಸ್ಯರನ್ನು ನೇಮಕ ಮಾಡಬೇಕಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಗ್ಯಾರಂಟಿ ಸಮಿತಿ ಸದಸ್ಯರನ್ನು ನೇಮಕ ಮಾಡುವುದರಿಂದ ಜಿಲ್ಲೆಯ ಗ್ಯಾರಂಟಿ ಸಮಿತಿ ಸದಸ್ಯರ ಸಂಖ್ಯೆ 2657ಕ್ಕೆ ಏರಿಕೆಯಾಗಲಿದೆ. ಇದರಿಂದ ಪ್ರತಿಯೊಂದು ಅರ್ಹ ಕುಟುಂಬಕ್ಕೂ ಗ್ಯಾರಂಟಿ ಯೋಜನೆಯ ಪ್ರಯೋಜನ ತಲುಪಲಿದ್ದು ಯಾವುದೇ ಅರ್ಹ ಫಲಾನುಭವಿ ಯೋಜನೆಯಿಂದ ವಂಚಿತರಾಗುವುದಿಲ್ಲ ಎಂದು ದಿನೇಶ್ ಗೂಳಿಗೌಡ ಹೇಳಿದ್ದಾರೆ.

# ಗೃಹಲಕ್ಷ್ಮಿಗೆ ಬಯೋಮೆಟ್ರಿಕ್, ಫೇಸ್ ಅಥೆಂಟಿಕೇಶನ್ ಮೂಲಕ ಸಮಗ್ರ ಮರುಪರಿಶೀಲನೆಗೆ ಚಾಲನೆ: ದಿನೇಶ್ ಗೂಳಿಗೌಡ

- ಯೋಜನೆಯಲ್ಲಿ ಪಾರದರ್ಶಕತೆಗೆ ಸರ್ಕಾರದಿಂದ ಈ ಕ್ರಮ
- ಫಲಾನುಭವಿಗಳ ಫೇಸ್ ಅಥೆಂಟಿಕೇಶನ್, ಬಯೋಮೆಟ್ರಿಕ್ ಅಥೆಂಟಿಕೇಷನ್ ಕಡ್ಡಾಯ
- ಅನರ್ಹರನ್ನು ಕೈಬಿಟ್ಟು ನೈಜ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲು ಕ್ರಮ
- ಈ ಪ್ರಕ್ರಿಯೆಗೆ ಒಟ್ಟಾರೆಯಾಗಿ 20 ಕೋಟಿ ರೂ. ಅಂದಾಜು ವೆಚ್ಚಕ್ಕೆ ಅನುಮೋದನೆ
- ಸಿಬ್ಬಂದಿಯಿಂದ ಕಡ್ಡಾಯವಾಗಿ ಮನೆ–ಮನೆ ಭೇಟಿ, ಪರಿಶೀಲನೆ
- ಮೊಬೈಲ್ ಅಪ್ಲಿಕೇಶನ್ ಮೂಲಕ ಮಾಹಿತಿ ಸಂಗ್ರಹ
- ಸ್ಥಳೀಯ ಗ್ಯಾರಂಟಿ ಸಮಿತಿ ಸದಸ್ಯರ ನೇತೃತ್ವದಲ್ಲಿ ಪರಿಶೀಲನೆ
- ಕೇಂದ್ರಗಳಲ್ಲಿ ಬಯೋಮೆಟ್ರಿಕ್ ನೀಡಲು ಅವಕಾಶ.

**ಬೆಂಗಳೂರು, ಆ.29:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಗೃಹಲಕ್ಷ್ಮಿ' ಯೋಜನೆಯು ಮತ್ತಷ್ಟು ಪಾರದರ್ಶಕವಾಗಿ ಅರ್ಹ ಫಲಾನುಭವಿಗಳನ್ನು (ಮನೆ ಯಜಮಾನಿಯರು) ತಲುಪುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ, ಎಲ್ಲ ಫಲಾನುಭವಿಗಳ ಬಯೋಮೆಟ್ರಿಕ್ ಮತ್ತು ಫೇಶಿಯಲ್ ಅಥೆಂಟಿಕೇಷನ್ (ಮುಖ ದೃಢೀಕರಣ) ಮೂಲಕ ಮರುಪರಿಶೀಲನೆ ನಡೆಸಲು ರಾಜ್ಯ ಸರ್ಕಾರವು ಅಧಿಕೃತ ಆಡಳಿತಾತ್ಮಕ ಆದೇಶ ಹೊರಡಿಸಿದೆ ಎಂದು ವಿಧಾನ ಪರಿಷತ್ ಶಾಸಕ ಹಾಗೂ ರಾಜ್ಯ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಗೃಹಲಕ್ಷ್ಮಿ ಯೋಜನೆಯು ಯಶಸ್ವಿಯಾಗಿ ಮುನ್ನಡೆದಿದ್ದು, ಆಗಸ್ಟ್ 2023ರಿಂದ ಇಲ್ಲಿಯವರೆಗೆ 1.24 ಕೋಟಿ ಫಲಾನುಭವಿಗಳಿಗೆ ಒಟ್ಟು 32 ಕಂತುಗಳಲ್ಲಿ 76,951.13 ಕೋಟಿ ರೂ. ವೆಚ್ಚದ ಧನಸಹಾಯವನ್ನು ಪಾವತಿಸಲಾಗಿದೆ. ಆದರೆ, ಈ ಅವಧಿಯಲ್ಲಿ ಕೆಲವು ಫಲಾನುಭವಿಗಳು ಮರಣ ಹೊಂದಿದ ಪ್ರಕರಣಗಳು, ವಲಸೆ ಹೋದವರು ಹಾಗೂ ಫಲಾನುಭವಿಗಳು ಅಥವಾ ಅವರ ಪತಿ ಐಟಿ ಹಾಗೂ ಜಿಎಸ್‌ಟಿ ಪಾವತಿಸಲು ಪ್ರಾರಂಭಿಸಿದಂತಹ ನಿದರ್ಶನಗಳು ವರದಿಯಾಗಿವೆ. ಈ ಹಿನ್ನೆಲೆಯಲ್ಲಿ ಅನರ್ಹರನ್ನು ಕೈಬಿಟ್ಟು ಎಲ್ಲಾ ಅರ್ಹ ಫಲಾನುಭವಿಗಳಿಗೆ ಸಕಾಲದಲ್ಲಿ ಸೌಲಭ್ಯ ಮುಂದುವರಿಸಲು 20 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಈ ಮರುಪರಿಶೀಲನಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.



**ಸರ್ಕಾರದ ಆದೇಶದ ಪ್ರಮುಖ 4 ಪ್ರಮುಖಾಂಶಗಳು:**

**1. ಮರುಪರಿಶೀಲನಾ ಪ್ರಕ್ರಿಯೆ:** ಪ್ರಸ್ತುತ ಅನರ್ಹ ಫಲಾನುಭವಿಗಳನ್ನು ತೆಗೆದುಹಾಕಲು ನೋಂದಾಯಿತ ಫಲಾನುಭವಿಗಳ ಬಯೋಮೆಟ್ರಿಕ್ ಮತ್ತು ಫೇಶಿಯಲ್ ಅಥೆಂಟಿಕೇಷನ್ ಮೂಲಕ ಮರುಪರಿಶೀಲನೆ ನಡೆಸುವುದು.

**2. ತಂತ್ರಜ್ಞಾನ ಬಳಕೆ:** ಎಲೆಕ್ಟ್ರಾನಿಕ್ ಡೆಲಿವರಿ ಆಫ್ ಸಿಟಿಜನ್ಸ್ ಸರ್ವಿಸಸ್ ನಿರ್ದೇಶನಾಲಯ ಅಭಿವೃದ್ಧಿಪಡಿಸಿದ ವೆಬ್/ಮೊಬೈಲ್ ಆಪ್ ಮೂಲಕ ಮನೆಮನೆ ಸಮೀಕ್ಷೆ ಹಾಗೂ ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಇದನ್ನು ಕಾರ್ಯಗತಗೊಳಿಸುವುದು.

**3. ಅನುದಾನ ಮಿತಿ:** ಈ ಸಂಪೂರ್ಣ ಅರ್ಜಿ ಪರಿಶೀಲನೆ ಮತ್ತು ಸಮೀಕ್ಷಾ ಪ್ರಕ್ರಿಯೆಯನ್ನು ನಿಗದಿತ 20 ಕೋಟಿ ರೂ.ಗಳ ಅನುದಾನದ ಮಿತಿಯೊಳಗೆ ನಿರ್ವಹಿಸುವುದು.

**4. ಕಾರ್ಯವಿಧಾನ:** ಮುಖ್ಯಮಂತ್ರಿಯಿಂದ ಅನುಮೋದಿಸಲ್ಪಟ್ಟ ನಿರ್ದಿಷ್ಟ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನದ ಅನ್ವಯವೇ ಕಟ್ಟುನಿಟ್ಟಾಗಿ ಪರಿಶೀಲನೆ ಕೈಗೊಳ್ಳುವುದು.

**ಸಮೀಕ್ಷೆ ಮತ್ತು ಪರಿಶೀಲನೆಯ 12 ಹಂತದ ನಿರ್ದಿಷ್ಟ ಕಾರ್ಯವಿಧಾನ (SOP):**

**1. ಆಡಳಿತಾತ್ಮಕ ಜವಾಬ್ದಾರಿ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಾದರಿ ನಮೂನೆಗಳನ್ನು ಸಿದ್ಧಪಡಿಸಿ, ಮಾಸ್ಟರ್ ತರಬೇತುದಾರರ ಮೂಲಕ ಕ್ಷೇತ್ರ ಗಣತಿದಾರರಿಗೆ ತರಬೇತಿ ನೀಡಿ ಆಗಸ್ಟ್ 30, 2026 ರಿಂದ ಒಂದು ತಿಂಗಳೊಳಗೆ ಕ್ಷೇತ್ರ ಪರಿಶೀಲನೆ ಪೂರ್ಣಗೊಳಿಸಬೇಕು.

**2. ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳು:** ಸ್ಥಳೀಯ ಮಟ್ಟದಲ್ಲಿ ಸಮಿತಿಗಳು ಪರಿಶೀಲನಾ ಪ್ರಕ್ರಿಯೆಯನ್ನು ಸಕಾಲದಲ್ಲಿ ಯಶಸ್ವಿಯಾಗಿ ಪೂರ್ಣ ಗೊಳಿಸುವುದನ್ನು ಖಚಿತಪಡಿಸಬೇಕು.

**3. ಸಿಬ್ಬಂದಿ ನಿಯೋಜನೆ:** ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗ್ಯಾರಂಟಿ ಸಮಿತಿ ಸದಸ್ಯರನ್ನು ಸಜ್ಜುಗೊಳಿಸುವುದು. ನಗರ ಪ್ರದೇಶಗಳಲ್ಲಿ ಕಂದಾಯ ನಿರೀಕ್ಷಕರು, ಬಿಲ್ ಕಲೆಕ್ಟರ್‌ಗಳು, ಅಂಗನವಾಡಿ ಕಾರ್ಯಕರ್ತೆಯರನ್ನು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾ.ಪಂ. ಕಾರ್ಯದರ್ಶಿಗಳು, ಸಿಬ್ಬಂದಿಯನ್ನು ಗಣತಿದಾರರನ್ನಾಗಿ ನೇಮಿಸುವುದು.

**4. ಯೋಜನಾಬದ್ಧ ಆದೇಶ:** ಜಿಲ್ಲಾಧಿಕಾರಿಗಳು ಮತ್ತು ಸಿಇಒಗಳು ವಾರ್ಡ್ ಹಾಗೂ ಗ್ರಾಮವಾರು ಸ್ಪಷ್ಟ ನಿಯೋಜನೆಯೊಂದಿಗೆ ಗಣತಿದಾರರಿಗೆ ಲಿಖಿತ ಆದೇಶ ನೀಡಬೇಕು.

**5. ಮನೆ–ಮನೆ ಭೇಟಿ:** ಗ್ಯಾರಂಟಿ ಸಮಿತಿ ಸದಸ್ಯರು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಮನೆಗಳಿಗೆ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸಬೇಕು.

**6. ನಮೂನೆ ಭರ್ತಿ ಮತ್ತು ಸಂಗ್ರಹ:** ಫಲಾನುಭವಿಗಳು ಅಥವಾ ಅವರ ಕುಟುಂಬದ ಸದಸ್ಯರು ನಮೂನೆಯನ್ನು ಭರ್ತಿ ಮಾಡಿ ಅದೇ ಭೇಟಿಯ ಸಮಯದಲ್ಲಿ ಹಿಂತಿರುಗಿಸಬೇಕು.

**7. ಮನೆ ಭೇಟಿಯ ಕಡ್ಡಾಯತೆ:** ಯಾವುದೇ ಕಾರಣಕ್ಕೂ ನೇರಮನೆ ಭೇಟಿ ನೀಡುವುದನ್ನು ತಪ್ಪಿಸುವಂತಿಲ್ಲ, ಇದು ಕಡ್ಡಾಯವಾಗಿದೆ.

**8. ಮೊಬೈಲ್ ಆಪ್ ಹಾಗೂ ಜಿಪಿಎಸ್:** ಗಣತಿದಾರರು ಮೊಬೈಲ್ ಆಪ್ ಬಳಸಿ ಫಲಾನುಭವಿಯ ಫೋಟೋ ಅಥವಾ ಮನೆಯ ಫೋಟೋ ಹಾಗೂ ಸ್ವಯಂಚಾಲಿತ ಜಿಪಿಎಸ್ ನಿರ್ದೇಶಾಂಕಗಳನ್ನು ಸೆರೆಹಿಡಿಯಬೇಕು.

**9. ಡಿಜಿಟಲೀಕರಣ ಮತ್ತು ಮುಖ ದೃಢೀಕರಣ:** ಸ್ಥಳದಲ್ಲೇ ಮುಖದ ದೃಢೀಕರಣ ಹಾಗೂ ಮತದಾರರ ಗುರುತಿನ ಚೀಟಿ (ಇಕಖಅ) ವಿವರಗಳನ್ನು ಮೊಬೈಲ್ ಆಪ್‌ನಲ್ಲಿ ಡಿಜಿಟಲ್ ರೂಪದಲ್ಲಿ ದಾಖಲಿಸುವುದು.

**10. ವಿಶೇಷ ಪ್ರಕರಣಗಳ ದಾಖಲು:** ಫಲಾನುಭವಿಗಳು ವಲಸೆ ಹೋಗಿದ್ದರೆ, ಸ್ಥಳಾಂತರಗೊಂಡಿದ್ದರೆ ಅಥವಾ ಮೃತಪಟ್ಟಿದ್ದರೆ ಆ ಕುರಿತು ಆ?ಯಪ್‌ನಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

**11. ಪರ್ಯಾಯ ಮೋಡ್ ವ್ಯವಸ್ಥೆ:** ಮನೆ ಭೇಟಿಯ ವೇಳೆ ಮುಖ ದೃಢೀಕರಣ ವಿಫಲವಾದರೆ ಅಥವಾ ಲಭ್ಯವಿಲ್ಲದಿದ್ದರೆ ಹತ್ತಿರದ ನ್ಯಾಯಬೆಲೆ ಅಂಗಡಿ ಅಥವಾ ಒನ್ ಕೇಂದ್ರಗಳಿಗೆ ಭೇಟಿ ನೀಡಿ ಬಯೋಮೆಟ್ರಿಕ್ ಪೂರ್ಣಗೊಳಿಸಲು ಅವಕಾಶವಿದೆ.

**12. ನ್ಯಾಯಬೆಲೆ ಅಂಗಡಿ ದತ್ತಾಂಶ ಬಳಕೆ:** ಜುಲೈ 1, 2026ರ ನಂತರ ಪಡಿತರ ಪಡೆಯಲು ನ್ಯಾಯಬೆಲೆ ಅಂಗಡಿಯಲ್ಲಿ ಬಯೋಮೆಟ್ರಿಕ್ ನೀಡಿರುವ ಫಲಾನುಭವಿಗಳ ದತ್ತಾಂಶವನ್ನು ಆಹಾರ ಇಲಾಖೆಯಿಂದ ಪಡೆದು ಪರಿಶೀಲನೆಗೆ ಬಳಸಿಕೊಳ್ಳಲಾಗುತ್ತದೆ.

**ಅರ್ಹರಿಗೆ ಅನುಕೂಲ:**

ಮರುಪರಿಶೀಲನೆಯಿಂದ ಅನರ್ಹ ಫಲಾನುಭವಿಗಳನ್ನು ಗುರುತಿಸಿ, ಅರ್ಹರಿಗೆ ಮಾತ್ರ ಯೋಜನೆಯ ಸೌಲಭ್ಯ ಮುಂದುವರಿಸಲು ಅನುಕೂಲವಾಗಲಿದೆ ಎಂದು ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

## ಗೃಹಲಕ್ಷ್ಮಿಗೆ ಮೂರು ವರ್ಷದ ಸಂಭ್ರಮ

ಗುಲಾಬಿ ಬಣ್ಣದ ಬೆಳಕಿನಲ್ಲಿ ಕಂಗೊಳಿಸಲಿವೆ ವಿಧಾನಸೌಧ,ಸುವರ್ಣಸೌಧ, ಮೈಸೂರು ಅರಮನೆ! ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾದ ಗೃಹ ಲಕ್ಷ್ಮಿಗೆ ಮೂರು ವರ್ಷಗಳ ಸಂಭ್ರಮ.

ಈ ಸಂಭ್ರಮದ ಸವಿನೆನಪಿಗಾಗಿ ಬೆಂಗಳೂರಿನ ವಿಧಾನಸೌಧ, ಬೆಳಗಾವಿಯ ಸುವರ್ಣಸೌಧ, ಮೈಸೂರು ಅರಮನೆ,ಚಿತ್ರದುರ್ಗದ ಕಲ್ಲಿನಕೋಟೆ, ಹಂಪಿಯ ಕಲ್ಲಿನರಥ, ಮಂಗಳೂರಿನಲ್ಲಿರುವ ದಕ್ಷಿಣಕನ್ನಡ ಜಿಲ್ಲಾಧಿಕಾರಿ ಕಚೇರಿ ಕಟ್ಟಡ, ಬೆಳಗಾವಿ ಕಿತ್ತೂರು ಚೆನ್ನಮ್ಮ ವೃತ್ತಗಳು ಭಾನುವಾರ(ಆ.30) ಸಂಜೆ 6ರಿಂದ ರಾತ್ರಿ 10ರವರೆಗೆ ಗುಲಾಬಿ ಬಣ್ಣ (ಪಿಂಕ್ ಲೈಟ್)ದ ಬೆಳಕಿನಲ್ಲಿ ಕಂಗೊಳಿಸಲಿವೆ.

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಪ್ರತಿ ಮನೆಯ ಯಜಮಾನಿಗೆ ಪ್ರತಿ ತಿಂಗಳು ರೂ 2,000/– ನೀಡುವ ಮೂಲಕ ಮಹಿಳೆಯರು ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ನೆರವಾಗಿರುವ ಗೃಹಲಕ್ಷ್ಮೀ ಯೋಜನೆ ಜಾರಿಗೆ ಬಂದು ಇದೇ ಆ.30ಕ್ಕೆ ಮೂರು ವರ್ಷಗಳನ್ನು ಪೂರೈಸಲಿದೆ.

ಸರ್ಕಾರವು ಗೃಹಲಕ್ಷ್ಮೀ ಯೋಜನೆ ಮೂರು ವರ್ಷಗಳನ್ನು ಪೂರೈಸುತ್ತಿರುವ ಈ ಸಂದರ್ಭದಲ್ಲಿ ಮಹಿಳೆಯರ ಹೆಮ್ಮೆಯ ಸಂಕೇತವೆಂದು ಗುರುತಿಸಿರುವ ಗುಲಾಬಿ ಬಣ್ಣದ ಬೆಳಕಿನ ವ್ಯವಸ್ಥೆಯನ್ನು ಮಾಡಲಾಗಿದೆ. ಇದುವರೆಗೂ ಈ ಯೋಜನೆ ಅಡಿ 1.20ಕೋಟಿ ಫಲನುಭವಿಗಳ ಖಾತೆಗೆ 76500ಕೋಟಿಗೂ ಹೆಚ್ಚು ಹಣ ಪಾವತಿಸಲಾಗಿದೆ.

## ಸದನದಲ್ಲಿ ಪ್ರಶ್ನೆ ಕೇಳಿದ್ದ ಶಾಸಕ ದಿನೇಶ್ ಗೂಳಿಗೌಡ

ವಿಧಾನ ಪರಿಷತ್ ಸದಸ್ಯ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಸದನದಲ್ಲಿ ಈ ಬಗ್ಗೆ ಕೇಳಿದ್ದ ಪ್ರಶ್ನೆಗೆ ಉತ್ತರಿಸಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಗೃಹಲಕ್ಷ್ಮಿ ಯೋಜನೆಯಡಿ ನೋಂದಾಯಿತ ಫಲಾನುಭವಿಗಳಲ್ಲಿ ಜೂನ್ 2026ರ ಅಂತ್ಯದವರೆಗೆ 3,13,297 ಮಂದಿ ಮರಣ ಹೊಂದಿದ್ದು, ಅವರ ಪೈಕಿ 1,10,562 ಜನರ ಖಾತೆಗೆ ಮರಣದ ನಂತರವೂ ರೂ. 117.31 ಕೋಟಿ ಜಮೆಯಾಗಿರುವುದಾಗಿ ತಿಳಿಸಿದ್ದರು. ಈ ಹಣದ ದುರುಪಯೋಗ ತಡೆಯಲು ಮತ್ತು ಅರ್ಹರಿಗೆ ಮಾತ್ರ ಸೌಲಭ್ಯ ಸಿಗುವುದನ್ನು ಖಚಿತಪಡಿಸಲು, ಸೇವಾ ಸಿಂಧು ಕೇಂದ್ರಗಳು ಹಾಗೂ ಮನೆ–ಮನೆ ಸಮೀಕ್ಷೆಯ ಮೂಲಕ ಬಯೋಮೆಟ್ರಿಕ್/ಫೇಸ್ ಆಥೆಂಟಿಕೇಶನ್ ಬಳಸಿ ಯೋಜನೆಯ ಅರ್ಜಿಗಳ ಸಮಗ್ರ ಮರುಪರಿಶೀಲನೆ ನಡೆಸಲಾಗುವುದು ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದ್ದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಆಗಸ್ಟ್ 30 2026, ಭಾನುವಾರ

## ಒಳಪುಟಗಳಲ್ಲಿ

ಪ್ರತಿಭಾವಂತ ವಿದ್ಯಾರ್ಥಿಗಳೇ ನಮ್ಮ ಬೆಂಗಳೂರಿನ ಹೆಮ್ಮೆ-ಭವಿಷ್ಯ: ಸಚಿವ ಕೃಷ್ಣ ಬೈರೇಗೌಡ - ಪು.5

## ವೈಭವದ ಮೈಸೂರು ದಸರಾ ಆಚರಣೆ: ಸಿಎಂ



ಮೈಸೂರು, ಆ.29: ವಿಶ್ವವಿಖ್ಯಾತ ಮೈಸೂರು ದಸರಾವನ್ನು ಸರಳವಾಗಿ ಆಚರಿಸುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ (ಸ್ಪಷ್ಟಪಡಿಸಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ವಿಚಾರದಲ್ಲಿ ತಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಮತ್ತು ದಸರಾವನ್ನು ಅತ್ಯಂತ ವೈಭವದಿಂದಲೇ ಆಯೋಜಿಸಲಾಗುವುದು ಎಂದು ತಿಳಿಸಿದ್ದಾರೆ. ಪ್ರವಾಸೋದ್ಯಮದ ಬೆನ್ನೆಲುಬು ನಾಡಹಬ್ಬ ದಸರಾ–ಮೈಸೂರು ಸೇರಿದಂತೆ ಇಡೀ ರಾಜ್ಯದ ಪ್ರವಾಸೋದ್ಯಮ ಕ್ಷೇತ್ರವು ದಸರಾ ಮಹೋತ್ಸವದ ಮೇಲೆಯೇ ರೂಪುಗೊಂಡಿದೆ. ಹೀಗಿರುವಾಗ ಹಬ್ಬದ ಅದ್ದೂರಿತನವನ್ನು ತಗ್ಗಿಸಿದರೆ ಪ್ರವಾಸೋದ್ಯಮಕ್ಕೆ ಹಾಗೂ ಸ್ಥಳೀಯ ವ್ಯಾಪಾರಸ್ಥರಿಗೆ ದೊಡ್ಡ ಹೊಡೆತ ಬೀಳಲಿದೆ. ಆದ್ದರಿಂದ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ವೈಭವದ ಆಚರಣೆಯೇ ಸೂಕ್ತ ಎಂದಿದ್ದಾರೆ.ವಿಪಕ್ಷಗಳ ಆಕ್ಷೇಪಕ್ಕೆ ತಕ್ಕ ಪ್ರತ್ಯುತ್ತರ–ದಸರಾ ಆಚರಣೆಯ ವೆಚ್ಚದ ಕುರಿತು ಆಕ್ಷೇಪ ವ್ಯಕ್ತಪಡಿಸುತ್ತಿರುವ ವಿಪಕ್ಷಗಳಿಗೆ ತಿರುಗೇಟು ನೀಡಿದ ಅವರು, ರಾಜಕೀಯ ಕಾರಣಗಳಿಗಾಗಿ ನಾಡಹಬ್ಬದ ಆಚರಣೆಯಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದಿದ್ದಾರೆ. ಸಾಂಸ್ಕೃತಿಕ ಗೌರವ ಹಾಗೂ ರಾಜ್ಯದ ಹೆಮ್ಮೆಯ ಸಂಕೇತವಾಗಿರುವ ದಸರಾವನ್ನು ಯಶಸ್ವಿಯಾಗಿ ನಡೆಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದರು.

# ರಾಮಕೃಷ್ಣ ಹೆಗಡೆ ಜನ್ಮ ಶತಮಾನೋತ್ಸವ: ಉಪರಾಷ್ಟ್ರಪತಿ ಭಾಗಿ

### ಕಾರವಾರ ಮೆಡಿಕಲ್ ಕಾಲೇಜು-ಶಿವರಾಮ ಕಾರಂತ ಬಡಾವಣೆಯ ಪ್ರಮುಖ ರಸ್ತೆಗೆ ರಾಮಕೃಷ್ಣ ಹೆಗಡೆ ಹೆಸರು-ಪಂಚಾಯ್ತಿಗಳಿಗೆ ಹೆಗಡೆ ಹೆಸರಿನಲ್ಲಿ ಪ್ರಶಸ್ತಿ ಸಿಎಂ ಘೋಷಣೆ

ಬೆಂಗಳೂರು, ಆ.29: ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ ಅವರ ಹೆಸರನ್ನು ಶಾಶ್ವತಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಲವು ಮಹತ್ವದ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ ನಡೆದ ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ ಅವರ ಜನ್ಮ ಶತಮಾನೋತ್ಸವ ಸಮಾರಂಭವನ್ನು ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಅವರೊಂದಿಗೆ ಉದ್ಘಾಟಿಸಿದರು.



"ಉತ್ತರ ಕನ್ನಡ ಜಿಲ್ಲೆಯ ಮೆಡಿಕಲ್ ಕಾಲೇಜಿಗೆ ರಾಮಕೃಷ್ಣ ಹೆಗಡೆ ಅವರ ಹೆಸರಿಡುವ ನಿರ್ಧಾರವನ್ನು ಇದೇ ಸಂದರ್ಭದಲ್ಲಿ ಪ್ರಕಟಿಸಿದ ಅವರು, ಗ್ರಾಮೀಣ ಆಡಳಿತಕ್ಕೆ ಹೆಗಡೆ ನೀಡಿದ ಕೊಡುಗೆಯನ್ನು ಸ್ಮರಿಸಲು ಪ್ರತಿ ವರ್ಷ ಅವರ ಜನ್ಮದಿನದಂದು ರಾಮಕೃಷ್ಣ ಹೆಗಡೆ ಶ್ರೇಷ್ಠ ಪಂಚಾಯಿತಿ ಪ್ರಶಸ್ತಿ ನೀಡುವ ಕಾರ್ಯಕ್ರಮ ರೂಪಿಸುವಂತೆ ಆರ್‌ಡಿಪಿಆರ್ ಸಚಿವರೊಂದಿಗೆ ಚರ್ಚಿಸಿರುವುದಾಗಿ ಹಾಗೂ ಬೆಂಗಳೂರಿನ ಶಿವರಾಮ ಕಾರಂತ ಬಡಾವಣೆಯ ಪ್ರಮುಖ ರಸ್ತೆಯೊಂದಕ್ಕೆ ರಾಮಕೃಷ್ಣ ಹೆಗಡೆ ಹೆಸರಿಡಲು ತೀರ್ಮಾನಿಸಿರುವುದಾಗಿಯೂ" ಹೇಳಿದರು.

**ನಾಯಕರನ್ನು ಸೃಷ್ಟಿಸಿದ ನಾಯಕ:**

ರಾಮಕೃಷ್ಣ ಹೆಗಡೆ ಕೇವಲ ಅಧಿಕಾರ ನಡೆಸಿದ ನಾಯಕನಲ್ಲ; ಪಂಚಾಯತ್ತಿಂದ ಸಂಸತ್ತಿನವರೆಗೆ ಹೊಸ ನಾಯಕತ್ವವನ್ನು ಸೃಷ್ಟಿಸಿದ ನಾಯಕ ಎಂದು ಸಿಎಂ ಬಣ್ಣಿಸಿದರು. ಒಬ್ಬ ನಾಯಕನ ಕೆಲಸ ಕೇವಲ ಹಿಂಬಾಲಕರನ್ನು ಸೃಷ್ಟಿಸುವುದಲ್ಲ. ನಾಯಕರನ್ನು ಸೃಷ್ಟಿಸುವುದೇ ನಿಜವಾದ ನಾಯಕತ್ವ. ರಾಮಕೃಷ್ಣ ಹೆಗಡೆ ಅವರ ಮೂಲ ತತ್ವ ಇದೇ ಆಗಿತ್ತು ಎಂದು ಹೇಳಿದರು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕರ್ನಾಟಕದ ಪ್ರಯೋಗಗಳು ದೇಶಕ್ಕೆ ಮಾದರಿಯಾಗಿದ್ದವು.

ನಂತರ ರಾಜೀವ್ ಗಾಂಧಿ ಸರ್ಕಾರದ ಅವಧಿಯಲ್ಲಿ 73 ಮತ್ತು 74ನೇ ಸಂವಿಧಾನ ತಿದ್ದುಪಡಿ1ಗಳಿಗೆ ಈ ಚಿಂತನೆ ಪ್ರೇರಣೆಯಾಯಿತು" ಎಂದು ಅವರು ಸ್ಮರಿಸಿದರು. ಸಿದ್ದರಾಮಯ್ಯ, ಆರ್.ವಿ. ದೇಶಪಾಂಡೆ, ಬಸವರಾಜ ರಾಯರೆಡ್ಡಿ, ಬಿ.ಎಲ್. ಶಂಕರ್ ಸೇರಿದಂತೆ ಅನೇಕ ನಾಯಕರು ಹೆಗಡೆ ಅವರ ರಾಜಕೀಯ ಶಾಲೆಯೊಂದಿಗೆ ಬೆಳೆದವರು ಎಂದು ಅವರು ಉಲ್ಲೇಖಿಸಿದರು. "ಹೆಗಡೆ ಅವರು ಹಿಂಬಾಲಕರನ್ನು ಮಾತ್ರ ಸೃಷ್ಟಿಸಲಿಲ್ಲ; ನಾಯಕರನ್ನು ಸೃಷ್ಟಿಸಿದರು. ಇಲ್ಲಿ ಕುಳಿತಿರುವ ನೂರಾರು ನಾಯಕರು ಅದಕ್ಕೆ ಸಾಕ್ಷಿ," ಎಂದು ಡಿಕೆಶಿ ಹೇಳಿದರು.

**ಜಾತಿ ಮೀರಿ ಮೌಲ್ಯದ ರಾಜಕಾರಣ:**

"ಹೆಗಡೆ ಅವರು ಜಾತಿ ಆಧಾರಿತ ರಾಜಕಾರಣಕ್ಕೆ ಸೀಮಿತವಾಗದೆ ಮೌಲ್ಯಾಧಾರಿತ ರಾಜಕಾರಣ ಮತ್ತು ಸಾಮಾಜಿಕ ನ್ಯಾಯಕ್ಕೆ ಆದ್ಯತೆ ನೀಡಿದ್ದರು. ಅವರ ನಾಯಕತ್ವವನ್ನು ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಜನರು ಒಪ್ಪಿಕೊಂಡಿದ್ದರು. ಅಧಿಕಾರದಲ್ಲಿದ್ದಾಗಲೂ ಜನಸೇವೆ ಮತ್ತು ಅಭಿವೃದ್ಧಿಯನ್ನು ಕೇಂದ್ರವಾಗಿಟ್ಟುಕೊಂಡು ಕೆಲಸ ಮಾಡಿದ್ದರು" ಎಂದು ಹೇಳಿದರು.

**ಶಿಕ್ಷಣ ಕ್ಷೇತ್ರಕ್ಕೆ ಹೆಗಡೆ ಬಾಗಿಲು ತೆರೆದರು:**

ಕರ್ನಾಟಕದಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣದ ವಿಸ್ತರಣೆಗೆ ಹೆಗಡೆ ಅವರ ನೀತಿಗಳು ಸಹಕಾರಿಯಾದವು ಎಂದು ಹೇಳಿದರು. ಇಂದು ಕರ್ನಾಟಕದಲ್ಲಿ ವರ್ಷಕ್ಕೆ 13,940 ವೈದ್ಯರು ಹಾಗೂ 1.25 ಲಕ್ಷಕ್ಕೂ ಹೆಚ್ಚು ಎಂಜಿನಿಯರ್‌ಗಳು ರೂಪುಗೊಳ್ಳುತ್ತಿದ್ದಾರೆ ಎಂದು ಅವರು ಉಲ್ಲೇಖಿಸಿದರು. ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಕರ್ನಾಟಕದ ಪ್ರಮುಖ ಆಸ್ತಿ. ಖಾಸಗಿ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗೂ ಹೆಗಡೆ ಕಾಲದ ನೀತಿಗಳು ದಾರಿ ಮಾಡಿಕೊಟ್ಟವು. ಅದರ ಪರಿಣಾಮವಾಗಿ ಇಂದು ಕರ್ನಾಟಕ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ" ಎಂದರು.

**ಕನಕಪುರ ರಾಜಕೀಯದ ನೆನಪು:**

ತಮ್ಮ ರಾಜಕೀಯ ಜೀವನದ ಆರಂಭದ ದಿನಗಳನ್ನು ನೆನಪಿಸಿಕೊಂಡ ಶಿವಕುಮಾರ್, ಕನಕಪುರದಲ್ಲಿ ರಾಮಕೃಷ್ಣ ಹೆಗಡೆ ಮತ್ತು ಪಿಜಿಆರ್ ಸಿಂಧ್ಯಾ ಪ್ರಭಾವದ ನಡುವೆಯೇ ನಾನು ರಾಜಕೀಯಕ್ಕೆ ಬಂದೆ" ಎಂದು ಹೇಳಿದರು. "ಹೆಗಡೆ ಅವರ ಪ್ರಭಾವದ ಕಾಲದಲ್ಲೇ ರಾಜಕೀಯ ಜೀವನ ಆರಂಭಿಸಿದೆ. ಒಂದು ಚುನಾವಣೆಯಲ್ಲಿ ಸೋತಿದ್ದೇನೆ. ಇಲ್ಲದಿದ್ದರೆ ಇಂದು ಒಂಬತ್ತನೇ ಬಾರಿ ಶಾಸಕನಾಗಿರುತ್ತಿದ್ದೆ.

ಕನಕಪುರದಿಂದ ನಿರಂತರವಾಗಿ ಜನರ ಆಶೀರ್ವಾದ ಪಡೆಯುತ್ತಿರುವುದು ನನ್ನ ಸೌಭಾಗ್ಯ" ಎಂದು ಹೇಳಿದರು.

**ಹೆಗಡೆ ಹೆಸರಿನಲ್ಲಿ ಪಂಚಾಯತ್‌ಗೆ ಪ್ರಶಸ್ತಿ:**

ಪ್ರತಿವರ್ಷ ರಾಮಕೃಷ್ಣ ಹೆಗಡೆ ಜನ್ಮದಿನದ ಸಂದರ್ಭದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಪಂಚಾಯತ್‌ಗೆ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಯೋಜನೆ ರೂಪಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೂಚಿಸಲಾಗಿದೆ.

ಇದರ ಮೂಲಕ ಹೆಗಡೆ ಪಂಚಾಯತ್ ರಾಜ್ ಪರಿಕಲ್ಪನೆ ಹಾಗೂ ಗ್ರಾಮೀಣಾಭಿವೃದ್ಧಿಯ ಚಿಂತನೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶವಿದೆ ಎಂದರು.

**ರಾಮಕೃಷ್ಣ ಎರಡೂ ಗುಣಗಳಿದ್ದ ನಾಯಕ:**

"ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಹೆಗಡೆ ಅವರಲ್ಲಿ ರಾಮನ ಆದರ್ಶ ಮತ್ತು ಕೃಷ್ಣನ ರಾಜತಂತ್ರಎರಡೂ ಗುಣಗಳಿದ್ದವು ಎಂದು ಹೇಳಿದ್ದನ್ನು ಅವರು ಉಲ್ಲೇಖಿಸಿದರು. "ಹೆಗಡೆ ಅವರ ರಾಜಕೀಯ ಜೀವನದಿಂದ ಇಂದಿನ ನಾಯಕರು ಕಲಿಯಬೇಕಾದದ್ದು ಬಹಳಷ್ಟಿದೆ. ಅಧಿಕಾರವನ್ನು ಜನಸೇವೆಗೆ ದೊರೆತ ಅವಕಾಶವೆಂದು ಪರಿಗಣಿಸಬೇಕು ಎಂಬ ಅವರ ಸಂದೇಶ ಇಂದಿಗೂ ಪ್ರಸ್ತುತವಾಗಿದೆ" ಎಂದರು.

**ಹೆಗಡೆ ಆದರ್ಶದ ಹೆಜ್ಜೆಯಲ್ಲೇ ಸರ್ಕಾರ:**

ನಮ್ಮ ಸರ್ಕಾರ ರಾಮಕೃಷ್ಣ ಹೆಗಡೆ ಅವರ ಆಚಾರ–ವಿಚಾರ, ಮೌಲ್ಯಾಧಾರಿತ ರಾಜಕಾರಣ, ಪಂಚಾಯತ್ ರಾಜ್ ಮತ್ತು ಅಭಿವೃದ್ಧಿ ಚಿಂತನೆಗಳನ್ನು ಮುಂದುವರಿಸಿಕೊಂಡು ಹೋಗಲಿದೆ ಎಂದರು. ಮುಂದೆಯೂ ಹೆಗಡೆ ಅವರ ಆದರ್ಶ ಬದುಕಿನ ಆಚಾರ ವಿಚಾರಗಳನ್ನು ಪಾಲಿಸಿಕೊಂಡು ಸಾಗುತ್ತೇವೆ ಎಂದು ಪ್ರಲ್ಹಾದ್ ಜೋಶಿ ಹೇಳಿದರು.



ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಶನಿವಾರ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ರಾಮಕೃಷ್ಣ ಹೆಗಡೆ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ಭಾರತೀಯ ವಾಯುಸೇನೆಯ ವಿಶೇಷ ವಿಮಾನದ ಮೂಲಕ ಬೆಂಗಳೂರಿನ ಎಚ್.ಎ.ಎಲ್. ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ರಿಜ್ವಾನ್ ಅರ್ಷದ್ ಅವರು ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು.

## ಅಪರಾಧ ಪ್ರಕರಣಗಳನ್ನು ಹಿಂಪಡೆಯಲು ಪರಿಶೀಲನೆಗಾಗಿ ಸಂಪುಟ ಉಪಸಮಿತಿ ರಚನೆ

ಬೆಂಗಳೂರು, ಆ.29: ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿರುವ ಅಪರಾಧ ಪ್ರಕರಣಗಳನ್ನು ಹಿಂಪಡೆಯುವ ಕುರಿತು ಪರಿಶೀಲಿಸಿ ಶಿಫಾರಸುಗಳನ್ನು ನೀಡಲು ರಾಜ್ಯ ಸರ್ಕಾರ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಿದೆ. ಉಪಸಮಿತಿಯಲ್ಲಿ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರಾದ ಪ್ರಿಯಾಂಕ್ ಖರ್ಗೆ ಅಧ್ಯಕ್ಷರಾಗಿ ನೇಮಿಸಲಾಗಿದೆ.ಸಮಾಜ ಕಲ್ಯಾಣ ಸಚಿವ ಕೆ.ಎಚ್. ಮುನಿಯಪ್ಪ ಉಪಾಧ್ಯಕ್ಷರಾಗಿ ಕಾರ್ಯ0ನಿರ್ವಹಿಸಲಿದ್ದಾರೆ.

ಸದಸ್ಯರಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕೃಷ್ಣ ಬೈರೇಗೌಡ, ಪೌರಾಡಳಿತ ಸಚಿವ ಎಚ್.ಸಿ. ಬಾಲಕೃಷ್ಣ ಹಾಗೂ ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಒಳಗೊಂಡಿದ್ದಾರೆ.

## ಬಾಲ್ಯಸ್ನೇಹಿತ ಕ್ರೇಜಿಸ್ಟಾರ್ ರವಿಚಂದ್ರನ್ ವಿಧಾನಪರಿಷತ್ತಿಗೆ



ಬೆಂಗಳೂರು, ಆ.29: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬಾಲ್ಯದ ಸ್ನೇಹಿತ, ಕನ್ನಡದ ಹಿರಿಯ ನಟ, ನಿರ್ದೇಶಕ, ನಿರ್ಮಾಪಕ 'ಕ್ರೇಜಿಸ್ಟಾರ್'ವಿ. ರವಿಚಂದ್ರನ್ ಅವರನ್ನು ಕಾಂಗ್ರೆಸ್, ವಿಧಾನ ಪರಿಷತ್ತಿಗೆ ಆಯ್ಕೆ ಮಾಡುವುದು ಬಹುತೇಕ ಖಚಿತವಾಗಿದೆ. ಇತ್ತೀಚಿಗಷ್ಟೇ ನಟ ರವಿಚಂದ್ರನ್ ಅವರು ತಮ್ಮ ಬಾಲ್ಯದ ಸ್ನೇಹಿತ, ಸಿಎಂ ಡಿಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದರು. ಈ ವಿಚಾರ ರಾಜ್ಯದ ಜನರ ಗಮನ ಸೆಳೆದಿತ್ತು. ಅಲ್ಲದೆ, ಈ ಭೇಟಿಯ ಹಿಂದಿನ ಉದ್ದೇಶವೇನು ಎಂದು ನಟನ ಅಭಿಮಾನಿಗಳೂ ಸಹ ತಲೆ ಕೆಡಿಸಿಕೊಂಡಿದ್ದರು. ಇದೀಗ ಕ್ರೇಜಿಸ್ಟಾರ್ ರವಿಚಂದ್ರನ್ ಅವರು ರಾಜಕೀಯ ಅಖಾಡ ಪ್ರವೇಶಿಸುತ್ತಿರುವ ವಿಚಾರ ಬಹಿರಂಗವಾಗಿದೆ. ಕನ್ನಡ ಚಿತ್ರರಂಗದಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಅಪಾರ ಕೊಡುಗೆ ನೀಡಿರುವ ರವಿಚಂದ್ರನ್ ಅವರ ಕಲಾ ಸೇವೆಯನ್ನು ಗುರುತಿಸಿ ಕಾಂಗ್ರೆಸ್ ಸರ್ಕಾರ ಅವರನ್ನು ವಿಧಾನ ಪರಿಷತ್‌ಗೆ ನಾಮ ನಿರ್ದೇಶನ ಮಾಡಲು ನಿರ್ಧರಸಿದೆ ಎನ್ನಲಾಗಿದೆ. ಡಿಕೆ ಶಿವಕುಮಾರ್ ಅವರ ಸಹಪಾಠಿ ಆಗಿದ್ದ ರವಿಚಂದ್ರನ್ ಅವರ ಹೆಸರನ್ನು ಸಾಂಸ್ಕೃತಿಕ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಮಾಡಲು ಕಾಂಗ್ರೆಸ್ ಹೈಕಮಾಂಡ್ ಹಸಿರು ನಿಶಾನೆ ನೀಡಿದ್ದು, ಶೀಘ್ರದಲ್ಲೇ ಅಧಿಕೃತ ಘೋಷಣೆ ಹೊರಬೀಳುವ ಸಾಧ್ಯತೆಯಿದೆ.



ಉಜ್ಬೇಕಿಸ್ತಾನ್‌ನ ತಾಷ್ಕೆಂಟ್‌ನಲ್ಲಿ ಶನಿವಾರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಭಾರತೀಯ ಸಮುದಾಯದಿಂದ ಆತ್ಮೀಯ ಸ್ವಾಗತ.

## ನೇಪಾಳ ಪ್ರವಾಹ: ಸಾವಿನ ಸಂಖ್ಯೆ 670ಕ್ಕೆ ಏರಿಕೆ, 2,478 ಜನ ನಾಪತ್ತೆ



ನವದೆಹಲಿ, ಆ.29: ನೇಪಾಳ–ಚೀನಾ ಗಡಿಯ ಪರ್ವತಮಯ ಪ್ರದೇಶದಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದ ಸತ್ತವರ ಸಂಖ್ಯೆ 670ಕ್ಕೆ ಏರಿಕೆಯಾಗಿದೆ. 2,478 ಮಂದಿ ನಾಪತ್ತೆಯಾಗಿದ್ದಾರೆ. ನೇಪಾಳದ ರಸುವಾ ಜಿಲ್ಲೆಯಲ್ಲಿರುವ ಭೋಟೆ ಕೋಶಿ ನದಿಯ ಉಗಮಸ್ಥಾನದ ಬಳಿ ಹೊಸದಾಗಿ ಸರೋವರವೊಂದು (ಅಣೆಕಟ್ಟಿನಂತಹ ತಡೆಗೋಡೆಯಿಂದ ರೂಪುಗೊಂಡ ಸರೋವರ) ನಿರ್ಮಾಣಗೊಂಡಿದ್ದು, ಅದು ಒಡೆದುಹೋಗುವ ಸಾಧ್ಯತೆಯಿದೆ ಎಂದು ಚೀನಾ ಅಧಿಕಾರಿಗಳು ಎಚ್ಚರಿಕೆ ನೀಡಿರುವುದರಿಂದ ನದಿಯ ಕೆಳಭಾಗದ ಪ್ರದೇಶಗಳಲ್ಲಿ ಪ್ರವಾಹದ ಹೊಸಭೀತಿ ಎದುರಾಗಿದೆ. ಹಿಮಾಲಯದ ಪ್ರದೇಶದಲ್ಲಿ ಸುನಾಮಿಯಂತಹ ಭಾರಿ ನೀರಿನ ಅಲೆ ಮತ್ತು ಅವಶೇಷಗಳು ಹರಿದು ಬಂದು ಹಳ್ಳಿಗಳನ್ನು ಮುಳುಗಿಸಿದ ನಂತರ ನಾಪತ್ತೆಯಾದ ಸಾವಿರಾರು ಜನರನ್ನು ಪತ್ತೆಹಚ್ಚಲು ನೇಪಾಳ ಮತ್ತು ಚೀನಾದ ರಕ್ಷಣಾ ಸಿಬ್ಬಂದಿ ಶನಿವಾರವೂ ಹರಸಾಹಸ ಪಡುತ್ತಿದ್ದಾರೆ.

ಬುಧವಾರ ಸಂಭವಿಸಿದ ಭೂಕುಸಿತದಿಂದಾಗಿ ರೂಪುಗೊಂಡ ಸರೋವರವು ಒಡೆದುಹೋಗುವ ಹೆಚ್ಚಿನ ಅಪಾಯವಿದ್ದು, ಇದರಿಂದಾಗಿ ಕೆಳಭಾಗಕ್ಕೆ ಪ್ರವಾಹದ ನೀರು ನುಗ್ಗುವ ಸಾಧ್ಯತೆಯಿದೆ; ಹೀಗಾಗಿ ದ್ವಿತೀಯ ಹಂತದ ಹಠಾತ್ ಪ್ರವಾಹದ ಬಗ್ಗೆ ನೇಪಾಳದ ಐಸಿಐಎಂಒಡಿ ಸಂಸ್ಥೆಯ ಹಿಮಗೋಳ ತಜ್ಞರು ಹಾಗೂ ಚೀನಾ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ನೇಪಾಳದ ತ್ರಿಶೂಲಿ–I ಯೋಜನೆಯಲ್ಲಿ ಕೆಲಸ ಮಾಡುತ್ತಿರುವ 63 ಭಾರತೀಯ ಪ್ರಜೆಗಳ ಹೆಸರುಗಳನ್ನು ವಿದೇಶಾಂಗ ಸಚಿವಾಲಯ ಬಿಡುಗಡೆ ಮಾಡಿದೆ. ಗುರುವಾರ ಹೇಳಿಕೆ ನೀಡಿರುವ ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್, ನೇಪಾಳದಲ್ಲಿ ರಕ್ಷಿಸಲ್ಪಟ್ಟ ಭಾರತೀಯ ಪ್ರಜೆಗಳ ಕುರಿತು ಮಾಹಿತಿ ಹಂಚಿಕೊಂಡಿದ್ದಾರೆ. 84 ಭಾರತೀಯ ಪ್ರಜೆಗಳನ್ನು ರಕ್ಷಿಸಲಾಗಿದೆ ಎಂದು ತಿಳಿಸಿದ್ದಾರೆ.



ಪ್ರಕೃತಿ ವಿಕೋಪ ಹಾಗೂ ತುರ್ತು ಪರಿಸ್ಥಿತಿಯಿಂದಾಗಿ ನೇಪಾಳದಲ್ಲಿ ಸಿಲುಕಿಕೊಂಡಿರುವ ಕನ್ನಡಿಗರ ರಕ್ಷಣೆಗೆ ರಾಜ್ಯ ಸರ್ಕಾರ ಧಾವಿಸಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕನ್ನಡಿಗರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಎಲ್ಲರಿಗೂ ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರುತ್ತಾರೆ ಎಂದು ಧೈರ್ಯ ತುಂಬಿದ್ದಾರೆ. ಸಹಾಯವಾಣಿ ಮತ್ತು ಸಹಾಯಹಸ್ತ –ನೇಪಾಳದಲ್ಲಿ ಸಂಕಷ್ಟಕ್ಕೆ ಸಿಲುಕಿರುವವರು ಹಾಗೂ ಕನ್ನಡಿಗರ ರಕ್ಷಣೆಗಾಗಿ ಮುಖ್ಯಮಂತ್ರಿಗಳು ತಕ್ಷಣವೇ ರಾಜ್ಯ ವಿಪತ್ತು ನಿರ್ವಹಣಾ ತಂಡ ಹಾಗೂ ದೆಹಲಿಯಲ್ಲಿರುವ ಕರ್ನಾಟಕ ಭವನದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ದೆಹಲಿಗೆ ಆಗಮಿಸುವ ಎಲ್ಲಾ ಕನ್ನಡಿಗರು ಬೆಂಗಳೂರಿಗೆ ಪ್ರಯಾಣಿಸುವ ಮೊದಲು ಅವರಿಗೆ ವಸತಿ ವ್ಯವಸ್ಥೆ ಮಾಡುವಂತೆ ಮುಖ್ಯಮಂತ್ರಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ದೆಹಲಿಯಲ್ಲಿ ವಸತಿ ಮತ್ತು ಬೆಂಗಳೂರಿಗೆ ಉಚಿತ ಪ್ರಯಾಣ ವ್ಯವಸ್ಥೆ ನೇಪಾಳದಿಂದ ಸುರಕ್ಷಿತವಾಗಿ ನಿರ್ಗಮಿಸಿ ದೇಶದ ರಾಜಧಾನಿ ದೆಹಲಿ ತಲುಪುತ್ತದೆ ಎಲ್ಲಾ ಕನ್ನಡಿಗರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ಸಂಕಷ್ಟದಲ್ಲಿರುವ ಕನ್ನಡಿಗರನ್ನು ಆದಷ್ಟು ಬೇಗ ತವರಿಗೆ ಕರೆತರಲು ಕೇಂದ್ರ ವಿದೇಶಾಂಗ ಸಚಿವಾಲಯ ಹಾಗೂ ನೇಪಾಳದಲ್ಲಿರುವ ರಾಯಭಾರ ಕಚೇರಿ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು ಸತತ ಸಂಪರ್ಕದಲ್ಲಿದ್ದಾರೆ.

## ಮತದಾರರ ಪಟ್ಟಿಯಲ್ಲಿ ಹಲವಾರು ಹೆಸರು ಕೈಬಿಟ್ಟ ಬಗ್ಗೆ ಆತಂಕ ವ್ಯಕ್ತಪಡಿಸಿ ಚುನಾವಣಾ ಆಯೋಗಕ್ಕೆ ಸಿಎಂ ಡಿಕೆಶಿ ಪತ್ರ: ಜೈರಾಮ್ ರಮೇಶ್ ಕಳವಳ



ನವದೆಹಲಿ, ಆ.29: ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಸಮಯದಲ್ಲಿ ರಾಜ್ಯದ ಮತದಾರರ ಪಟ್ಟಿಯಿಂದ ಹೆಸರುಗಳನ್ನು "ಬೃಹತ್ ಮತ್ತು ನ್ಯಾಯಸಮ್ಮತವಲ್ಲದ" ರೀತಿಯಲ್ಲಿ ಅಳಿಸಲಾಗಿದೆ ಎಂದು ಕರ್ನಾಟಕ ಮುಖ್ಯಮಂತ್ರಿ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ ಎಂದು ಕಾಂಗ್ರೆಸ್ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಇಂದು ಹೇಳಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ನೀಡಿದ ಹೇಳಿಕೆಯಲ್ಲಿ ರಮೇಶ್, ಮುಖ್ಯಮಂತ್ರಿ ಅವರ ಸಂವಹನದ ವಿವರಗಳನ್ನು ಹಂಚಿಕೊಂಡಿದ್ದಾರೆ ಮತ್ತು ಮತದಾರರ ಪಟ್ಟಿಯಿಂದ ಮತದಾರರ ಹೆಸರುಗಳನ್ನು ತೆಗೆದು ಹಾಕುವ ಬಗ್ಗೆ ಗಂಭೀರ ಕಳವಳಗಳು ವ್ಯಕ್ತವಾಗಿವೆ ಎಂದು ಹೇಳಿದರು.

ರಾಜ್ಯದಲ್ಲಿ SIR ಪ್ರಕ್ರಿಯೆಯ ಮೂಲಕ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಬೃಹತ್ ಮತ್ತು ಅನ್ಯಾಯವಾಗಿ ಅಳಿಸಲಾಗಿದೆ ಎಂಬ ಬಗ್ಗೆ ಕರ್ನಾಟಕದ ಮುಖ್ಯಮಂತ್ರಿ ಸಿಇಸಿಗೆ ಬರೆದ ಪತ್ರ ಇಲ್ಲಿದೆ ಎಂದು ಅವರು ಹೇಳಿದರು. ಮುಖ್ಯಮಂತ್ರಿ ಎತ್ತಿದ ಕಳವಳಗಳ ಬಗ್ಗೆ ಸಿಇಸಿ ತ್ವರಿತ ಕ್ರಮ ಕೈಗೊಳ್ಳುತ್ತದೆ ಎಂದು ನಾವು ಭಾವಿಸುತ್ತೇವೆ ಎಂದು ಅವರು ಹೇಳಿದರು. ಮತದಾರರ ಪಟ್ಟಿಗಳ ಪರಿಷ್ಕರಣೆ ಕುರಿತು ತೀವ್ರಗೊಳ್ಳುತ್ತಿರುವ ರಾಜಕೀಯ ಚರ್ಚೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕರ ಹೇಳಿಕೆಗಳು ಬಂದಿವೆ, ದೊಡ್ಡ ಪ್ರಮಾಣದ ಅಳಿಸುವಿಕೆಗಳು ಅರ್ಹ ಮತದಾರರನ್ನು ಚುನಾವಣಾ ಪ್ರಕ್ರಿಯೆಯಿಂದ ಹೊರಗಿಡಬಹುದು ಎಂಬ ಆತಂಕವನ್ನು ವಿರೋಧ ಪಕ್ಷಗಳು ವ್ಯಕ್ತಪಡಿಸಿವೆ. ಕರ್ನಾಟಕ ಮುಖ್ಯಮಂತ್ರಿ ಯವರು ಎತ್ತಿರುವ ಕಳವಳ, ವಿಶೇಷವಾಗಿ ಹೆಸರುಗಳನ್ನು ಅಳಿಸಲು ಅನುಸರಿಸುವ ಕಾರ್ಯವಿಧಾನಗಳು ಮತ್ತು ಅರ್ಹ ಮತದಾರರ ತಪ್ಪಾದ ಹೊರಗಿಡುವಿಕೆಯನ್ನು ತಡೆಗಟ್ಟಲು ಇರುವ ಸುರಕ್ಷತಾ ಕ್ರಮಗಳ ಬಗ್ಗೆ, ಎಸ್‌ಐಆರ್ ಪ್ರಕ್ರಿಯೆಯ ಪರಿಶೀಲನೆಯನ್ನು ತೀಕ್ಷ್ಣಗೊಳಿಸುವ ಸಾಧ್ಯತೆಯಿದೆ. ಚುನಾವಣಾ ಆಯೋಗವು ಮತದಾರರ ಪಟ್ಟಿ ಪರಿಷ್ಕರಣೆಯು ನಕಲಿ, ಅನರ್ಹ ಅಥವಾ ಬೇರೆ ರೀತಿಯಲ್ಲಿ ತಪ್ಪಾದ ನಮೂದುಗಳನ್ನು ತೆಗೆದುಹಾಕುವ ಮೂಲಕ ಮತದಾರರ ಪಟ್ಟಿಗಳನ್ನು ನವೀಕರಿಸುವ ಗುರಿಯನ್ನು ಹೊಂದಿದೆ ಮತ್ತು ಎಲ್ಲ ಅರ್ಹ ನಾಗರಿಕರು ತಮ್ಮ ಪ್ರಜಾಪ್ರಭುತ್ವದ ಮತದಾನದ ಹಕ್ಕನ್ನು ಚಲಾಯಿಸಲು ಸಾಧ್ಯವಾಗುತ್ತದೆ ಎಂದು ಖಚಿತಪಡಿಸುತ್ತದೆ ಎಂದು ಸಮರ್ಥಿಸಿಕೊಂಡಿದೆ.

ಆದಾಗ್ಯೂ, ವಿರೋಧ ಪಕ್ಷಗಳು ಪದೇ ಪದೇ ಹೆಚ್ಚಿನ ಪಾರದರ್ಶಕತೆ ಮತ್ತು ಬಲವಾದ ಸುರಕ್ಷತಾ ಕ್ರಮಗಳನ್ನು ಬಯಸಿವೆ, ತಪ್ಪಾದ ಅಥವಾ ಅನ್ಯಾಯದ ಹೆಸರುಗಳನ್ನು ಅಳಿಸುವುದು ಚುನಾವಣಾ ಭಾಗವಹಿಸುವಿಕೆ ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಗಂಭೀರ ಪರಿಣಾಮಗಳನ್ನು ಉಂಟುಮಾಡಬಹುದು ಎಂದು ವಾದಿಸಿವೆ ಎಂದರು




ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಶನಿವಾರ ತಮಿಳುನಾಡಿನ ಪೆರುಂದುರೈನಲ್ಲಿರುವ ಕೊಂಗು ವೆಲ್ಲಲರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕೆವಿಐಟಿ) ಟ್ರಸ್ಟ್‌ನ ಸಂಸ್ಥಾಪಕರ ದಿನಾಚರಣೆಯ ಸಂದರ್ಭದಲ್ಲಿ ಆಂಕರ್ ಇಂಡಸ್ಟ್ರೀಸ್ ಮತ್ತು ಅರಿವುಕೂಡಮ್ ರಿಸರ್ಚ್ ಪಾರ್ಕ್ ನಡುವಿನ ಒಡಂಬಡಿಕೆ ವಿನಿಮಯಕ್ಕೆ ಸಾಕ್ಷಿಯಾದರು.

# ನೇಪಾಳದ ವಿನಾಶಕಾರಿ ಪ್ರವಾಹ: ತ್ವರಿತ ಭಾರತೀಯ ಪರಿಹಾರ ಪ್ರತಿಕ್ರಿಯೆಗೆ ಖರ್ಗೆ ಕರೆ

**ನವದೆಹಲಿ,ಆ.29:** ಕಾಂಗ್ರೆಸ್ ಅಧ್ಯಕ್ಷ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು, ನೇಪಾಳವು ವಿನಾಶಕಾರಿ ಪ್ರವಾಹದಿಂದ ತತ್ತರಿಸಿದ್ದು, ಜೀವಹಾನಿ, ಆಸ್ತಿಪಾಸ್ತಿ ಮತ್ತು ಮೂಲಸೌಕರ್ಯಗಳಿಗೆ ವ್ಯಾಪಕ ಹಾನಿ ಮತ್ತು ದೊಡ್ಡ ಪ್ರಮಾಣದ ಸ್ಥಳಾಂತರದಿಂದ ತತ್ತರಿಸಿದ್ದು, ತಕ್ಷಣದ ಮತ್ತು ಸಮಗ್ರ ಮಾನವೀಯ ಮತ್ತು ವಿಪತ್ತು ಪರಿಹಾರ ನೆರವು ನೀಡಬೇಕೆಂದು ಒತ್ತಾಯಿಸಿದ್ದಾರೆ.

ಶುಕ್ರವಾರ ಶಾ ಅವರನ್ನು ಉದ್ದೇಶಿಸಿ ಬರೆದ ಪತ್ರದಲ್ಲಿ, ಖರ್ಗೆ ಅವರು ಈ ವಿಪತ್ತಿನ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ ಮತ್ತು ಪ್ರವಾಹದಿಂದ ಉಂಟಾದ ವಿನಾಶವು ಪೀಡಿತ ಸಮುದಾಯಗಳನ್ನು ತೀವ್ರ ಸಂಕಷ್ಟದ ಸ್ಥಿತಿಗೆ ತಳ್ಳಿದೆ ಎಂದು ಹೇಳಿದ್ದಾರೆ. "ನೇಪಾಳವು ಇತ್ತೀಚಿನ ವಿನಾಶಕಾರಿ ಪ್ರವಾಹದಿಂದ ಉಂಟಾದ ಗಂಭೀರ ನೈಸರ್ಗಿಕ ವಿಕೋಪವನ್ನು ವೀಕ್ಷಿಸುತ್ತಿರುವ ಸಮಯದಲ್ಲಿ ನಾನು ನಿಮಗೆ ತೀವ್ರ ದುಃಖದಿಂದ ಬರೆಯುತ್ತಿದ್ದೇನೆ" ಎಂದು ಖರ್ಗೆ ಹೇಳಿದರು.

"ಜೀವನ ನಷ್ಟ, ಮನೆಗಳು ಮತ್ತು ಮೂಲಸೌಕರ್ಯಗಳ ವ್ಯಾಪಕ ನಾಶ ಮತ್ತು ಅಸಂಖ್ಯಾತ ಜನರ ಸ್ಥಳಾಂತರವು ಪೀಡಿತ ಸಮುದಾಯಗಳನ್ನು ಅಪಾರ ಸಂಕಷ್ಟದ ಸ್ಥಿತಿಯಲ್ಲಿ ಬಿಟ್ಟಿದೆ" ಎಂದು ಅವರು ಹೇಳಿದರು.

ಭಾರತ ಮತ್ತು ನೇಪಾಳ ನಡುವಿನ ನಿಕಟ ಮತ್ತು ಶಾಶ್ವತ ಸಂಬಂಧವನ್ನು ಉಲ್ಲೇಖಿಸುತ್ತಾ, ಕಾಂಗ್ರೆಸ್ ಅಧ್ಯಕ್ಷರು ಮಾನವೀಯ ಬಿಕ್ಕಟ್ಟಿನ ಸಮಯದಲ್ಲಿ ಭಾರತವು ತನ್ನ ನೆರೆಯವರೊಂದಿಗೆ ದೃಢವಾಗಿ ನಿಲ್ಲಬೇಕು ಮತ್ತು ಪೀಡಿತ ಜನಸಂಖ್ಯೆಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡಬೇಕು ಎಂದು ಹೇಳಿದರು.

"ಭಾರತದ ಜನರು ನೇಪಾಳದ ಜನರೊಂದಿಗೆ ಆಳವಾದ ಮತ್ತು ಶಾಶ್ವತವಾದ ಬಾಂಧವ್ಯವನ್ನು ಹೊಂದಿದ್ದಾರೆ. ಈ ತೀವ್ರ ಸಂಕಷ್ಟದ ಸಮಯದಲ್ಲಿ, ಭಾರತವು ನಮ್ಮ ನೆರೆಹೊರೆಯವರೊಂದಿಗೆ ದೃಢವಾಗಿ ನಿಲ್ಲಬೇಕು ಮತ್ತು ಈ ವಿನಾಶಕಾರಿ ವಿಪತ್ತಿನಿಂದ ಹಾನಿಗೊಳಗಾದವರಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡಬೇಕು" ಎಂದು ಖರ್ಗೆ ಹೇಳಿದರು.

ನೇಪಾಳ ಸರ್ಕಾರದ ಸಮನ್ವಯದೊಂದಿಗೆ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆಯ ತಂಡಗಳ ಸಂಭಾವ್ಯ ನಿಯೋಜನೆ ಸೇರಿದಂತೆ ತಕ್ಷಣದ ಮತ್ತು ಸಮಗ್ರ



ಮಾನವೀಯ ಮತ್ತು ವಿಪತ್ತು ಪರಿಹಾರ ಬೆಂಬಲವನ್ನು ವಿಸ್ತರಿಸುವುದನ್ನು ಪರಿಗಣಿಸಬೇಕೆಂದು ಅವರು ನರೇಂದ್ರ ಮೋದಿ ಸರ್ಕಾರವನ್ನು ಒತ್ತಾಯಿಸಿದರು.

"ನೇಪಾಳಕ್ಕೆ ತಕ್ಷಣದ ಮತ್ತು ಸಮಗ್ರ ಮಾನವೀಯ ಮತ್ತು ವಿಪತ್ತು ಪರಿಹಾರ ಸಹಾಯವನ್ನು ವಿಸ್ತರಿಸುವುದನ್ನು ಪರಿಗಣಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ" ಎಂದು ಖರ್ಗೆ ಹೇಳಿದರು. "ನಿರ್ದಿಷ್ಟವಾಗಿ, ಅಗತ್ಯವಿರುವೆಡೆ ಮತ್ತು ನೇಪಾಳ ಸರ್ಕಾರದ ಸಮನ್ವಯದೊಂದಿಗೆ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ ತಂಡಗಳ ನಿಯೋಜನೆಯನ್ನು ಪೀಡಿತ ಪ್ರದೇಶಗಳಲ್ಲಿ ರಕ್ಷಣೆ, ಸ್ಥಳಾಂತರಿಸುವಿಕೆ ಮತ್ತು ಪರಿಹಾರ ಕಾರ್ಯಾಚರಣೆಗಳಲ್ಲಿ ಸಹಾಯ ಮಾಡಲು ಪರಿಗಣಿಸಬಹುದು" ಎಂದು ಅವರು ಹೇಳಿದರು.

ನೈಸರ್ಗಿಕ ವಿಪತ್ತುಗಳಿಗೆ ಪ್ರತಿಕ್ರಿಯಿಸುವಲ್ಲಿ ನ ವಿಶೇಷ ಪರಿಣತಿ ಮತ್ತು ಅನುಭವವು ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗಳಲ್ಲಿ ಮತ್ತು ಜೀವಗಳನ್ನು ಉಳಿಸುವ ಪ್ರಯತ್ನಗಳಲ್ಲಿ ಮೌಲ್ಯಯುತವಾಗಿದೆ ಎಂದು ಖರ್ಗೆ ಹೇಳಿದರು. "ಪ್ರಕೃತಿ ವಿಕೋಪಗಳಿಗೆ ಸ್ಪಂದಿಸುವಲ್ಲಿ NDRF ನ ಪರಿಣತಿ ಮತ್ತು ಅನುಭವವು ಜೀವಗಳನ್ನು ಉಳಿಸುವ ಮತ್ತು ಈ ಅಪಾರ ದುರಂತವನ್ನು ಎದುರಿಸುತ್ತಿರುವವರಿಗೆ ತುರ್ತು ಪರಿಹಾರವನ್ನು ಒದಗಿಸುವ ಪ್ರಯತ್ನಗಳಲ್ಲಿ ಅಮೂಲ್ಯವಾದ ಬೆಂಬಲವನ್ನು ನೀಡುತ್ತದೆ" ಎಂದು ಅವರು ಹೇಳಿದರು.

ಮಾನವೀಯ ಬಿಕ್ಕಟ್ಟಿನ ಪ್ರಮಾಣದಿಂದ ಬೇಡಿಕೆಯಿರುವ ತುರ್ತು ಮತ್ತು ಸೂಕ್ಷ್ಮತೆಯಿಂದ ಪರಿಸ್ಥಿತಿಯನ್ನು ಪರಿಗಣಿಸುವಂತೆ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಗೃಹ ಸಚಿವಾಲಯವನ್ನು ಒತ್ತಾಯಿಸಿದರು. "ಗೃಹ ವ್ಯವಹಾರಗಳ ಸಚಿವಾಲಯವು ಈ ವಿಷಯವನ್ನು ಅರ್ಹವಾದ ತುರ್ತು ಮತ್ತು ಸೂಕ್ಷ್ಮತೆಯಿಂದ ಪರಿಗಣಿಸುತ್ತದೆ ಮತ್ತು ನೇಪಾಳದ ಪ್ರವಾಹ ಪೀಡಿತ ಜನರಿಗೆ ಭಾರತದ ಸಹಾಯವನ್ನು ವಿಸ್ತರಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ನಾನು ಪ್ರಾಮಾಣಿಕವಾಗಿ ಭಾವಿಸುತ್ತೇನೆ" ಎಂದು ಖರ್ಗೆ ಹೇಳಿದರು.

ಭಾರತ ಮತ್ತು ನೇಪಾಳದ ನಡುವಿನ ನಿಕಟ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಜನರಿಂದ ಜನರಿಗೆ ಸಂಬಂಧಗಳ ಹಿನ್ನೆಲೆಯಲ್ಲಿ ಈ ಮನವಿ ಬಂದಿದೆ. ಮುಕ್ತ ಗಡಿಯನ್ನು ಹಂಚಿಕೊಳ್ಳುವ ಎರಡು ನೆರೆಯ ರಾಷ್ಟ್ರಗಳು ಮಾನವೀಯ ತುರ್ತುಸ್ಥಿತಿಗಳು ಮತ್ತು ನೈಸರ್ಗಿಕ ವಿಕೋಪಗಳಿಗೆ ಪ್ರತಿಕ್ರಿಯಿಸುವಲ್ಲಿ ಸಾಂಪ್ರದಾಯಿಕವಾಗಿ ಸಹಕಾರವನ್ನು ಉಳಿಸಿಕೊಂಡಿವೆ.

ಪ್ರವಾಹ ಪೀಡಿತ ಸಮುದಾಯಗಳು ವಿಪತ್ತಿನಿಂದ ಉಂಟಾದ ವ್ಯಾಪಕ ವಿನಾಶವನ್ನು ಎದುರಿಸುತ್ತಿರುವಾಗ, ರಕ್ಷಣೆ, ಸ್ಥಳಾಂತರಿಸುವಿಕೆ ಮತ್ತು ಪರಿಹಾರ ಕಾರ್ಯಾಚರಣೆಗಳಲ್ಲಿ ನೇಪಾಳಕ್ಕೆ ಸಹಾಯ ಮಾಡಲು ತ್ವರಿತ ಮತ್ತು ಸಂಘಟಿತ ಭಾರತೀಯ ಪ್ರತಿಕ್ರಿಯೆಗಾಗಿ ಒತ್ತಾಯಿಸಲು ಖರ್ಗೆ ಅವರ ಪತ್ರವು ಪ್ರಯತ್ನಿಸಿತು.

## ಶುದ್ಧೀಕರಣವೂ ಅಸ್ಪೃಶ್ಯತೆಯೇ: ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ರಾಹುಲ್ ವಾಗ್ದಾಳಿ

**ನವದೆಹಲಿ, ಆ.29:** ಶುದ್ಧೀಕರಣ ಎನ್ನುವುದು ಅಸ್ಪೃಶ್ಯತೆಯ ಮತ್ತೊಂದು ಹೆಸರು ಎಂದು ಟೀಕಿಸುವ ಮೂಲಕ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಉತ್ತರಾಖಂಡದ ಹಲ್ದ್ವಾನಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ರ‍್ಯಾಲಿ ನಡೆದ ನಂತರ, ಆ ಮೈದಾನವನ್ನು ಶುದ್ಧೀಕರಣಗೊಳಿಸಿದ ಕೃತ್ಯವನ್ನು ಖಂಡಿಸಿರುವ ಅವರು, ಪ್ರಧಾನಿ ನರೇಂದ್ರ ಮೋದಿಯವರು ಕೂಡಲೇ ಈ ಬಗ್ಗೆ ಎಫ್‌ಐಆರ್ ದಾಖಲಿಸಲು ಆದೇಶಿಸಬೇಕು ಎಂದು ಆಗ್ರಹಿಸಿದ್ದಾರೆ.

ನವದೆಹಲಿಯಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಈ ಘಟನೆಯು ಸಂವಿಧಾನದ ಪ್ರಕಾರ ಅಪರಾಧವಾಗಿದೆ. ಈ ಕೂಡಲೇ ಎಸ್ಸಿ/ಎಸ್ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಆಗಸ್ಟ್ 8ರಂದು ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ವಿಜಯ ಶಂಖನಾದ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ್ದರು. ಇದಾದ ಎರಡು ದಿನಗಳ ನಂತರ ಶ್ರೀರಾಮಸೇನೆ ಸದಸ್ಯರು ಅದೇ ಜಾಗದಲ್ಲಿ ಶುದ್ಧೀಕರಣ ಹೋಮ ನಡೆಸಿದ್ದರು.



ನಾವು ಕಾಂಗ್ರೆಸ್ ಅಧ್ಯಕ್ಷರಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸುತ್ತಿದ್ದೇವೆ. ಉತ್ತರಾಖಂಡದಲ್ಲಿ ಅವರಿಗೆ ನ್ಯಾಯ ಸಿಗಬೇಕು. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕರ್ತವ್ಯ. ಅಸ್ಪೃಶ್ಯತೆ ನಿಷೇಧವಿದ್ದರೂ ಹಾಗೂ ಅದೊಂದು ಅಪರಾಧವಾಗಿದ್ದರೂ ಬಿಜೆಪಿ–ಆರ್‌ಎಸ್‌ಎಸ್ ನಾಯಕರು ಅದನ್ನು ಆಚರಿಸುತ್ತಾರೆ. ದಲಿತರು ಘನತೆ ಮತ್ತು ಯಶಸ್ಸಿನೊಂದಿಗೆ ಬದುಕುವುದು ಅವರಿಗೆ ಇಷ್ಟವಿಲ್ಲ ಎಂಬುದನ್ನು ಈ ಘಟನೆ ಎತ್ತಿತೋರಿಸುತ್ತದೆ. ಖರ್ಗೆ ಅವರಿಗೆ ಇಂದಲ್ಲ, ನಾಳೆಯಾದರೂ ನ್ಯಾಯ ಸಿಕ್ಕೇ ಸಿಗುತ್ತದೆ? ಎಂದು ರಾಹುಲ್ ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಉತ್ತರಾಖಂಡದ ಬಿಜೆಪಿ ಅಧ್ಯಕ್ಷ ಮಹೇಂದ್ರ ಭಟ್ ಅವರು ಈ ಶುದ್ಧೀಕರಣ ಆಚರಣೆಯನ್ನು ಸಮರ್ಥಿಸಿಕೊಂಡ ವಿಡಿಯೊವನ್ನು ರಾಹುಲ್ ಗಾಂಧಿ ಪ್ರದರ್ಶಿಸಿದರು. ಘೋಷಣೆಗಳಿಂದ ಆ ಸ್ಥಳ ಮಲಿನವಾಗಿತ್ತು ಎಂದು ಭಟ್ ಅದರಲ್ಲಿ ಸಮರ್ಥಿಸಿಕೊಂಡಿದ್ದರು. ಮಲ್ಲಿಕಾರ್ಜುನ ಖರ್ಗೆ ಅವರಂತಹ ಹಿರಿಯ ನಾಯಕರ ವಿರುದ್ಧವೇ ಇಂತಹ ಕೃತ್ಯ ಎಸಗಬಹುದಾದರೆ, ಶಾಲೆಯಲ್ಲಿ ಓದುವ ನಾಲ್ಕು ವರ್ಷದ ದಲಿತ ಮಗುವಿನ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಒಮ್ಮೆ ಊಹಿಸಿಕೊಳ್ಳಿ ಎಂದು ರಾಹುಲ್ ಆತಂಕ ವ್ಯಕ್ತಪಡಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತಮ್ಮ ಬೆಂಬಲಕ್ಕೆ ಹೆಚ್ಚಿನವರು ನಿಲ್ಲಲಿಲ್ಲ ಎಂಬ ಖರ್ಗೆ ಅವರ ಬೇಸರದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಾಹುಲ್, ಅವರು ಹಾಗೆ ಹೇಳಿಲ್ಲ. ಕೆಲವರು ಬೆಂಬಲಿಸಲಿಲ್ಲ ಎಂದಷ್ಟೇ ಹೇಳಿದ್ದಾರೆ. ನಾನು ಮತ್ತು ಇತರ ಅನೇಕ ನಾಯಕರು ಅವರನ್ನು ಬೆಂಬಲಿಸಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಇದೇ ವೇಳೆ ಸೋನಿಯಾ ಗಾಂಧಿ ಅವರ ಆತ್ಮಚರಿತ್ರೆ ಪ್ರಕಟಣೆ ವಿವಾದದ ಬಗ್ಗೆ ಕೇಳಿದಾಗ, ಅದು ವಿಷಯಾಂತರ ಮಾಡುವ ಯತ್ನ. ಆ ಬಗ್ಗೆ ನನಗೆ ಆಸಕ್ತಿ ಇಲ್ಲ. ಕಾಂಗ್ರೆಸ್ ಅಧ್ಯಕ್ಷರಿಗೆ ನ್ಯಾಯ ಸಿಗಬೇಕು ಎಂಬುದಷ್ಟೇ ನಮ್ಮ ಮುಂದಿರುವ ಪ್ರಮುಖ ವಿಷಯ ಎಂದು ಅವರು ಪುನರುಚ್ಚರಿಸಿದರು.




ಜಮ್ಮು ಮತ್ತು ಕಾಶ್ಮೀರದಲ್ಲಿ ವಿದ್ಯುತ್ ದರ ಏರಿಕೆಯನ್ನು ವಿರೋಧಿಸಿ, ನ್ಯಾಷನಲ್ ಕಾನ್ಫರೆನ್ಸ್ ನೇತೃತ್ವದ ಸರ್ಕಾರದ ವಿರುದ್ಧ ಜಮ್ಮು ಮತ್ತು ಕಾಶ್ಮೀರ ಅಪ್ನಾ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಸೋಮವಾರ ಜಮ್ಮುವಿನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

## ನೇಪಾಳ: ಬಿಹಾರ ಸರ್ಕಾರದಿಂದ ಮಹಾರಾಷ್ಟ್ರದ 100 ಯಾತ್ರಿಗಳ ರಕ್ಷಣೆ

**ನವದೆಹಲಿ, ಆ. 29:** ನೇಪಾಳದಲ್ಲಿ ಸಂಭವಿಸಿದ ಹಠಾತ್ ಪ್ರವಾಹದ ನಂತರ ಅಲ್ಲಿ ಸಿಲುಕಿಕೊಂಡಿದ್ದ ಮಹಾರಾಷ್ಟ್ರದ ಸುಮಾರು 100 ಯಾತ್ರಿಗಳನ್ನು ಬಿಹಾರ ಸರ್ಕಾರವು ಸುರಕ್ಷಿತವಾಗಿ ಸ್ಥಳಾಂತರಿಸಿ, ರೈಲಿನ ಮೂಲಕ ಅವರ ತವರು ರಾಜ್ಯಕ್ಕೆ ಕಳುಹಿಸಿಕೊಟ್ಟಿದೆ ಎಂದು ಶನಿವಾರ ಬಿಡುಗಡೆಯಾದ ಅಧಿಕೃತ ಹೇಳಿಕೆ ತಿಳಿಸಿದೆ.

ಮಹಾರಾಷ್ಟ್ರ ಸರ್ಕಾರದ ಕೋರಿಕೆಯ ಮೇರೆಗೆ ಈ ಸ್ಥಳಾಂತರ ಕಾರ್ಯವನ್ನು ಕೈಗೊಳ್ಳಲಾಗಿದೆ ಎಂದು ಬಿಹಾರ ವಿಪತ್ತು ನಿರ್ವಹಣಾ ಇಲಾಖೆ ತಿಳಿಸಿದೆ. ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರ ನಿರ್ದೇಶನದ ಮೇರೆಗೆ, ಸಿತಾಮಢಿ ಜಿಲ್ಲಾಡಳಿತವು ಶುಕ್ರವಾರ ಯಾತ್ರಾರ್ಥಿಗಳನ್ನು ನೇಪಾಳ ಗಡಿಯಿಂದ ಸಿತಾಮಢಿಗೆ ಸುರಕ್ಷಿತವಾಗಿ ಕರೆತಂದಿತು ಎಂದು ಹೇಳಿಕೆ ತಿಳಿಸಿದೆ.

ಮುಖ್ಯ ಕಾರ್ಯದರ್ಶಿ ಪ್ರತ್ಯಯ ಅಮೃತ್ ಮತ್ತು ವಿಪತ್ತು ನಿರ್ವಹಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್ ಮಲ್ ಅವರ ಮೇಲ್ವಿಚಾರಣೆಯಲ್ಲಿ ಈ ಸ್ಥಳಾಂತರ ಕಾರ್ಯ ನಡೆಯಿತು. ಸಿತಾಮರ್ಹಿ ಜಿಲ್ಲಾಡಳಿತವು ಯಾತ್ರಾರ್ಥಿಗಳಿಗೆ ಆಹಾರ, ಕುಡಿಯುವ ನೀರು ಮತ್ತು ಇತರ ಅಗತ್ಯ ಸೌಲಭ್ಯಗಳ ವ್ಯವಸ್ಥೆ ಮಾಡಿತ್ತು. ಮಹಾರಾಷ್ಟ್ರದ ಈ ಯಾತ್ರಾರ್ಥಿಗಳು ಪಶುಪತಿನಾಥ ದೇವಾಲಯಕ್ಕೆ ಅಥವಾ ಹಿಮಾಲಯದ ದೇಶದಲ್ಲಿರುವ ಇತರ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಲು ನೇಪಾಳಕ್ಕೆ ಹೋಗಿದ್ದರೇ ಎಂಬುದು ಸ್ಪಷ್ಟವಾಗಿಲ್ಲ. ಶನಿವಾರ ನಸುಕಿನ ಜಾವ 2.30 ರ ಸುಮಾರಿಗೆ ಪಾಟ್ನಾಕ್ಕೆ ಕರೆತರಲಾಯಿತು ಮತ್ತು ಸಮುದಾಯ ಭವನವೊಂದರಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಯಿತು. ಅಲ್ಲಿ ಅವರಿಗೆ ಆಹಾರ, ವೈದ್ಯಕೀಯ ತಪಾಸಣೆ ಮತ್ತು ಇತರ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಯಿತು, ಎಂದು ಹೇಳಿಕೆ ತಿಳಿಸಿದೆ. ಬಿಹಾರದ ಮುಖ್ಯ ಕಾರ್ಯದರ್ಶಿ ಮತ್ತು ರೈಲ್ವೆ ಮಂಡಳಿಯ ಅಧ್ಯಕ್ಷರ ನಡುವಿನ ಸಮನ್ವಯದ ನಂತರ,



ಯಾತ್ರಾರ್ಥಿಗಳಿಗೆ ಪ್ರಯಾಣಿಸಲು ಅನುಕೂಲವಾಗುವಂತೆ ಪಾಟ್ನಾ–ಪೂರ್ಣಾ ಎಕ್ಸ್‌ಪ್ರೆಸ್‌ಗೆ ಎರಡು ಹೆಚ್ಚುವರಿ ಬೋಗಿಗಳನ್ನು ಜೋಡಿಸಲಾಯಿತು. ಯಾತ್ರಾರ್ಥಿಗಳು ಶನಿವಾರ ಬೆಳಗ್ಗೆ ರೈಲಿನಲ್ಲಿ ಮಹಾರಾಷ್ಟ್ರಕ್ಕೆ ಪ್ರಯಾಣ ಬೆಳೆಸಿದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ತಮ್ಮ ಸುರಕ್ಷಿತ ವಾಪಸಾತಿಗೆ ತ್ವರಿತ ಸ್ಪಂದನೆ, ಸಂವೇದನಾಶೀಲತೆ ಮತ್ತು ಸಮನ್ವಯದ ಪ್ರಯತ್ನಗಳನ್ನು ತೋರಿದ ಬಿಹಾರದ ಉಪ ಮುಖ್ಯಮಂತ್ರಿ ಹಾಗೂ ಸಿತಾಮರ್ಹಿ ಮತ್ತು ಪಾಟ್ನಾ ಜಿಲ್ಲಾಡಳಿತಗಳಿಗೆ ಅವರು ಧನ್ಯವಾದ ಅರ್ಪಿಸಿದರು. ಕೆಲವು ಯಾತ್ರಾರ್ಥಿಗಳು ಸಂಬಂಧಪಟ್ಟ ರೈಲ್ವೆ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ರಾಖಿಯನ್ನು ಸಹ ಕಟ್ಟಿದರು ಎಂದು ಅವರು ತಿಳಿಸಿದರು.

## ದೆಹಲಿ ಕಟ್ಟಡ ಸುರಕ್ಷತಾ ನಿಯಮ ಬಲಪಡಿಸಲು ಅಗ್ನಿಶಾಮಕ ಸೇವೆ ನಿಯಮ ಅಧಿಸೂಚನೆ

**ನವದೆಹಲಿ, ಆ.29:** ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರಾಂತ್ಯ ಸರ್ಕಾರವು 'ದೆಹಲಿ ಅಗ್ನಿಶಾಮಕ ಸೇವೆ (ತಿದ್ದುಪಡಿ) ನಿಯಮಗಳು, 2026' ಅನ್ನು ಅಧಿಸೂಚಿಸಿದ್ದು, ನಗರದ ಅಗ್ನಿ ಸುರಕ್ಷತಾ ನಿಯಮಗಳನ್ನು ನವೀಕರಿಸಿದ ಏಕೀಕೃತ ಕಟ್ಟಡ ಉಪ–ನಿಯಮಗಳಿಗೆ ಅನುಗುಣವಾಗಿ ತಂದಿದೆ. ದೆಹಲಿ ಅಗ್ನಿಶಾಮಕ ಸೇವೆ ಕಾಯ್ದೆ, 2007 ರ ಅಡಿಯಲ್ಲಿ ಲೆಫ್ಟಿನೆಂಟ್ ಗವರ್ನರ್ ಅಧಿಸೂಚಿಸಿದ ಈ ತಿದ್ದುಪಡಿ ಮಾಡಲಾದ ನಿಯಮಗಳು, ಆಧುನಿಕ ಮತ್ತು ಕಡ್ಡಾಯ ಸುರಕ್ಷತಾ ಅಗತ್ಯಗಳನ್ನು ಪರಿಚಯಿಸುವ ಮೂಲಕ ರಾಜಧಾನಿಯಾದ್ಯಂತ ಕಟ್ಟಡಗಳಲ್ಲಿ ಅಗ್ನಿ ತಡೆಗಟ್ಟುವಿಕೆ ಮತ್ತು ಸುರಕ್ಷತಾ ಮಾನದಂಡಗಳನ್ನು ಬಲಪಡಿಸಲು ಶ್ರಮಿಸುತ್ತವೆ.

ದೆಹಲಿ ಗೃಹ ಸಚಿವ ಆಶಿಶ್ ಸೂದ್ , ನಾಗರಿಕರ ಸುರಕ್ಷತೆ ಮತ್ತು ಭದ್ರತೆಯು ಸರ್ಕಾರದ ಅತ್ಯುನ್ನತ ಆದ್ಯತೆಯಾಗಿದೆ ಎಂದು ಹೇಳಿದರು. ಅಲ್ಲದೆ, ಈ ತಿದ್ದುಪಡಿಗಳನ್ನು ಸುರಕ್ಷಿತ ಮತ್ತು ಹೆಚ್ಚು ಸ್ಥಿತಿಸ್ಥಾಪಕ ದೆಹಲಿಯನ್ನು ನಿರ್ಮಿಸುವ ನಿಟ್ಟಿನಲ್ಲಿ ಒಂದು ಹೆಜ್ಜೆ ಎಂದು ಬಣ್ಣಿಸಿದರು. "ದೆಹಲಿ ಅಗ್ನಿಶಾಮಕ ಸೇವೆ (ತಿದ್ದುಪಡಿ) ನಿಯಮಗಳು, 2026 ಅನ್ನು ಅಧಿಸೂಚಿಸುವ ಮೂಲಕ, ನಾವು ನಮ್ಮ ಅಗ್ನಿ ಸುರಕ್ಷತಾ ಮಾನದಂಡಗಳನ್ನು ನೇರವಾಗಿ ಏಕೀಕೃತ ಕಟ್ಟಡ ಉಪನಿಯಮಗಳೊಂದಿಗೆ ಸಂಯೋಜಿಸುತ್ತಿದ್ದೇವೆ" ಎಂದು ಸೂದ್ ಹೇಳಿದರು.

ಸಚಿವರ ಪ್ರಕಾರ, ಪರಿಷ್ಕೃತ ಚೌಕಟ್ಟು ಅಗ್ನಿಶಾಮಕ ವಾಹನಗಳಿಗೆ ಆರು ಮೀಟರ್ ಸ್ಪಷ್ಟ ಪ್ರವೇಶ ಮಾರ್ಗಗಳು, ಸ್ವಯಂಚಾಲಿತ ನಿರಂತರ ಮೇಲ್ವಿಚಾರಣಾ ವ್ಯವಸ್ಥೆಗಳು, ಸ್ಪ್ರಿಂಕ್ಲರ್ ಸ್ಥಾಪನೆಗಳು ಮತ್ತು ಮೀಸಲಾದ ತುರ್ತು ವಿದ್ಯುತ್ ಬ್ಯಾಕಪ್‌ಗಳು ಸೇರಿದಂತೆ ಸುರಕ್ಷತಾ ಕ್ರಮಗಳನ್ನು ಕಡ್ಡಾಯಗೊಳಿಸುತ್ತದೆ. ಈ ತಿದ್ದುಪಡಿಗಳು ಅಗ್ನಿಸುರಕ್ಷತಾ ಆಡಿಟರ್‌ಗಳಿಗೆ ಪ್ರಮಾಣಿತ ತಪಾಸಣೆ ಪರಿಶೀಲನಾಪಟ್ಟಿಯನ್ನು ಸಹ ಒದಗಿಸುತ್ತವೆ. ಇದು ತಪಾಸಣೆ ಮತ್ತು ಅನುಸರಣೆ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ತರುವ ಗುರಿಯನ್ನು ಹೊಂದಿದೆ.

ಪರಿಷ್ಕೃತ ನಿಬಂಧನೆಗಳು ಅಗ್ನಿಸುರಕ್ಷತಾ ಅಗತ್ಯಗಳು ಆಧುನಿಕ ಕಟ್ಟಡ ನಿರ್ಮಾಣ ಪದ್ಧತಿಗಳೊಂದಿಗೆ ಹೆಜ್ಜೆಹಾಕುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಬೆಂಕಿ ಅವಘಡಗಳ ಸಮಯದಲ್ಲಿ ತುರ್ತು ಸ್ಪಂದನಕಾರರಿಗೆ ಸೂಕ್ತ ಪ್ರವೇಶ ಮತ್ತು ಮೂಲಸೌಕರ್ಯವನ್ನು ಒದಗಿಸಲು ಉದ್ದೇಶಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ. ಕಟ್ಟಡಗಳಾದ್ಯಂತ ಅಗ್ನಿಸುರಕ್ಷತಾ ಮಾನದಂಡಗಳ ಪರಿಣಾಮಕಾರಿ ಅನುಷ್ಠಾನದ ಪ್ರಾಮುಖ್ಯತೆಯನ್ನು ಒತ್ತಿ ನೀಡಿದ ಸೂದ್, "ಹೆಚ್ಚು ಸುರಕ್ಷಿತ, ಸ್ಥಿತಿಸ್ಥಾಪಕ ಮತ್ತು ಆಧುನಿಕ ದೆಹಲಿ" ಯನ್ನು ನಿರ್ಮಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು. ಈ ಅಧಿಸೂಚನೆಯು ಅಗ್ನಿಸುರಕ್ಷತಾ ಅಗತ್ಯಗಳನ್ನು ನವೀಕರಿಸಿದ ನಿಬಂಧನೆಗಳೊಂದಿಗೆ ನೇರವಾಗಿ ಸಂಯೋಜಿಸುವ ಮೂಲಕ ಹೆಚ್ಚು ಸಂಯೋಜಿತ ನಿಯಂತ್ರಣ ಚೌಕಟ್ಟನ್ನು ಒದಗಿಸುವ ನಿರೀಕ್ಷೆಯಿದೆ, ಇದರಿಂದಾಗಿ ಕಟ್ಟಡ ನಿಯಮಗಳು ಮತ್ತು ಅಗ್ನಿಸುರಕ್ಷತಾ ಮಾನದಂಡಗಳ ನಡುವಿನ ಅಸಂಗತತೆಗಳನ್ನು ಕಡಿಮೆ ಮಾಡುತ್ತದೆ. ದೆಹಲಿ ಅಗ್ನಿಶಾಮಕ ಸೇವೆ ಕಾಯ್ದೆ, 2007 ರಾಷ್ಟ್ರೀಯ ರಾಜಧಾನಿಯಲ್ಲಿ ಅಗ್ನಿ ತಡೆಗಟ್ಟುವಿಕೆ, ಅಗ್ನಿ ಸುರಕ್ಷತೆ ಮತ್ತು ಸಂಬಂಧಿತ ಸೇವೆಗಳಿಗೆ ಶಾಸನಬದ್ಧ ಚೌಕಟ್ಟನ್ನು ಒದಗಿಸುತ್ತದೆ. ಏಕೀಕೃತ ಕಟ್ಟಡ ಉಪನಿಯಮಗಳು ಯೋಜನೆ, ನಿರ್ಮಾಣ ಮತ್ತು ಸುರಕ್ಷತೆಗೆ ಸಂಬಂಧಿಸಿದ ಅಗತ್ಯತೆಗಳು ಸೇರಿದಂತೆ ದೆಹಲಿಯಲ್ಲಿ ಕಟ್ಟಡ ನಿರ್ಮಾಣ ಮತ್ತು ಅಭಿವೃದ್ಧಿಯ ವಿವಿಧ ಮುಖಗಳನ್ನು ಆಡಳಿತ ನಡೆಸುವ ಸಾಮಾನ್ಯ ನಿಯಂತ್ರಣ ಚೌಕಟ್ಟನ್ನು ಒದಗಿಸುತ್ತವೆ.

## ಇಂದ್ರಿಯ ಆರೋಗ್ಯದ ಬಗ್ಗೆ ಧರ್ಮಸ್ಥಳದಲ್ಲಿ ಅಂತಾರಾಷ್ಟ್ರೀಯ ಸಮಾವೇಶ: ಪುನರ್ವಸು ಆಯುರ್ವೇದ ಪದ್ಧತಿ ಬಲವರ್ಧನೆ ಜೊತೆ ಆರೋಗ್ಯಭಾಗ್ಯ–ಡಾ.ಮನೀಷಾ ಕೋಟೆಕಾರ್

**ಮುಂಬಯಿ, ಆ.29:** ನಮ್ಮ ದೇಹದ ಪಂಚೇಂದ್ರಿಯಗಳಿಗೂ ಅವಿನಾಭಾವ ಸಂಬಂಧವಿದ್ದು, ಸಾವಿರಾರು ವರ್ಷಗಳಿಂದ ಬಳಸುತ್ತಿರುವ ಪಾರಂಪರಿಕ ಆಯುರ್ವೇದ ಪದ್ಧತಿ ಮೂಲಕ ಪಂಚೇಂದ್ರಿಯಗಳ ಬಲವರ್ಧನೆಯೊಂದಿಗೆ ಆರೋಗ್ಯಭಾಗ್ಯ ಹೊಂದಬಹುದು ಎಂದು ಕೇಂದ್ರಸರ್ಕಾರದ ಭಾರತೀಯ ಔಷಧ ಪದ್ಧತಿಯ ರಾಷ್ಟ್ರೀಯ ಪರಿಷತ್‌ನ ಅಧ್ಯಕ್ಷ ವೈದ್ಯ ಮನೀಷಾ ಕೋಟೆಕಾರ್ ಹೇಳಿದರು.

ಶನಿವಾರ ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ ಆಪ್ತಾಸ್ ಆಯುರ್ವೇದ ಟ್ರಸ್ಟ್‌ನ ದಶಮಾನೋತ್ಸವದ ಅಂಗವಾಗಿ ಇಂದ್ರಿಯ ಆರೋಗ್ಯದ ಬಗ್ಯೆ ಆಯೋಜಿಸಿದ ಅಂತಾರಾಷ್ಟ್ರೀಯ ಸಮಾವೇಶ 'ಪುನರ್ವಸು' ಉದ್ಘಾಟಿಸಿ ಡಾ| ಮನೀಷಾ ಮಾತನಾಡಿದರು.

ನಮ್ಮ ಸುತ್ತಮುತ್ತಲಿನ ಪ್ರಕೃತಿ–ಪರಿಸರಕ್ಕೂ ನಮ್ಮ ಬದುಕಿಗೂ ಅವಿನಾಭಾವ ಸಂಬಂಧವಿದ್ದು ಪ್ರಗತಿಯ ನೆಪದಲ್ಲಿ ನಾವು ಪ್ರಕೃತಿಯಿಂದ ವಿಮುಖರಾಗಿ, ಪರಿಸರಕ್ಕೆ ಹಾನಿ ಮಾಡುತ್ತಿರುವುದೇ ಇಂದು ಅನೇಕ ರೋಗಗಳು ಪಸರಿಸಲು ಕಾರಣವಾಗಿದೆ ಎಂದು ಅವರು ಹೇಳಿದರು.

ವೈದ್ಯರು ನಿರಂತರ ಕಲಿಕೆ, ಅಧ್ಯಯನ, ಸಂಶೋಧನೆಯೊಂದಿಗೆ ತಮ್ಮ ಜ್ಞಾನಕ್ಷಿತಿಜವನ್ನು ವಿಸ್ತರಿಸಿಕೊಂಡು ಆಧುನಿಕ ತಂತ್ರಜ್ಞಾನದ ಬಳಕೆಯೊಂದಿಗೆ ಕೌಶಲ, ಉತ್ತಮಸಂವಹನ, ಅನುಕಂಪ ಮತ್ತು ಸಹಾನುಭೂತಿಯೊಂದಿಗೆ, ನೈತಿಕತೆಯಿಂದ ರೋಗಿಗಳ ಸೇವೆ ಮಾಡಬೇಕು ಎಂದು ಅವರು ಸಲಹೆ ನೀಡಿದರು.



ಇಂದ್ರಿಯ ಆರೋಗ್ಯ ಅಭಿಯಾನದ ಲೋಗೊ ಅನಾವರಣಗೊಳಿಸಿ, 'ಚೋಟಾ ಚರಕ' ಪುಸ್ತಕ ಬಿಡುಗಡೆಗೊಳಿಸಿದ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರು ಮಾತನಾಡಿ, ದೈನಂದಿನ ಜೀವನದಲ್ಲಿ ಆಯುರ್ವೇದ ಪದ್ಧತಿ ಬಳಕೆಯಿಂದ ಆಯುಷ್ಯ ವೃದ್ಧಿಯೊಂದಿಗೆ ಸುಖ–ಶಾಂತಿ, ನೆಮ್ಮದಿಯ ಜೀವನ ನಡೆಸಬಹುದು. ಉಡುಪಿ, ಹಾಸನ ಮತ್ತು ಬೆಂಗಳೂರಿನಲ್ಲಿರುವ ಎಸ್.ಡಿ.ಎಂ. ಆಯುರ್ವೇದ ಆಸ್ಪತ್ರೆಗಳ ಮೂಲಕ ರಿಯಾಯಿತಿ ದರದಲ್ಲಿ ಉತ್ತಮ ಗುಣಮಟ್ಟದ ಶುಶ್ರೂಷೆ ನೀಡಿ ಆಯುರ್ವೇದ ಪದ್ಧತಿಯನ್ನು ಜನಪ್ರಿಯಗೊಳಿಸಲಾಗುತ್ತಿದೆ. ಪಂಚೇಂದ್ರಿಗಳ ನಿಯಂತ್ರಣದಿಂದ ಆರೋಗ್ಯಭಾಗ್ಯ ಹೊಂದಬಹುದು ಎಂದು ಅವರು ಅಭಿಪ್ರಾಯಪಟಟರು.

ಉಡುಪಿ ಎಸ್.ಡಿ.ಎಂ. ಆಯುರ್ವೇದ ಕಾಲೇಜಿನ ಹಿರಿಯ ವಿದ್ಯಾರ್ಥಿ ಹಾಗೂ ಖ್ಯಾತ ವೈದ್ಯ ಡಾ. ಶರದ್‌ಕುಮಾರ್ ಎಂ. ಇಂದ್ರಿಯ ಆರೋಗ್ಯ ಅಭಿಯಾನದ ಬಗ್ಯೆ ಮಾಹಿತಿ ನೀಡಿ, ದೇಶದಲ್ಲಿರುವ ಅರುನೂರು ಆಯುರ್ವೇದ ಕಾಲೇಜುಗಳ ಆಶ್ರಯದಲ್ಲಿ ಮುಂದಿನ 5 ವರ್ಷಗಳಲ್ಲಿ ಪ್ರತಿವರ್ಷ ಒಂದು ಗ್ರಾಮವನ್ನು ದತ್ತು ತೆಗೆದುಕೊಂಡು ಅಲ್ಲಿ 500 ಮಂದಿ ಸ್ವಯಂ–ಸೇವಕರು ಆಯುರ್ವೇದ ಪದ್ಧತಿ ಬಗ್ಯೆ ಅರಿವು, ಜಾಗೃತಿ ಮೂಡಿಸಲಿದ್ದಾರೆ. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಇಂದು ಧರ್ಮಸ್ಥಳದಿಂದಲೆ ಈ ವಿನೂತನ ಕಾರ್ಯಕ್ರಮ ಶುಭಾರಂಭಗೊಳ್ಳುತ್ತದೆ ಎಂದು ಪ್ರಕಟಿಸಿದರು.

ಶುಭಾಶಂಸನೆ ಮಾಡಿದ ಆಯುಷ್ ಸಲಹೆಗಾರ ಡಾ| ಕೌಸ್ತುಭ ಉಪಾಧ್ಯಾಯ, ಗ್ರಾಮೀಣ ಪ್ರದೇಶಗಳಲ್ಲಿ ಆಯುರ್ವೇದ ಶಿಬಿರಗಳನ್ನು ಆಯೋಜಿಸಿ ಜನಸಾಮಾನ್ಯರಿಗೆ ಇದರ ಬಗ್ಯೆ ಮಾಹಿತಿ, ಮಾರ್ಗದರ್ಶನ ನೀಡಬೇಕು. ಸೇವೆಯ ಬಗ್ಯೆ ದಾಖಲೀಕರಣ ಮಾಡಬೇಕು ಎಂದು ಅವರು ಸಲಹೆ ನೀಡಿದರು. ಕರ್ನಾಟಕ ಸರ್ಕಾರದ ಆಯುಷ್ ಇಲಾಖಾ ಆಯುಕ್ತ ಡಾ. ಸುನಿಲ್ ಪನ್ವಾರ್ ಮಾತನಾಡಿ ಆಯುರ್ವೇದ ವೈದ್ಯರು ಪಾರಂಪರಿಕ ಪದ್ಧತಿಯ ರಾಯಭಾರಿಗಳಾಗಿ ಎಲ್ಲಾ ಕಡೆ ಈ ಪದ್ಧತಿಯನ್ನು ಜನಪ್ರಿಯಗೊಳಿಸಬೇಕು. ಸಾರ್ವಜನಿಕರಿಂದಲೂ ಈ ಪದ್ಧತಿಗೆ ಉತ್ತಮ ಸ್ಪಂದನೆ ದೊರಕುತ್ತಿದ್ದು, ಇನ್ನೂ ಹೆಚ್ಚಿನ ಸಂಶೋಧನೆಗಳನ್ನು ನಡೆಸಬೇಕು ಎಂದು ಅವರು ಹೇಳಿದರು.

ಬೆಂಗಳೂರಿನ ಕ್ಷೇಮವನದ ಸಿಇಓ ಶ್ರದ್ಧಾ ಅಮಿತ್ ಮತ್ತಿತರ ಗಣ್ಯರು ಉಪಸ್ಥಿತರಿದ್ದು,' ಗುರುವಂದನ' ಕಾರ್ಯಕ್ರಮದಡಿಯಲ್ಲಿ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಗೌರವಿಸಲಾಯಿತು.

ಎಸ್‌ಡಿಎಂ ಆಯುರ್ವೇದ ಸಂಸ್ಥೆಗಳ ನಿರ್ದೇಶಕ ಡಾ. ಪ್ರಸನ್ನ ಎನ್. ರಾವ್ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಡಾ| ಅನುಪಮ ವಿ.ಚಿನ್ನಿಕಟ್ಟಿ ಕಾರ್ಯಕ್ರಮ ನಿರ್ವಹಿಸಿದರು. ಡಾ.ಕಿರಣ್.ಕೆ ಧನ್ಯವಾದವಿತ್ತರು. ಉದ್ಘಾಟನಾ ಸಮಾರಂಭಕ್ಕೆ ಪೂರ್ವಭಾವಿಯಾಗಿ, "ಸಂಹಿತಾ" ಮೆರವಣಿಗೆ, ಪ್ರತಿಷ್ಠಾಪನೆ, ವಾದ್ಯಮೇಳ, ಶಂಖನಾದ, ಸಂಹಿತಾ ಪ್ರತಿಷ್ಠಾಪನೆ ಮೊದಲಾದ ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆದವು.

## ವ್ಯಕ್ತಿಗೆ ಸಗಣಿ ತಿನ್ನಿಸಿದ ಮಹಾರಾಷ್ಟ್ರ ಬಜರಂಗದಳ ಕಾರ್ಯಕರ್ತರು

**ಮುಂಬೈ, ಆ. 29:** ಮಹಾರಾಷ್ಟ್ರದ ಜಾಲ್ನಾ ಜಿಲ್ಲೆಯಲ್ಲಿ ದಲಿತ ವ್ಯಕ್ತಿಯೊಬ್ಬರ ಮೇಲೆ ತಮ್ಮನ್ನು ತಾವು ಗೋರಕ್ಷಕರು ಎಂದು ಕರೆದುಕೊಳ್ಳುವ ಬಜರಂಗದಳದ ಕಾರ್ಯಕರ್ತರ ಗುಂಪೊಂದು ಹಲ್ಲೆ ನಡೆಸಿ, ಬಲವಂತವಾಗಿ ಸಗಣಿ ತಿನ್ನಿಸಿರುವ ಅಮಾನವೀಯ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಸಾರ್ವಜನಿಕ ಹಾಗೂ ಸಾಮಾಜಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಇನ್ನೂ ಆಶ್ಚರ್ಯವೆಂದರೆ ಘಟನೆ ನಡೆದು ಹಲವು ದಿನಗಳಾದರೂ ಇನ್ನೂ ಕಿಡಿಗೇಡಿಗಳ ಬಂಧನವಾಗಿಲ್ಲ. ಸಂತ್ರಸ್ತ ಪರಮೇಶ್ವರ್ ಸುಹಾಸ್ ಹಿವಾಳೆ ಅವರು ದೇವಗಾಂವ್ ರಾಜಾದ ಜಾನುವಾರು ಸಂತೆಯಿಂದ ಎತ್ತೊಂದನ್ನು ಖರೀದಿಸಿ, ತಮ್ಮ 11 ವರ್ಷದ ಮಗ ಹಾಗೂ ಸಹೋದ್ಯೋಗಿ ನಾರಾಯಣ ಕಾಂಬ್ಳೆ ಜೊತೆ ವಾಹನದಲ್ಲಿ ಹಿಂತಿರುಗುತ್ತಿದ್ದರು. ಜಾಲ್ನಾದ ಕನ್ಹೈಯಾನಗರ ಪ್ರದೇಶದ ಬಳಿ ವಾಹನವನ್ನು ತಡೆದ ಆರು ಜನರ ಗುಂಪು, ಎತ್ತನ್ನು ಕಸಾಯಿಖಾನೆಗೆ ಮಾರಾಟ ಮಾಡಲು ಒಯ್ಯಲಾಗುತ್ತಿದೆ ಎಂದು ಆರೋಪಿಸಿದೆ. ಸಂತ್ರಸ್ತರು ಎತ್ತು




ಖರೀದಿಸಿದವರ ದಾಖಲೆಗಳನ್ನು ತೋರಿಸಿದರೂ ಲೆಕ್ಕಿಸದ ಕಿಡಿಗೇಡಿಗಳು, ಅವರ ಜಾತಿ ಕೇಳಿ ಜಾತಿ ನಿಂದನೆ ಮಾಡಿದ್ದಾರೆ. ಬಳಿಕ ಪರಮೇಶ್ವರ್ ಅವರ ಮೇಲೆ ಹಲ್ಲೆ ನಡೆಸಿ, ಬಲವಂತವಾಗಿ ಅವರ ಬಾಯಿಗೆ ಸಗಣಿ ತುರುಕಿದ್ದಾರೆ. ಅವರ 11 ವರ್ಷದ ಮಗನಿಗೂ ಸಗಣಿ ತಿನ್ನಿಸಲು ಯತ್ನಿಸಲಾಯಿತಾದರೂ, ತಂದೆ ಆತನನ್ನು ರಕ್ಷಿಸಿದ್ದಾರೆ. ಆರೋಪಿಗಳು ಈ ಕೃತ್ಯವನ್ನು ಮೊಬೈಲ್ನಲ್ಲಿ ವಿಡಿಯೋ ಮಾಡಿ, ಪೊಲೀಸರಿಗೆ ದೂರು ನೀಡಿದರೆ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಬೆದರಿಕೆ ಹಾಕಿದ್ದರು. ದೂರಿನ ಆಧಾರದ ಮೇಲೆ ಪೊಲೀಸರು ವೆಂಕಟೇಶ್ ಭಗತ್, ಅರ್ಜುನ್ ಸಿಂಗ್, ರಿತೇಶ್ ದೇಶಮುಖ್, ಶಿವರಾಜ್ ಪಿಚಾಡೆ, ಯಶ್ ಸರ್ಕೇಟ್ ಮತ್ತು ಸೋಮೇಶ್ ಪಾಟೀಲ್ ಎಂಬ ಆರು ಮಂದಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಕಾಯ್ದೆಯಡಿ ಹಲ್ಲೆ, ಕಾನೂನುಬಾಹಿರ ಗುಂಪುಗಾರಿಕೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ಅಟ್ರಾಸಿಟಿ ತಡೆ) ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಆದಾಗ್ಯೂ, ಎಫ್‌ಐಆರ್ ದಾಖಲಾಗಿ ದಿನಗಳು ಕಳೆದರೂ ಇದುವರೆಗೆ ಯಾವುದೇ ಆರೋಪಿಯನ್ನು ಬಂಧಿಸಲಾಗಿಲ್ಲ ಎಂದು ಪೊಲೀಸರೇ ತಿಳಿಸಿದ್ದಾರೆ. ಪ್ರಕರಣದ ತನಿಖೆಯನ್ನು ಉಪವಿಭಾಗೀಯ ಪೊಲೀಸ್ ಅಧಿಕಾರಿಗೆ ವಹಿಸಲಾಗಿದೆ. ಆರೋಪಿಗಳ ವಿರುದ್ಧ ತಕ್ಷಣವೇ ಕಠಿಣ ಕ್ರಮ ಕೈಗೊಂಡು ಬಂಧಿಸಬೇಕೆಂದು ದಲಿತ ಸಂಘಟನೆಗಳು ಹಾಗೂ ಸಾರ್ವಜನಿಕರು ತೀವ್ರವಾಗಿ ಆಗ್ರಹಿಸುತ್ತಿದ್ದಾರೆ. ಆದರೆ ಯಾಕೆ ಬಂಧಿಸಲಾಗಿಲ್ಲ ಎಂಬ ಬಗ್ಗೆ ಮಾತ್ರ ಪೊಲೀಸರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

# ಪಾದಯಾತ್ರೆ ಮಾಡುವುದಾದರೆ ಮಾಡಲಿ: ಬಿಜೆಪಿಗೆ ಸಿಎಂ ಡಿ.ಕೆ. ಶಿವಕುಮಾರ್ ಸವಾಲು



**ಬೆಂಗಳೂರು, ಆ.28:** ನಾಗೇಂದ್ರ ರಾಜೀನಾಮೆ ವಿಚಾರದಲ್ಲಿ ಬಿಜೆಪಿ ತಮ್ಮ ರಾಜಕೀಯಕ್ಕಾಗಿ ನಿರಪರಾಧಿಯನ್ನು ಬಲಿ ತೆಗೆದುಕೊಂಡಿದೆ. ಯಾವ ತಪ್ಪು ಮಾಡದಿದ್ದರೂ ನಾಗೇಂದ್ರ ರಾಜೀನಾಮೆ ಕೊಟ್ಟಿದ್ದಾರೆ. ರಾಜೀನಾಮೆ ನಂತರವೂ ಬಿಜೆಪಿಯವರು ಪಾದಯಾತ್ರೆ ಮಾಡುವುದಾದರೆ ಮಾಡಲಿ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರಿಗೆ ರಾಜಕೀಯ ಬೇಕು. ನನ್ನ ಒಂದೇ ಒಂದು ಪ್ರಶ್ನೆಗೆ ಬಿಜೆಪಿಯವರು ಉತ್ತರ ಕೊಡಲಿಲ್ಲ. ಯಾವ ಕಾರಣಕ್ಕಾಗಿ ನಾಗೇಂದ್ರ ರಾಜೀನಾಮೆ ಕೇಳಿದರು ಎಂದು ಬಿಜೆಪಿಯವರು ಉತ್ತರಿಸಲಿ ಎಂದು ಹೇಳಿದರು. ಈ ಬಾರಿ ವಿಭಿನ್ನವಾದ ದಸರಾ ಮಾಡುತ್ತೇವೆ. ದಸರಾ ಮೆರವಣಿಗೆಯ ರೂಪವನ್ನೇ ಬದಲಾಯಿಸುತ್ತೇವೆ. ಮೆರವಣಿಗೆಯಲ್ಲಿ ಮಿಲಿಟರಿ, ಸೇನಾ ಪಡೆಗಳು ಬರಲಿವೆ. ಕನ್ನಡದ ಚಿತ್ರ ನಟ-ನಟಿಯರು ಕೂಡ ಮೆರವಣಿಗೆಯಲ್ಲಿ ಸಾಗಲಿದ್ದಾರೆ.

ಒಂದೇ ಪ್ರಕಾರದ ಐದು ಜನಪದ ಕಲಾವಿದರಿಗೆ ಈ ಬಾರಿ ಅವಕಾಶ ಇಲ್ಲ. ಬದಲಾದ ಕಾಲಕ್ಕೆ ತಕ್ಕಂತೆ ಮೆರವಣಿಗೆಯ ರೂಪ ಬದಲಾಯಿಸುತ್ತೇನೆ ಎಂದರು. ಕಂಬಳವನ್ನು ನಾನು ಪ್ರತಿಷ್ಠೆಯಾಗಿ ತೆಗೆದು ಕೊಂಡಿಲ್ಲ. ಇನ್ನೂ ಕಂಬಳದ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ. ಪರಿಸರ ಹಾನಿ ಎನ್ನುವುದೆಲ್ಲಾ ಸುಮ್ಮನೆ ನೆಪ. ಯಾವುದೇ ಪರಿಸರ ಹಾನಿಯಾಗುವುದಿಲ್ಲ, ನೀರು ಕೂಡ ಹೆಚ್ಚಾಗಿ ಬೇಕಾಗಿಲ್ಲ. ಸುಮ್ಮನೆ ಕೆಲವರು ವಿರೋಧ ಮಾಡುತ್ತಿದ್ದಾರೆ. ಈ ಬಗ್ಗೆ ಅಂತಿಮ ತೀರ್ಮಾನ ಮಾಡುತ್ತೇನೆ ಎಂದರು.

**ಸರಳ ದಸರಾ ಇಲ್ಲ:**

ಬರದ ನೆಪದಲ್ಲಿ ದಸರಾವನ್ನು ಸರಳ ಮಾಡಲು ಸಾಧ್ಯವಿಲ್ಲ. ನನ್ನ ನಿಲುವಿನಲ್ಲಿ ಯಾವ ಬದಲಾವಣೆ ಇಲ್ಲ. ದಸರಾ ಅದ್ದೂರಿಯಾಗಿ ಮಾಡುತ್ತೇನೆ, ಅದರಲ್ಲಿ ಬದಲಾವಣೆ ಪ್ರಶ್ನೆಯೇ ಇಲ್ಲ. ದಸರಾ ಮೇಲೆ ಇಡೀ ಪ್ರವಾಸೋದ್ಯಮ ನಿಂತಿದೆ ಎಂದು ಸ್ಪಷ್ಟಪಡಿಸಿದರು.

**ಎಚ್‌ಡಿಕೆಗೆ ತಿರುಗೇಟು:**

ವಿಧಾನಸೌಧ ಮಾರುತ್ತಾರೆ ಎಂಬ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದ ಸಿಎಂ, ಯಾರ್ಯಾರು ಏನೇನು ಮಾರಲು ಹೊರಟಿದ್ದರು ಎಂಬ ಚರಿತ್ರೆ ಬಿಚ್ಚಿಟ್ಟರೆ ಎಲ್ಲವೂ ಬಯಲಾಗುತ್ತದೆ. ನಾನು ಸದ್ಯಕ್ಕೆ ಆ ತಂಟೆಗೆ ಹೋಗುವುದಿಲ್ಲ. ಕುಮಾರಸ್ವಾಮಿಗೆ ಬಾಯಿ ಚಪಲ. 'ಪಲಕ್ಕೆ ಮಾತನಾಡಿ ಖುಷಿ ಪಡಲಿ ಬಿಡಿ.

ಅಸೂಯೆಗೆ ಮದ್ದಿಲ್ಲ, ನಾನು ಸಿಎಂ ಆಗಿರುವುದು ಕೆಲವರಿಗೆ ಅಸೂಯೆ ತಂದಿದೆ. ಕುಮಾರಸ್ವಾಮಿ ಮಾತ್ರವಲ್ಲ, ಬಿಜೆಪಿ ಜೊತೆಗೆ ಎನ್‌ಡಿಎ ಇಡೀ ಕೂಟಕ್ಕೆ ನಾನು ಸಿಎಂ ಆಗಿರುವುದು ಸಹಿಸಲು ಸಾಧ್ಯವಿಲ್ಲ. ಟೀಕೆಗಳು ಸಾಯುತ್ತವೆ, ಮಾಡಿದ ಕೆಲಸ ಉಳಿಯುತ್ತದೆ ಎಂಬುದನ್ನು ನಂಬಿದವನು ನಾನು ಎಂದರು.

### ಹನೂರು ಶೂಟೌಟ್ ಪ್ರಕರಣ ಸಿಐಡಿಗೆ

ಹನೂರು ಶೂಟೌಟ್ ವಿಚಾರಕ್ಕೆ ಸಂಬಂಧಿಸಿದಂತೆ ತನಿಖಾ ವರದಿ ಕೈಸೇರಿದೆ. ಇಡೀ ಪ್ರಕರಣವನ್ನು ಸಿಐಡಿಗೆ ವಹಿಸಿದ್ದೇವೆ, ತನಿಖೆ ನಡೆಯುತ್ತಿದೆ. ಈಗ ಬಂದಿರುವ ತನಿಖಾ ವರದಿಯಲ್ಲಿ ಹಲವು ಅಂಶಗಳಿವೆ. ಆರೋಪಿಗಳು ಹತ್ತಿರದಿಂದ ಶೂಟ್ ಮಾಡಿರುವ ಬಗ್ಗೆ, ಅವರ ಬಳಿ ಏನೇನು ವಸ್ತುಗಳಿದ್ದವು, ಕಾಡಿಗೆ ಯಾವ ಕಾರಣಕ್ಕೆ ಹೋದರು ಎಂಬ ಬಗ್ಗೆ ಪ್ರಸ್ತಾಪವಿದೆ. ಸಿಐಡಿ ತನಿಖೆ ಮುಗಿದ ಬಳಿಕ ಎಲ್ಲವೂ ಬಹಿರಂಗವಾಗುತ್ತದೆ ಎಂದು ಸಿಎಂ ಸ್ಪಷ್ಟಪಡಿಸಿದರು.

### ಗ್ರೇಟರ್ ಮೈಸೂರು ರಚನೆಗೆ ಚಿಂತನೆ

ಕಾವೇರಿ ಸಮಸ್ಯೆ ಇದ್ದ ಕಾರಣ ಮೈಸೂರು ಕಡೆ ಗಮನ ಹರಿಸಲು ಆಗಿರಲಿಲ್ಲ. ಉತ್ತರ ಕರ್ನಾಟಕ ಭಾಗದ ಬಗ್ಗೆ ಗಮನ ಹರಿಸಿದ್ದೆ, ಈಗ ಮೈಸೂರು ಕಡೆಗೂ ಗಮನ ಹರಿಸುತ್ತೇನೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಮೈಸೂರಿನಲ್ಲಿ ಮಾತನಾಡಿದ ಅವರು, ಬೆಂಗಳೂರಿಗಿಂತ ಮೈಸೂರು ಬಹಳ ಅಚ್ಚುಕಟ್ಟಾದ ನಗರ. ಮೈಸೂರು ಅಚ್ಚುಕಟ್ಟಾಗಿ ಬೆಳೆಯುತ್ತಿದೆ, ಇದನ್ನು ಕಾಪಾಡುವುದು ನನ್ನ ಜವಾಬ್ದಾರಿ. ಭವಿಷ್ಯದ ದೃಷ್ಟಿಯಿಂದ ಹಲವು ಯೋಜನೆಗಳನ್ನು ಚಿಂತನೆ ಮಾಡಿದ್ದೇನೆ. ಸಿದ್ದರಾಮಯ್ಯನವರು ಗ್ರೇಟರ್ ಮೈಸೂರು ಬಗ್ಗೆ ಭರವಸೆ ಕೊಟ್ಟಿದ್ದರು, ಅದನ್ನು ಈಡೇರಿಸುವುದು ನಮ್ಮ ಜವಾಬ್ದಾರಿ. ಕೆಲ ದಿನಗಳಲ್ಲೇ ಈ ಭಾಗದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳನ್ನು ಕರೆದು ಸಭೆ ನಡೆಸಿ ಚರ್ಚಿಸುತ್ತೇನೆ ಎಂದರು.

# ಪಂಚಾಯತಿ ವ್ಯಾಪ್ತಿ ಕೆರೆಗಳ ಒತ್ತುವರಿ ತೆರವಿಗೆ ಸಚಿವ ಈಶ್ವರ ಖಂಡ್ರೆ ಕ್ರಮ



**ಬೆಂಗಳೂರು, ಆ.29:** ಕೆರೆಗಳು ಗ್ರಾಮೀಣ ಪ್ರದೇಶದ ಜನರ ಜೀವನಾಡಿಯಾಗಿದ್ದು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಕೆರೆಗಳ ಒತ್ತುವರಿ ತೆರವಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಮುಂದಾಗಿದ್ದಾರೆ. ಈ ಸಂಬಂಧ ಇಲಾಖೆಯ ಕಾರ್ಯದರ್ಶಿ ಯವರಿಗೆ ಲಿಖಿತ ಸೂಚನೆ ನೀಡಿರುವ ಅವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿರುವ ಮತ್ತು ಇಲಾಖೆಯ ನಿರ್ವಹಣೆಯಲ್ಲಿರುವ ಕೆರೆಗಳ ಸಂಖ್ಯೆ ಮತ್ತು ಯಾವ ಯಾವ ಕೆರೆಗಳ ಎಷ್ಟು ಪ್ರದೇಶ ಒತ್ತುವರಿಯಾಗಿದೆ. ಮುಂದಿನ 30 ವರ್ಷಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಳವಾಗುವ ಜನಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು ಮೇಲ್ಮೈ ನೀರಿನಿಂದ ಶುದ್ಧ ಕುಡಿಯುವ ನೀರು ಪೂರೈಕೆಗೆ ಸರ್ಕಾರ ಯೋಜನೆ ರೂಪಿಸಿದ್ದು, ಈ ನಿಟ್ಟಿನಲ್ಲಿ ಪ್ರಮುಖ ಸಿಹಿನೀರಿನ ಮೂಲಗಳಾದ ಕೆರೆ, ಸರೋವರಗಳ ಸಂರಕ್ಷಣೆ ಅತ್ಯಗತ್ಯ ಮತ್ತು ಅನಿವಾರ್ಯವಾಗಿದೆ ಎಂದು ಪತ್ರದಲ್ಲಿ ಈಶ್ವರ ಖಂಡ್ರೆ ತಿಳಿಸಿದ್ದಾರೆ. ನಾಗರಿಕತೆಯ ವಿಕಾಸದಲ್ಲಿ ಕೆರೆಗಳು ಮಹತ್ವದ ಪಾತ್ರ ವಹಿಸುತ್ತಿದ್ದು, ಭೂಮಿಯ ಮೇಲಿರುವ ಸಿಹಿ ನೀರಿನ ಮೂಲವಾದ ಕೆರೆ ಮತ್ತು ಸರೋವರಗಳ ರಕ್ಷಣೆ, ಸುಸ್ಥಿರ ನಿರ್ವಹಣೆ ಹಾಗೂ ಪರಿಸರ ವ್ಯವಸ್ಥೆಯಲ್ಲಿ ಅವುಗಳ ಪಾತ್ರದ ಕುರಿತು ಜಾಗತಿಕವಾಗಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿವರ್ಷ ಆಗಸ್ಟ್ 27 ರಂದು ಆಚರಿಸಲಾಗುವ ವಿಶ್ವ ಕೆರೆ ದಿನದಂದು ಸಚಿವರು ಈ ಸೂಚನೆ ನೀಡಿದ್ದಾರೆ.

# ಪ್ರತಿಭಾವಂತ ವಿದ್ಯಾರ್ಥಿಗಳೇ ನಮ್ಮ ಬೆಂಗಳೂರಿನ ಹೆಮ್ಮೆ-ಭವಿಷ್ಯ: ಸಚಿವ ಕೃಷ್ಣ ಬೈರೇಗೌಡ

**ಬೆಂಗಳೂರು,ಅ,29:** ಪ್ರತಿಭಾವಂತ ವಿದ್ಯಾರ್ಥಿಗಳು– ಯುವಕರೇ ನಮ್ಮ ಬೆಂಗಳೂರಿನ ಹೆಮ್ಮೆ–ಕಿರೀಟ, ರಾಜ್ಯದ ಹಾಗೂ ದೇಶದ ಭವಿಷ್ಯ. ಇಡೀ ಬೆಂಗಳೂರಿನ ಜನತೆಯ ಪರವಾಗಿ ಅವರ ಪ್ರತಿಭೆಯನ್ನು ಸಂಭ್ರಮಿಸುವುದು ನಮ್ಮ ಕರ್ತವ್ಯ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಪ್ರಶಂಸಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಬೆಂಗಳೂರು ಜಿಲ್ಲಾ ಪಂಚಾಯತ್ ವತಿಯಿಂದ ಶನಿವಾರ ಟೌನ್‌ಹಾಲ್‌ನಲ್ಲಿ ಪೌರ ಸನ್ಮಾನ ನಮ್ಮೂರು ಹೆಮ್ಮೆ ಕಾರ್ಯಕ್ರಮ ಆಯೋಜಿಸಿ ಶಾಲಾ ಮತ್ತು ಪದವಿ ಪೂರ್ವ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ 181 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದ ಸಚಿವ ಕೃಷ್ಣ ಬೈರೇಗೌಡ 'ಒಬ್ಬ ವಿದ್ಯಾರ್ಥಿ 99ಕ್ಕೂ ಹೆಚ್ಚು ಅಂಕಗಳನ್ನು ಪಡೆಯುವುದು ಅಷ್ಟು ಸುಲಭದ ಕೆಲಸವಲ್ಲ. ಆತ ಈ ಸಾಧನೆಯ ಶಿಖರ ಏರಲು ಸಾಕಷ್ಟು ಪರಿಶ್ರಮಪಟ್ಟಿರುತ್ತಾನೆ. ಪರಿಶ್ರಮವನ್ನು ಮೈಗೂಡಿಸಿಕೊಂಡವರಿಂದ ಮಾತ್ರ ಇಂತಹ ಮೈಲುಗಲ್ಲು ತಲುಪುವುದು ಸಾಧ್ಯ. ಅಂತಹ ಪ್ರತಿಭೆಯನ್ನು ಸಂಭ್ರಮಿಸುವುದು ನಮ್ಮ ಕರ್ತವ್ಯ. ನಾವು ಸಾಧಿಸದೇ ಇದ್ದರೂ, ಅವರ ಸಾಧನೆಯನ್ನು ನಮ್ಮ ಸಾಧನೆಯೆಂಬಂತೆ ಸಂಭ್ರಮಿಸುವುದು ಹೆಮ್ಮೆಯ ವಿಷಯ' ಎಂದು ಅಭಿಪ್ರಾಯಪಟ್ಟರು.

ತಮ್ಮ ಅನುಭವವನ್ನು ಹಂಚಿಕೊಂಡ ಸಚಿವರು, ತಮ್ಮ ಗ್ರಾಮೀಣ ಕ್ಷೇತ್ರದಲ್ಲಿ ಹೊಸದಾಗಿ ಆರಂಭವಾದ ಒಂದು ಪ್ರೌಢಶಾಲೆಗೆ ಕಟ್ಟಡವೂ ಇಲ್ಲದೆ, ಶಾಲಾ ಕೊಠಡಿಯೂ ಇಲ್ಲದೆ, ಕೇವಲ ಒಬ್ಬ ಶಿಕ್ಷಕರಿದ್ದರೂ ಶೇ.100 ಫಲಿತಾಂಶ ಬಂದಿತ್ತು. ಆದರೆ ಎಲ್ಲ ಮೂಲಸೌಕರ್ಯಗಳಿದ್ದ ಮತ್ತೊಂದು ಶಾಲೆಯಲ್ಲಿ ಶೇ.35ರಿಂದ 40ರಷ್ಟು ಮಾತ್ರ ಫಲಿತಾಂಶ ಬಂದಿತ್ತು. ಹೀಗಾಗಿ ನಮಗೆ ಏನೆಲ್ಲಾ ಸವಲತ್ತು ಇಲ್ಲ ಎಂದು ಕೊರಗುವುದಕ್ಕಿಂತ, ಇದ್ದ ಸವಲತ್ತಿನಲ್ಲೇ ಸಾಧಿಸಿ ತೋರಿಸಬೇಕು. ಕೊಟ್ಟ ಕುದುರೆಯನ್ನು ಏರದವನು ಶೂರನೂ ಅಲ್ಲ, ವೀರನೂ ಅಲ್ಲ. ಜೀವನದಲ್ಲಿ ನಮ್ಮ ಪರಿಶ್ರಮವಿದ್ದಲ್ಲಿ, ನಮ್ಮ ಗುರಿಗೆ ಯಾವುದೇ ಅಡ್ಡಗೋಡೆಯೂ ನಿಲ್ಲಲು ಸಾಧ್ಯವಿಲ್ಲ ಉದಾಹರಿಸಿದರು.

ಸೌಲಭ್ಯಗಳ ಕೊರತೆಯನ್ನು ಸಾಧನೆಗೆ ಅಡ್ಡಿಯಾಗಲು ಬಿಡಬಾರದು. ಎಲ್ಲಿ ಛಲ ಮತ್ತು ಪರಿಶ್ರಮ ಇರುತ್ತದೆಯೋ ಅಲ್ಲಿ ಯಾವ ಸವಾಲೂ ಅಡ್ಡಿಯಾಗುವುದಿಲ್ಲ. ಗುರಿಯಿಟ್ಟು ಮುನ್ನಡೆದರೆ ಏನನ್ನಾದರೂ ಸಾಧಿಸಬಹುದು. ನಿಮ್ಮ ಶ್ರದ್ಧೆ ಮತ್ತು ಪರಿಶ್ರಮಕ್ಕೆ ಯಾವ ಗೋಡೆಯೂ ಅಡ್ಡಿಯಾಗಲು ಸಾಧ್ಯವಿಲ್ಲ ಎಂದು ಹೇಳಿದರು.



ನನ್ನ ಕ್ಷೇತ್ರದಲ್ಲೂ ಪ್ರತಿವರ್ಷ ನೂರಾರು ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಸಿದ್ದೇನೆ. ಅಪಾರ್ಟ್‌ಮೆಂಟ್ ಮಾಲೀಕರ ಮಕ್ಕಳಿಗಿಂತ, ಅಲ್ಲಿ ಕೆಲಸ ಮಾಡುವವರ ಮಕ್ಕಳು ಹೆಚ್ಚು ಅಂಕಗಳನ್ನು ಪಡೆದಿರುವ, ಪಾನಿಪುರಿ ಅಂಗಡಿಯವರ ಮಗ 625ಕ್ಕೆ 625 ಅಂಕಗಳನ್ನು ಪಡೆದಿರುವ ನಿದರ್ಶನಗಳನ್ನು ಕಂಡಿದ್ದೇನೆ. ಸಾಕಷ್ಟು ಮಿತಿಗಳ ನಡುವೆಯೂ ಆ ಮಕ್ಕಳ ಸಾಧನೆ ಅಪಾರ. ಓದಿನಲ್ಲಿ ಆಸಕ್ತಿ ಹೊಂದಿರುವ ಮಕ್ಕಳಿಗೆ ಶಾಲೆ ಮುಖ್ಯವಲ್ಲ; ಪರಿಶ್ರಮ ಮುಖ್ಯ. ಪರಿಶ್ರಮವೇ ಯಶಸ್ಸಿನ ಕೀಲಿ ಎಂದರು. ಪ್ರತಿಯೊಬ್ಬ ವೃತ್ತಿಪರನೂ, ಪ್ರತಿಯೊಬ್ಬ ಸಾಧಕನೂ ತನ್ನ ಕ್ಷೇತ್ರದಲ್ಲಿ ಸಮಾನ ಗೌರವಕ್ಕೆ ಅರ್ಹ. ಯಾವ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡರೂ ಶ್ರದ್ಧೆ ಮತ್ತು ಪರಿಶ್ರಮ ಇದ್ದರೆ ಸಾಧನೆ ಸಾಧ್ಯ. ಆದ್ದರಿಂದ ನಮ್ಮ ಯುವಕರು ತಮ್ಮ ಆಸಕ್ತಿಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು, ಅದರಲ್ಲಿ ಅತ್ಯುತ್ತಮವಾಗಿ ಬೆಳೆಯಬೇಕು ಎಂದು ವಿದ್ಯಾರ್ಥಿಗಳಿಗೆ ಸಚಿವರು ಕಿವಿಮಾತು ಹೇಳಿದರು.

### ಪ್ರತಿಭಾವಂತ 181 ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ

**ನಮ್ಮೂರ ಹೆಮ್ಮೆ ಕಾರ್ಯಕ್ರಮದಲ್ಲಿ 106 ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಗಳು, 45 ಪಿಯುಸಿ ವಿದ್ಯಾರ್ಥಿಗಳು ಹಾಗೂ ಜಿಬಿಎ ಶಾಲೆಗಳಲ್ಲಿ ವ್ಯಾಸಂಗ ಮಾಡಿದ 30 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 181 ಪ್ರತಿಭಾವಂತ ವಿದ್ಯಾರ್ಥಿಗಳನ್ನುಯುವ ಸಾಧಕರಿಗೆ ಪ್ರಮಾಣಪತ್ರ, ಪದಕ, ನೆನಪಿನ ಕಾಣಿಕೆ, ಸ್ಮಾರ್ಟ್ ವಾಚ್, ಬ್ಯಾಗ್, ಶಾಲು ಮತ್ತು ಕುಡಿಯುವ ನೀರಿನ ಬಾಟಲಿಗಳನ್ನು ನೀಡಿ ಗೌರವಿಸಲಾಯಿತು. ಅಲ್ಲದೆ, ಎಸ್‌ಎಸ್‌ಎಲ್‌ಸಿಯ ಮೊದಲ ಐದು ಅತ್ಯುತ್ತಮ ಸಾಧಕರು ಮತ್ತು ಪಿಯುಸಿಯ ಮೂರು ಅಗ್ರ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಟ್ಯಾಬ್ಲೆಟ್‌ಗಳನ್ನು ವಿತರಿಸಲಾಯಿತು.**

# ಬಿ. ನಾಗೇಂದ್ರ ರಾಜೀನಾಮೆ ವಿಚಾರ: ದಲಿತ ಅಸ್ಮಿತೆ ಬಳಸುತ್ತಿರುವ ಕಾಂಗ್ರೆಸ್– ಅಶೋಕ್

**ಬೆಂಗಳೂರು,ಆ.29:** ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣದ ಆರೋಪದ ಹಿನ್ನೆಲೆಯಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಿ. ನಾಗೇಂದ್ರ ಅವರನ್ನು ಸಮರ್ಥಿಸಿಕೊಳ್ಳಲು ಕಾಂಗ್ರೆಸ್ ಸರ್ಕಾರವು "ದಲಿತ ಅಸ್ಮಿತೆ"ಯ ವಿಷಯವನ್ನು ಬಳಸಿಕೊಳ್ಳುತ್ತಿದೆ ಎಂದು ಹಿರಿಯ ಬಿಜೆಪಿ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ. ವಿರೋಧ ಪಕ್ಷಗಳು ದಾಖಲೆ ಸಹಿತ ಸಾಕ್ಷ್ಯಗಳನ್ನು ಮಂಡಿಸಿದ ನಂತರ ವಷ್ಟೇ ಸಚಿವರು ಹುದ್ದೆಗೆ ರಾಜೀನಾಮೆ ನೀಡಿದರು ಎಂದು ಅವರು ಹೇಳಿದ್ದಾರೆ.

ಸುಮಾರು 89 ಕೋಟಿ ರೂ. ಗಳ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣದ ಆರೋಪದ ಹಿನ್ನೆಲೆಯಲ್ಲಿ, ತಮ್ಮನ್ನು ರಾಜ್ಯ ಸಚಿವ ಸಂಪುಟದಿಂದ ಕೈಬಿಡಬೇಕೆಂದು ವಿರೋಧ ಪಕ್ಷಗಳು ನಡೆಸಿದ ನಿರಂತರ ಪ್ರತಿಭಟನೆಯ ನಂತರ ನಾಗೇಂದ್ರ ಶುಕ್ರವಾರ ರಾಜೀನಾಮೆ ನೀಡಿದ್ದರು.

ಜೂನ್ 2024ರಲ್ಲಿ ನಿಗಮದ ಲೆಕ್ಕಪತ್ರ ಅಧೀಕ್ಷಕ ಪಿ. ಚಂದ್ರಶೇಖರನ್ ಅವರ ಸಾವಿನ ಮೂಲಕ ಈ ಹಗರಣದ ವಿಷಯ ಬೆಳಕಿಗೆ ಬಂದಿತ್ತು. ಆದರೆ, ಅವರಿಗೆ ನ್ಯಾಯ ಒದಗಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಟೀಕಿಸಿದ್ದಾರೆ.

ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿದ ನಂತರ ನಾಗೇಂದ್ರ ಅವರನ್ನು ಸಂತ್ರಸ್ತರೆಂಬಂತೆ ಯಾಕೆ ಬಿಂಬಿಸಲಾಗುತ್ತಿದೆ ಎಂದೂ ಅವರು ಪ್ರಶ್ನಿಸಿದರು. ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್‌ನಿಂದ ತೀವ್ರ ಒತ್ತಡದ ಕಾರಣ ನಾಗೇಂದ್ರ ರಾಜೀನಾಮೆ ನೀಡಿದರು. ಆದರೆ, ಈ ಸಂದರ್ಭದಲ್ಲಿ 'ದಲಿತ' ವ್ಯಕ್ತಿಯೊಬ್ಬರಿಗೆ ಅವಮಾನ ಮಾಡಲಾಗಿದೆ ಎಂದು ಅವರು ವಿರೋಧ ಪಕ್ಷಗಳ ವಿರುದ್ಧವೇ ಆರೋಪ ಹೊರಿಸಿದರು. ಅಲ್ಲದೆ, ತಾವು ಪಕ್ಷಕ್ಕೆ ಮುಜುಗರ ಉಂಟು ಮಾಡಲು ಅಥವಾ 'ಮನುವಾದಿ'ಗಳಿಗೆ ಮೇಲುಗೈ ಸಿಗುವಂತೆ ಮಾಡಲು ಬಯಸುವುದಿಲ್ಲ ಎಂದೂ ಅವರು ಹೇಳಿದ್ದರು.



ಪಿ. ಚಂದ್ರಶೇಖರನ್ ಕೂಡ ಒಬ್ಬ ದಲಿತರಾಗಿದ್ದರು ಮತ್ತು ಹಗರಣವನ್ನು ಬಯಲಿಗೆಳೆದ ನಂತರ ಆತ್ಮಹತ್ಯೆ ಮಾಡಿಕೊಂಡರು. ಅವರಿಗೆ ನೀವು ನ್ಯಾಯ ಒದಗಿಸುತ್ತಿಲ್ಲ. ಅವರ ಕುಟುಂಬಕ್ಕೆ ನ್ಯಾಯ ಸಿಕ್ಕಿಲ್ಲ. ಅವರ ಮಕ್ಕಳು ಬೀದಿ ಪಾಲಾಗಿದ್ದಾರೆ ಎಂದು ಅಶೋಕ್ ಆರೋಪಿಸಿದರು. ಚಂದ್ರಶೇಖರನ್ ಅವರ ಸಾವಿನಿಂದಲೇ ಹಣದ ದುರ್ಬಳಕೆಯ ವಿಷಯ ಬೆಳಕಿಗೆ ಬಂದಿತು. ಇಲ್ಲದಿದ್ದರೆ ಬಿಲ್ ಹೊಂದಾಣಿಕೆಗಳ ಮೂಲಕ ಈ ವಿಷಯವನ್ನು ಮುಚ್ಚಿಹಾಕಲಾಗುತ್ತಿತ್ತು ಎಂದು ಪ್ರತಿಪಾದಿಸಿದರು.

# 9 ವಿಧಾನಸಭಾ ಕ್ಷೇತ್ರಗಳಲ್ಲಿ ಪಾದಯಾತ್ರೆ: ಶ್ರೀರಾಮುಲು




**ಬೆಂಗಳೂರು,ಆ.29:** ಸೆಪ್ಟೆಂಬರ್ 1 ರಂದು ಲಿಂಗಸಗೂರಿನಿಂದ ಆರಂಭವಾಗಲಿರುವ ಬಿಜೆಪಿ ಪಾದಯಾತ್ರೆ ಸೆಪ್ಟೆಂಬರ್ 10 ರಂದು ಬಳ್ಳಾರಿಯಲ್ಲಿ ಮುಕ್ತಾಯವಾಗಲಿದೆ.

ಒಂಬತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಪಾದಯಾತ್ರೆ ಹಾದು ಬರಲಿದೆ ಎಂದು ಮಾಜಿ ಸಚಿವ ಶ್ರೀರಾಮುಲು ತಿಳಿಸಿದ್ದಾರೆ.

ಪಾದಯಾತ್ರೆಯ ಲೋಗೋ ಬಿಡುಗಡೆ ಮಾಡಿ ಮಾತನಾಡಿದ ಅವರು, ಲಿಂಗಸಗೂರಿನಲ್ಲಿ ಬೃಹತ್ ಸಮಾವೇಶ ನಡೆಸಿ ಪಾದಯಾತ್ರೆಗೆ ಚಾಲನೆ ನೀಡಲಾಗುವುದು. ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಎಚ್.ಡಿ ಕುಮಾರಸ್ವಾಮಿ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧಪಕ್ಷದ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಹಲವು ಮುಖಂಡರು ಈ ವೇಳೆ ಹಾಜರಿರಲಿದ್ದಾರೆ. ಮಸ್ಕಿ, ಸಿಂಧನೂರು, ಕಾರಟಗಿ, ಗಂಗಾವತಿ, ಕಂಪ್ಲಿ, ಸಂಡೂರು, ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಮೂಲಕ ಸಾಗುವ ಪಾದಯಾತ್ರೆ ಬಳ್ಳಾರಿ ನಗರದಲ್ಲಿ ಸಮಾರೋಪಗೊಳ್ಳಲಿದೆ ಎಂದರು.

ಸಚಿವ ನಾಗೇಂದ್ರ ಅವರು ವಾಲ್ಮೀಕಿ ಹಗರಣ ಸಂಬಂಧ ಎರಡು ಬಾರಿ ರಾಜೀನಾಮೆ ನೀಡಿದ್ದಾರೆ. ಇದು ವಿಶೇಷ. ಹಗರಣ ನಡೆದಿರುವುದನ್ನು ಆಗಿನ ಸಿಎಂ ಸಿದ್ದರಾಮಯ್ಯ ಅವರು ಒಪ್ಪಿಕೊಂಡಿದ್ದರು. ರೂ.87 ಕೋಟಿ ಹಣ ವರ್ಗಾವಣೆ ಆಗಿದ್ದು ಬಯಲಿಗೆ ಬಂದಿತ್ತು. ಲೋಕಸಭಾ ಚುನಾವಣೆಯಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಬಿಜೆಪಿ ಸೋಲಿಸಲು ವಾಲ್ಮೀಕಿ ನಿಗಮದ ಹಣ ಬಳಕೆಯಾಗಿತ್ತು ಎಂದು ವಿವರಿಸಿದರು.

ನಾಗೇಂದ್ರ ರಾಜೀನಾಮೆಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ ಸದಸ್ಯರು ಸದನದಲ್ಲಿ ಸಾಕಷ್ಟು ಹೋರಾಟ ಮಾಡಿದರು. ಅವರಿಗೆ ದಲಿತ ಮತ್ತು ಹಿಂದುಳಿದ ವರ್ಗಗಳ ಪರವಾಗಿ ಧನ್ಯವಾದಗಳು ಎಂದರು.

# ಪಾರ್ಕಿಂಗ್ ಸಮಸ್ಯೆಗೆ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಪರಿಹಾರ: ಆಯುಕ್ತ ಜಗದೀಶ್



**ಬೆಂಗಳೂರು, ಆ29** –ನಗರದ ಪ್ರಮುಖ ವಾಣಿಜ್ಯ ಹಾಗೂ ಜನನಿಬಿಡ ಪ್ರದೇಶಗಳಲ್ಲಿನ ಪಾರ್ಕಿಂಗ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಕೇಂದ್ರ ನಗರ ಪಾಲಿಕೆ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೆ ಮುಂದಾಗಿದೆ.

ಮೊದಲ ಹಂತದಲ್ಲಿ ನಗರದ 23 ಪ್ರಮುಖ ರಸ್ತೆಗಳಲ್ಲಿ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಆರಂಭಿಸಲು ನಿರ್ಧರಿಸಲಾಗಿದ್ದು, ಈ ರಸ್ತೆಗಳಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಶೀಘ್ರದಲ್ಲೇ ಸ್ಮಾರ್ಟ್ ಪಾರ್ಕಿಂಗ್ ಕಾರ್ಯ ಆರಂಭವಾಗಲಿದೆ. ವಾಹನ ಸವಾರರು ಮೊಬೈಲ್ ಆಪ್ ಮೂಲಕ ಪಾರ್ಕಿಂಗ್ ಸ್ಥಳದ ಲಭ್ಯತೆಯನ್ನು ಗುರುತಿಸಿ, ವಾಹನ ನಿಲುಗಡೆ ಮಾಡಲು ಅವಕಾಶ ಕಲ್ಪಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಸದ್ಯ 23 ರಸ್ತೆಗಳಲ್ಲಿ ಸ್ಮಾರ್ಟ್ ಪಾರ್ಕಿಂಗ್ ಜಾರಿಗೊಳಿಸಲು ಸಿದ್ಧತೆ ನಡೆಯುತ್ತಿದ್ದರೆ, ಮುಂದಿನ ಹಂತದಲ್ಲಿ ಇನ್ನೂ 73 ರಸ್ತೆಗಳಿಗೆ ಈ ವ್ಯವಸ್ಥೆಯನ್ನು ವಿಸ್ತರಿಸಲು ಚಿಂತನೆ ನಡೆಸಲಾಗಿದೆ. ಆದರೆ, ಈ 73 ರಸ್ತೆಗಳಲ್ಲಿ ಯೋಜನೆ ಕೈಗೆತ್ತಿಕೊಳ್ಳಲು ಸದ್ಯ ಖಾಸಗಿ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ ಎನ್ನಲಾಗಿದೆ. ಯೋಜನೆಯಿಂದ ಆರ್ಥಿಕ ನಷ್ಟ ಉಂಟಾಗುವ ಆತಂಕ ಇದಕ್ಕೆ ಕಾರಣವಾಗಿದೆ. ಮೊದಲ ಹಂತದ 23 ರಸ್ತೆಗಳಲ್ಲಿ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಯಿಂದ ಕೇಂದ್ರ ನಗರ ಪಾಲಿಕೆಗೆ ವಾರ್ಷಿಕವಾಗಿ ಸುಮಾರು 3 ಕೋಟಿ ರೂಪಾಯಿ ಆದಾಯ ನಿರೀಕ್ಷಿಸಲಾಗಿದೆ. ಮೊಬೈಲ್ ಆ?ಯಪ್ ಆಧಾರಿತ ಪಾರ್ಕಿಂಗ್ ವ್ಯವಸ್ಥೆಯಿಂದ ವಾಹನ ಸವಾರರು ಖಾಲಿ ಪಾರ್ಕಿಂಗ್ ಸ್ಥಳಕ್ಕಾಗಿ ರಸ್ತೆಗಳಲ್ಲಿ ಸುತ್ತಾಡುವ ಸಮಸ್ಯೆ ಕಡಿಮೆಯಾಗುವ ನಿರೀಕ್ಷೆಯಿದೆ. ಜೊತೆಗೆ, ಅನಧಿಕೃತ ಪಾರ್ಕಿಂಗ್‌ಗೆ ಕಡಿವಾಣ ಹಾಕಿ ನಗರದಲ್ಲಿ ಸಂಚಾರ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶವನ್ನು ಕೇಂದ್ರ ನಗರ ಪಾಲಿಕೆ ಹೊಂದಿದೆ. ಎಂದು ಅಯುಕ್ತ ಜಗದೀಶ್ ತಿಳಿಸಿದರು.

# ವಿಧಾನಮಂಡಲ ಅಧಿವೇಶನ ನಡೆಯದಿರಲು ಬಿಜೆಪಿಯೇ ಕಾರಣ: ಶಿವರಾಜ್ ತಂಗಡಗಿ ಟೀಕೆ

**ಬೆಂಗಳೂರು, ಆ.29 –** ಸಚಿವ ಬಿ.ನಾಗೇಂದ್ರ ಮತ್ತು ವಾಲ್ಮೀಕಿ ಹಗರಣ ಪ್ರಕರಣವು ಕರ್ನಾಟಕದ ಅಧಿವೇಶನ ನಡೆಯದಿರಲು ಕಾರಣವಾಗಿತ್ತು, ಜೊತೆಗೆ ರಾಜ್ಯ ರಾಜಕೀಯದಲ್ಲಿ ಹೆಚ್ಚು ಚರ್ಚೆ ಆಗುತ್ತಿತ್ತು. ಇದೀಗ ಸಚಿವ ಬಿ.ನಾಗೇಂದ್ರ ರಾಜೀನಾಮೆ ನೀಡಿದ್ದಾರೆ. ಅದಾದ ಬಳಿಕವೂ ಇದೇ ವಿಚಾರ ಮತ್ತೆ ಚರ್ಚೆ ಆಗುತ್ತಲೇ ಇದೆ. ಇದೀಗ ಬಿಜೆಪಿ ವಿರುದ್ಧ ಕಾಂಗ್ರೆಸ್ ಮತ್ತೋರ್ವ ಸಚಿವ ಶಿವರಾಜ ತಂಗಡಗಿ ತಿರುಗೇಟು ನೀಡಿದ್ದಾರೆ.

ದಶಕಗಳ ಕಾಲ ದೇಶ ಆಳಿದ ಕಾಂಗ್ರೆಸ್ ಪಕ್ಷ ಬ್ರಿಟಿಷರಿಗೇ ಹೆದರಿಲ್ಲ. ಇನ್ನು ಬಿಜೆಪಿಯವರು ಯಾವ ಪುಟಗೋಸಿ ಎಂದು ಅವರು ಕಿಡಿ ಕಾರಿದ್ದಾರೆ. ಯಾರಿಗೂ ಹೆದರಿ ಬಿ.ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿಲ್ಲ. ಪಕ್ಷಕ್ಕೆ ಮುಜುಗರವಾಗಬಾರದು ಹಾಗೂ ಸ್ವಾಭಿಮಾನಕ್ಕೆ ಧಕ್ಕೆಯಾಗಬಾರದು ಎಂಬ ಕಾರಣಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಎಂದು ಅವರು ತಮ್ಮ ನಡೆ ಸಮರ್ಥಿಸಿಕೊಂಡರು.ತಾಕತ್ತಿದ್ದರೆ ಜನತಾ ನ್ಯಾಯಾಲಯದ ಮುಂದೆ ಬರಲಿ ಎಂದು ನಾಗೇಂದ್ರ ಅವರು ಬಿಜೆಪಿ ಅವರಿಗೆ ಸವಾಲು ಹಾಕಿದ್ದಾರೆ. ಕಾಂಗ್ರೆಸ್ ಚುನಾವಣೆಗೆ ಹೆದರಲ್ಲ, ಚುನಾವಣೆಗೆ ಬರುವ ತಾಕತ್ತು ರಾಜ್ಯ ಬಿಜೆಪಿ ನಾಯಕರಿಗೂ ಇದೆಯೇ? ಎಂದು ಪ್ರಶ್ನಿಸಿದರು. ಜೊತೆಗೆ ಜೆಡಿಎಸ್, ಬಿಜೆಪಿ ನಾಯಕರ ಮೇಲಿನ ಪ್ರಕರಣಗಳ ಕುರಿತು ಮಾತನಾಡಿದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಮೇಲೆ ಯಾವ ಯಾವ ಪ್ರಕರಣಗಳು ಇದೆ ಎಂಬುದು ಪ್ರಧಾನಿ ಅವರಿಗೆ ತಿಳಿದಿಲ್ಲವೇ? ಶಾಸಕ ಜನಾರ್ದನ್ ರೆಡ್ಡಿ ಅವರ ಪ್ರಕರಣದಲ್ಲಿ ಜನಪ್ರತಿನಿಧಿಗಳ ನ್ಯಾಯಾಲಯ ಯಾವ ತೀರ್ಪು ನೀಡಿತ್ತು ಎಂಬುದು ತಿಳಿದಿಲ್ಲವೇ? ಬಿಜೆಪಿಯವರು ಇವರಿಬ್ಬರ ರಾಜೀನಾಮೆಯನ್ನು ಪಡೆಯುತ್ತಾರೆಯೇ ಎಂದು ಖಾರವಾಗಿ ಪ್ರಶ್ನಿಸಿದರು. ಅಷ್ಟು ಮಾತ್ರವಲ್ಲ ದೇಶದಲ್ಲಿನ ಒಂದಿಬ್ಬರು ಬಿಜೆಪಿಗರ ಮೇಲೆ ಅತ್ಯಾಚಾರದ ಆರೋಪ ಇದೆ ಎಂದು ಸಚಿವರು ದೂರಿದರು. ನಾಗೇಂದ್ರ ಅವರಿಗೆ ವಿಶೇಷ ತನಿಖಾ ತಂಡ ಕ್ಲೀನ್ ಚೀಟ್ ನೀಡಿದ ಹಿನ್ನೆಲೆಯಲ್ಲಿ ಅವರನ್ನು ಪುನಃ ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಲಾಗಿತ್ತು. ಆದರೆ ನೀಟ್ ವಿಚಾರದಲ್ಲಿ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಟ್ಟ ಕಾರಣಕ್ಕೆ ಜಿದ್ದಿನಿಂದ ರಾಜ್ಯದಲ್ಲಿ ಸದನ ನಡೆಯದಂತೆ ಬಿಜೆಪಿಯವರು ರಾಜಕೀಯ ನಾಟಕ ಮಾಡಿದರು ಎಂದು ಅವರು ವಿವರಿಸಿದರು.



# ಸಮಾವೇಶದ ಮುಖ್ಯ ಉದ್ದೇಶ ಯುವ ಉದ್ದಿಮೆದಾರರನ್ನು ಉತ್ತೇಜಿಸಿ, ಜಾಗತಿಕ ವ್ಯಾಪಾರ, ವಹಿವಾಟುಗಳಲ್ಲಿ ತೊಡಗಿಸಲು ಪ್ರೇರೇಪಿಸುವುದು

**ಬೆಂಗಳೂರು, ಆ.29–** ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಎಸ್.ಈ.ಸುಧೀಂದ್ರ ಅವರು ಕರ್ನಾಟಕ ಆರ್ಯ ವೈಶ್ಯ ಮಹಾಸಭಾ ರಾಜ್ಯಾಧ್ಯಕ್ಷ ಅರ್. ಪಿ ರವಿಶಂಕರ್ ಅವರೊಂದಿಗೆ ಇಂದು ಸುವರ್ಣ ಕನ್ನಡ ಭವನ, ಕೋಲಾರದಲ್ಲಿ ಆರ್ಯವೈಶ್ಯ ಭಾಂದವರೊಂದಿಗೆ ಸಂವಾದ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಎಸ್.ಈ.ಸುಧೀಂದ್ರ ಅವರು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಡಿಸೆಂಬರ್ 25–27ರವರೆಗೆ ಮೂರು ದಿನಗಳ ಕಾಲ ಬೆಂಗಳೂರಿನ ವಸ್ತು ಪ್ರದರ್ಶನ ಕೇಂದ್ರದಲ್ಲಿ (BIEC) "ಗ್ಲೋಬಲ್ ಆಕ್ಸಿಲರೇಟರ್ ವಿಷನ್ ಸಮಿಟ್" ಆಯೋಜಿಸುತ್ತಿದ್ದು, ಈ ಸಮಿಟ್‌ನ ಪ್ರಚಾರ ಅಭಿಯಾನ (CURTAIN RAISER) ಉದ್ಘಾಟನೆ ಮತ್ತು ರಾಜ್ಯದ ಮುಖ್ಯಮಂತ್ರಿಗಳಿಗೆ ಫ್ರೀಡಂ ಪಾರ್ಕ್‌ನಲ್ಲಿ ಹಿಂದಿನ ಭಾನುವಾರ ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭದ ಕುರಿತು ಸಮಾಜದ ಬಂಧುಗಳ ಗಮನಕ್ಕೆ ತಂದರು. ಮುಂಬರುವ "ಗ್ಲೋಬಲ್ ಆಕ್ಸಿಲರೇಟರ್ ವಿಷನ್ ಸಮಿಟ್" ಅತ್ಯಂತ ಮಹತ್ವದಾಗಿದ್ದು ಮುಂದಿನ ಎರಡು ತಿಂಗಳಗಳ ಕಾಲ ಈ ಕಾರ್ಯಕ್ರಮಕ್ಕೆ ಪ್ರಚಾರ ನೀಡಿ ದೇಶವಿದೇಶಗಳ ಪ್ರತಿನಿಧಿಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುತ್ತಿರುವುದು ವಿಶೇಷವಾಗಿದೆ ಎಂದರು. ಈ ಸಮಿಟ್‌ನ ಮುಖ್ಯ ಉದ್ದೇಶ ಕ್ರಿಯಾಶೀಲ ಯುವ ಉದ್ದಿಮೆದಾರರುಗಳನ್ನು ಉತ್ತೇಜಿಸುವುದು, ಜಾಗತಿಕ ವ್ಯಾಪಾರ, ವಹಿವಾಟುಗಳಲ್ಲಿ ಇಂದಿನ ಯುವ ಪೀಳಿಗೆಯನ್ನು ತೊಡಗಿಸಲು ಪ್ರೇರೇಪಿಸುವುದು ಆಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.




ಅದರಲ್ಲೂ ಮುಖ್ಯವಾಗಿ ಜಾಗತಿಕ ವಾಣಿಜ್ಯ, ಬಂಡವಾಳ ಹೂಡಿಕೆ, ಉದ್ದಿಮೆದಾರರ ಅವಿಷ್ಕಾರಗಳು, ಮಹಿಳಾ ಉದ್ಯಮೆದಾರರುಗಳಿಗೆ ಜಾಗೃತಿ, ಯುವ ಪೀಳಿಗೆಯನ್ನು ಉತ್ತೇಜಿಸಿ ಸಾಮಾಜಿಕ ಕಾರ್ಯಕ್ರಮಗಳಲ್ಲಿಯೂ ಸಹ ತೊಡಗಿಸಲು ಪ್ರೇರಣೆಯಾಗಲಿದೆ ಎಂದರು. ಮಂಡಳಿಯ ಅಧ್ಯಕ್ಷನಾಗಿ ರಾಜ್ಯದಲ್ಲಿ ಜೈವಿಕ ಇಂಧನ ಕಾರ್ಯ ಯೋಜನೆಗಳಿಗೆ ಹಲವಾರು ನೂತನ ಕಾರ್ಯ ಯೋಜನೆಗಳನ್ನು ರೂಪಿಸುತ್ತಿದ್ದು ಅದರಲ್ಲೂ ಮುಖ್ಯವಾಗಿ ನೂತನ ಜೈವಿಕ ಇಂಧನ ನೀತಿಯನ್ನು ಸರ್ಕಾರ ಅನುಮೋದನೆ ನೀಡಿದಲ್ಲಿ ರಾಜ್ಯದಲ್ಲಿ ಹಲವಾರು ಕೈಗಾರಿಕೆಗಳ ಸ್ಥಾಪನೆಗೆ ದೇಶವಿದೇಶಗಳಿಂದ ಬಂಡವಾಳ ಹೂಡಿಕೆದಾರರು ಆಸಕ್ತಿವಹಿಸಿದ್ದು ಜೈವಿಕ ಇಂಧನ ಉತ್ಪಾದನೆಯಲ್ಲಿ ಅದರಲ್ಲೂ ಮುಖ್ಯವಾಗಿ ಕಂಪ್ರೆಸ್ಡ್ ಬಯೋಗ್ಯಾಸ್ ಉತ್ಪಾದಿಸಿ ಉದ್ದೇಶಿತ ಆಟೋ ಮೊಬೈಲ್‌ಗಳಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಬಳಕೆಯ ಗುರಿಯಾದ ಶೇ 6% ಸಾಧಿಸಲು ನೆರವಾಗಲಿದೆ ಎಂದರು. ಈ ಜೈವಿಕ ಇಂಧನ ಕಾರ್ಯ ಯೋಜನೆಗಳ ವಿಚಾರ ವಿನಿಮಯಕ್ಕಾಗಿ ನೇಪಾಳ, ಜರ್ಮನಿ, ಅಮೆರಿಕಾ ದೇಶಗಳ ಜೈವಿಕ ಇಂಧನ ಕೈಗಾರಿಕೆಗಳಿಗೆ ಭೇಟಿ ನೀಡಿ, ಅಲ್ಲಿನ ನೀತಿ ನಿರೂಪಕರು, ತಂತ್ರಜ್ಞರು, ನೂತನ ಆವಿಷ್ಕಾರಗಳು ಹಾಗೂ ಬಂಡವಾಳ ಹೂಡಿಕೆದಾರ ರೊಂದಿಗೆ ಜೈವಿಕ ಇಂಧನ ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಾಣ ಹಾಗೂ ಬಂಡವಾಳ ಹೂಡಿಕೆ ಕುರಿತು ಚರ್ಚಿಸಿರುವುದನ್ನು ಸಂವಾದದಲ್ಲಿ ಆರ್ಯವೈಶ್ಯ ಸಮಾಜದ ಕೈಗಾರಿಕೆ, ವಾಣಿಜ್ಯ, ಶೈಕ್ಷಣಿಕ, ರಾಜ್ಯಕೀಯ ಮುಂತಾದ ಕ್ಷೇತ್ರಗಳಲ್ಲಿನ ಯುವ ಜನತೆ, ಮಹಿಳೆಯರು ಮೊದಲಾದ ವರುಗಳ ಗಮನಕ್ಕೆ ತಂದರ

ಈ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ಕೆ ವಿ ರಾಮಪ್ರಸಾದ್ ವಹಿಸಿದ್ದು, ರಾಜ್ಯದ ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಜಿ. ಪರಮೇಶ್ವರ್ 2026 27ನೇ ಸಾಲಿನಲ್ಲಿ ಆರ್ಯವೈಶ್ಯ ಸಮಾಜಕ್ಕೆ ಅನುಕೂಲವಾಗಲು ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಅರಿವು ಶಿಕ್ಷಣ ಸಾಲ ಯೋಜನೆ, ವಾಸವಿ ಗಂಗಾ ಕಲ್ಯಾಣ ಯೋಜನೆ ಮುಂತಾದ ಕಲ್ಯಾಣ ಯೋಜನೆಗಳಿಗೆ ಚಾಲನೆ ನೀಡಿದ್ದು ಸಮುದಾಯದ ಯುವಜನರು ಈ ಎಲ್ಲಾ ಸಾಲ ಸೌಲಭ್ಯಗಳನ್ನು ಪಡೆದು ಕ್ರಿಯಾಶೀಲ ಉದ್ಯಮಿಗಳಾಗಿ ಮುಂದೆ ಬರುವಂತೆ ಸಲಹೆ ನೀಡಿದರು. ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಮಾನ್ಯ ಅಧ್ಯಕ್ಷರಾದ ಆರ್.ಪಿ.ರವಿಶಂಕರ್ ಮಾತನಾಡಿ ಮುಂಬರುವ ಆರ್ಯವೈಶ್ಯ ಮಹಾಸಭಾದ ಗ್ಲೋಬಲ್ ಎಕ್ಸಲೇಟರ್ ಸಮಿಟ್ ಸಮಾಜದ ಕ್ರಿಯಾಶೀಲ ಯುವ ಉದ್ದಿಮೆದಾರರಿಗೆ ಕೈಗಾರಿಕಾಕರಣದಲ್ಲಿ ಮುಂಚೂಣಿಯಲ್ಲಿ ಭಾಗಿಯಾಗಲು ಅತ್ಯುತ್ತಮ ವೇದಿಕೆ ಯಾಗಲಿದ್ದು ಸಮಾಜದ ಅಭಿವೃದ್ಧಿ ಯಲ್ಲಿ ಪರಿಣಾಮಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಅನಿಲ್ ಗುಪ್ತ ಈ ಸಂವಾದ ಕಾರ್ಯಕ್ರಮ ಗ್ಲೋಬಲ್ ಸಮಿಟ್‌ನ ಯಶಸ್ವಿ ಆಯೋಜನೆಗೆ ನಾಂದಿ ಯಾಗಲಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಕೆ.ಆರ್.ಶಿವಕುಮಾರ್, ಕೋಲಾರ ಜಿಲ್ಲಾಧ್ಯಕ್ಷರು, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷತೆ ವಹಿಸಿದ್ದು, ಅತಿಥಿಗಳಾಗಿ ಕೆ.ಆರ್.ಕೃಷ್ಣಾ, ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಸಂಘಟನಾ ಕಾರ್ಯ ದರ್ಶಿಗಳು, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಆರ್. ಎಸ್.ಸುಹಾಸ್ ಶೆಟ್ಟಿ, ಅಧ್ಯಕ್ಷರು, ಯೋಜನಾ ಪ್ರಾಧಿಕಾರ, ಮುಳಬಾಗಿಲು ಹಾಗೂ ಶ್ರೀ ಆಂಜನೇಯಸ್ವಾಮಿ ದೇವಾಲಯ ವ್ಯವಸ್ಥಾಪಕ ಸಮಿತಿ,

ಬಿ.ಎಸ್.ನಟರಾಜ್, ಉಪಾಧ್ಯಕ್ಷರು, ಬೆಂಗಳೂರು ವಿಭಾಗ, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಕೆ.ವಿ.ಪ್ರಸನ್ನ ಕುಮಾರ್, ಕಾರ್ಯದರ್ಶಿ, ಬೆಂಗಳೂರು ವಿಭಾಗ, ಕರ್ನಾಟಕ ಆರ್ಯವೈಶ್ಯ ಮಹಾಸಭಾ, ಎನ್.ಸಿ.ಸತೀಶ್, ನಿರ್ದೇಶಕರು, ಕರ್ನಾಟಕ ಆರ್ಯವೈಶ್ಯ ಮಹಾಸಭಾ, ಬೆಂಗಳೂರು ಎಂ.ಪಿ.ಅನಿಲ್ ಕುಮಾರ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಶ್ರೀಮತಿ ದೇವತಾ ವಿಜಯಲಕ್ಷ್ಮೀ, ಕೋಲಾರ ಜಿಲ್ಲಾ ಕಾರ್ಯದರ್ಶಿ, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅವರುಗಳು ಭಾಗವಹಿಸಿದ್ದರು.



ಕಲಬುರಗಿಯ ನೂತನ ಮೇಯರ್ ಆಗಿ ಅಜ್ಮಲ್ ಅಹ್ಮದ್ ಗೋಲಾ ಹಾಗೂ ಕಲಬುರಗಿಯಲ್ಲಿ ಫರ್ಹಾನಾ ಖುಸ್ರೋ ಜಾಗೀರದಾರ ಉಪಮೇಯರ್ ಆಗಿ ಶನಿವಾರ ಆಯ್ಕೆಯಾಗಿದ್ದಾರೆ.

# ಸಂಪೂರ್ಣ ಬರಗಾಲ ಘೋಷಣೆಗೆ ಆಗ್ರಹ, ಜಿಲ್ಲಾಧಿಕಾರಿ ಕಚೇರಿ ಮುಂದೆ ಅನ್ನದಾತರ ಆಕ್ರೋಶ; ರೈತ ಆತ್ಮಹತ್ಯೆಗೆ ಯತ್ನ

**ಕಲಬುರಗಿ, ಆ. 29 :** ಮುಂಗಾರು ಮಳೆ ಕೊರತೆಯಿಂದ ಅರ್ಧಕ್ಕಿಂತ ಹೆಚ್ಚು ಬಿತ್ತನೆಯಾಗಿಲ್ಲ. ಅಲ್ಪಸ್ವಲ್ಪ ಬಿತ್ತನೆಯದ ಬೆಳೆಗಳು ಮಳೆಯಿಲ್ಲದೇ ಒಣಗುತ್ತಿದ್ದು, ಜಿಲ್ಲೆಯಲ್ಲಿ ಭಯಾನಕ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದರೂ, ಕಲಬುರಗಿ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸದಿರುವುದನ್ನು ಖಂಡಿಸಿ, ಸಂಯುಕ್ತ ಹೋರಾಟ ಕರ್ನಾಟಕ ನೇತೃತ್ವದಲ್ಲಿ ರೈತರು ಜಿಲ್ಲಾಧಿಕಾರಿ ಕಚೇರಿ ಎದುರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ತೊಗರಿ, ಅಲ್ಪಾವಧಿ ಬೆಳೆಗಳದ ಹೆಸರು, ಉದ್ದು, ಸೋಯಾಬಿನ್, ಎಳ್ಳು ಸೇರಿದಂತೆ ಹಲವು ಬೆಳೆಗಳು ಮಳೆ ಕೊರತೆಯಿಂದ ಹಾನಿಗೀಡಾಗಿವೆ. ಕೆಲ ರೈತರು ಎರಡು ಬಾರಿ ಬಿತ್ತನೆ ಮಾಡಿದ್ದರೂ ಸಮರ್ಪಕ ಮಳೆಯಾಗದೆ ಬೆಳೆ ಕೈಕೊಟ್ಟಿದೆ.

ಆಗಸ್ಟ್‌ನಲ್ಲಿ ಸುರಿದ ಅಲ್ಪ ಮಳೆಗೆ ಕೆಲವೆಡೆ ತೊಗರಿ ಬಿತ್ತನೆ ಮಾಡಲಾಗಿದ್ದು, ಇದೀಗ ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಬೆಳೆಗಳು ಬಾಡುತ್ತಿವೆ ಎಂದು ರೈತ ಮುಖಂಡರು ದೂರಿದರು.

ಜಿಲ್ಲೆಯ ಹಳ್ಳ, ಕೊಳ್ಳ ಹಾಗೂ ನಾಲೆಗಳು ಬತ್ತಿದ್ದು, ಬಾವಿ ಮತ್ತು ಕೊಳವೆಬಾವಿಗಳಲ್ಲಿಯೂ ನೀರಿನ ಮಟ್ಟ ಕುಸಿದಿದೆ. ಇದರಿಂದ ಜಾನುವಾರು ಗಳಿಗೆ ಕುಡಿಯುವ ನೀರು ಹಾಗೂ ಮೇವಿನ ಕೊರತೆ



**ಆತ್ಮಹತ್ಯೆಗೆ ಯತ್ನ...**

**ಪ್ರತಿಭಟನೆ ವೇಳೆ ರೈತನೊಬ್ಬ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಕೆಲಕಾಲ ಆತಂಕಕ್ಕೆ ಕಾರಣವಾಯಿತು. ತಕ್ಷಣ ಮಧ್ಯಪ್ರವೇಶಿಸಿದ ಪೊಲೀಸರು ರೈತನನ್ನು ತಡೆದು ಸುರಕ್ಷಿತವಾಗಿ ಕರೆದೊಯ್ದರು. ರಸ್ತೆ ತಡೆ ನಡೆಸುತ್ತಿದ್ದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು.**

ಎದುರಾಗಿದೆ. ಪರಿಸ್ಥಿತಿಯನ್ನು ಸರ್ಕಾರ ತಕ್ಷಣ ಮರುಪರಿಶೀಲಿಸಿ ಕಲಬುರಗಿ ಜಿಲ್ಲೆಯನ್ನು ಸಂಪೂರ್ಣ ಬರಪೀಡಿತ ವೆಂದು ಘೋಷಿಸಿ ಪರಿಹಾರ ಕ್ರಮ ಕೈಕೊಳ್ಳಬೇಕು. ರೈತರಿಗೆ ಪರಿಹಾರ ನಿಡುವಂತೆ ಆಗ್ರಹಿಸಿ ಸಂಯುಕ್ತ ರೈತ ಹೋರಾಟ ಸಮಿತಿಯ ರೈತ ಪ್ರತಿಭಟನಾಕಾರರು ಒತ್ತಾಯಿಸಿದರು.

1,000 ಕೋಟಿ ವಿಶೇಷ ಪ್ಯಾಕೇಜ್‌ಗೆ ಒತ್ತಾಯ: ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸಿ 1,000 ಕೋಟಿ ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಬೇಕು. ಪ್ರತಿ ಎಕರೆಗೆ 50 ಸಾವಿರ ಬರ ಪರಿಹಾರ ನೀಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳ ರೈತರ ಸಾಲ ಮನ್ನಾ ಮಾಡಬೇಕು ಅಥವಾ ಸಾಲ ಮರುಪಾವತಿಗೆ ಕಾಲಾವಕಾಶ ವಿಸ್ತರಿಸಬೇಕು ಎಂದು ರೈತ ಮುಖಂಡರು ಆಗ್ರಹಿಸಿದರು.

ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಕರ್ನಾಟಕದ ಪಾಲಿನ 15 ಟಿಎಂಸಿ ನೀರನ್ನು ಬಿಡುಗಡೆ ಮಾಡಿ ಭೀಮಾ ನದಿಗೆ ಹರಿಸಬೇಕು. ಬರ ಕಾಮಗಾರಿಗಳನ್ನು ತಕ್ಷಣ ಆರಂಭಿಸಿ ಗ್ರಾಮೀಣ ಜನರಿಗೆ ಉದ್ಯೋಗ ಕಲ್ಪಿಸಬೇಕು. ಜಾನುವಾರು ಗಳಿಗಾಗಿ ಗೋಶಾಲೆ ಹಾಗೂ ಮೇವಿನ ವ್ಯವಸ್ಥೆ ಮಾಡಬೇಕು. ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ಬೆಳೆ ವಿಮೆ ತಾರತಮ್ಯ ಆರೋಪ: ಬೆಳೆ ವಿಮೆ ಪರಿಹಾರ ನೀಡುವಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿದ ರೈತ ಮುಖಂಡರು, ವಿಮೆ ಪಡೆಯಲು ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲದ ದೃಢೀಕರಣವನ್ನು ಕಡ್ಡಾಯಗೊಳಿಸಬಾರದು ಎಂದು ಒತ್ತಾಯಿಸಿದರು. ಬೆಳೆ ಹಾನಿಗೊಳಗಾದ ಎಲ್ಲ ರೈತರಿಗೆ ವಿಮೆ ಪರಿಹಾರ ನೀಡಬೇಕು.

ಎರಡನೇ ಕಂತಿನ ವಿಮೆ ಹಣದಿಂದ ವಂಚಿತರಾದ ರೈತರಿಗೂ ಪರಿಹಾರ ಬಿಡುಗಡೆ ಮಾಡಬೇಕು. ಜಿಲ್ಲೆಯ ಶಾಸಕರು, ಸಚಿವರು ಹಾಗೂ ವಿರೋಧ ಪಕ್ಷದ ನಾಯಕರು ರೈತರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ವಿಫಲರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಮುಖಂಡರು, ತಕ್ಷಣ ಕೇಂದ್ರದ ಬರ ಅಧ್ಯಯನ ತಂಡವನ್ನು ಕಲಬುರಗಿ ಜಿಲ್ಲೆಗೆ ಕಳುಹಿಸಬೇಕು ಎಂದರು.

ಸಚಿವರು–ಶಾಸಕರ ಮನೆ ಮುಂದೆ ಧರಣಿಯ ಎಚ್ಚರಿಕೆ: ಕಲಬುರಗಿ ಜಿಲ್ಲೆಯನ್ನು ತಕ್ಷಣ ಬರಪೀಡಿತ ಪ್ರದೇಶವೆಂದು ಘೋಷಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಸಂಯುಕ್ತ ಹೋರಾಟ ಕರ್ನಾಟಕ ರೈತ ಮುಖಂಡರು ಎಚ್ಚರಿಸಿದ್ದಾರೆ. ಜಿಲ್ಲೆಯ ಸಚಿವರು ಹಾಗೂ ಶಾಸಕರ ಮನೆಗಳ ಎದುರು ಧರಣಿ ನಡೆಸಲಾಗುವುದು. ಜಿಲ್ಲೆಗೆ ಆಗಮಿಸುವ ಸಚಿವರಿಗೆ ಕಪ್ಪುಪಟ್ಟಿ ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

## ರಾಜ್ಯ ಹೋಟೆಲ್‌ಗಳ ಸಂಘದ ನೂತನ ಅಧ್ಯಕ್ಷ ಮಧುಕರ್ ಶೆಟ್ಟಿ, ಉಪಾಧ್ಯಕ್ಷ ಸತ್ಯನಾಥ ಶೆಟ್ಟಿಗೆ ಅಭಿನಂದನೆ



**ಕಲಬುರಗಿ, ಆ.29:** ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ 2026 – 29 ನೇ ಸಾಲಿನ ನೂತನ ಸಮಿತಿಯ ಅಧ್ಯಕ್ಷರಾಗಿ ಸರ್ವಾನು ಮತದಿಂದ ಅಧ್ಯಕ್ಷರಾಗಿ ಆಯ್ಕೆ ಹೊಂದಿದ ಮಧುಕರ್ ಶೆಟ್ಟಿ ಹಾಗೂ ಉಪಾಧ್ಯಕ್ಷರಾಗಿ ಕಲ್ಯಾಣ ಕರ್ನಾಟಕ ಭಾಗದ ಹಿರಿಯ ಉದ್ಯಮಿ ಕಲಬುರಗಿಯ ಸತ್ಯನಾಥ ಶೆಟ್ಟಿ ಆಯ್ಕೆಗೊಂಡಿರುವುದಕ್ಕೆ ಕಲಬುರಗಿ ಜಿಲ್ಲಾ ಹೋಟೆಲ್, ವಸತಿಗೃಹ ಹಾಗೂ ಬೇಕರಿ ಮಾಲೀಕರ ಸಂಘ ಅಭಿನಂದನೆ ಸಲ್ಲಿಸಿದೆ.

ಬೆಂಗಳೂರಿನ ಖಾಸಗಿ ಹೋಟೆಲ್ ನಲ್ಲಿ ಆಗಸ್ಟ್ 27ರಂದು ನಡೆದ ಮಹಾ ಸಭೆಯಲ್ಲಿ ಮೂರು ವರ್ಷಗಳ ಅವಧಿಗೆ ನೂತನ ಪದಾಧಿಕಾರಿಗಳಾಗಿ ಇವರನ್ನು ಆಯ್ಕೆ ಮಾಡಲಾಗಿದೆ ಎಂದು ಕಲಬುರಗಿ ಜಿಲ್ಲಾ ಹೋಟೆಲ್ ಸಂಘದ ಅಧ್ಯಕ್ಷರಾದ ನರಸಿಂಹ ಮೆಂಡನ್ ತಿಳಿಸಿದ್ದಾರೆ. ನೂತನ ಸಮಿತಿಗೆ ಜಿ.ಕೆ.ಶೆಟ್ಟಿ (ಗೌರವಾಧ್ಯಕ್ಷ) ಮಧುಕರ ಶೆಟ್ಟಿ (ಅಧ್ಯಕ್ಷ) ವೀರೇಂದ್ರ ಎಂ ಕಾಮತ್ ( ಗೌರವ ಕಾರ್ಯದರ್ಶಿ) ರಾಮಮೂರ್ತಿ (ಕೋಶಾಧಿಕಾರಿ)

ಪಿ.ಸಿ ರಾವ್, ರಾಘವೇಂದ್ರರಾವ್ ಸತ್ಯನಾರಾಯಣಗೌಡ, ಎಚ್ ಎನ್ ಉಮೇಶ್, ಸತ್ಯನಾಥ ಶೆಟ್ಟಿ, ಜಿ.ಎ ದೀಪಾನಂದ ಉಪಾಧ್ಯಕ್ಷರುಗಳು ಶೇಖರ ನಾಯ್ಡು( ಜಂಟಿ ಕಾರ್ಯದರ್ಶಿ) ಆಯ್ಕೆ ಹೊಂದಿದ್ದಾರೆ.

ನೂತನ ಸಮಿತಿಗೆ ಆಯ್ಕೆ ಹೊಂದಿದೆ ಪದಾಧಿಕಾರಿಗಳ ನೇತೃತ್ವದಲ್ಲಿ ರಾಜ್ಯದಲ್ಲಿ ಹೋಟೆಲ್ ಉದ್ಯಮ ರಂಗವು, ಇನ್ನಷ್ಟು ಅಭಿವೃದ್ಧಿಯ ಕಡೆಗೆ ಸಾಗಲಿ ಎಂದು ಅಧ್ಯಕ್ಷ ನರಸಿಂಹ ಮೆಂಡನ್, ಶಿವರಾಜ ಕೋಟ್ಯಾನ್, ಶರಣು ಪಾಟೀಲ್, ಡಾ ಸದಾನಂದ ಪೆರ್ಲ,ಮೊಯಿನುದ್ದೀನ್, ದೀಪಕ್ ರಾಯ್ಕರ್, ಮಹಾ ಕೀರ್ತಿ ಶೆಟ್ಟಿ, ಸುನಿಲ್ ಶೆಟ್ಟಿ ರಮಾನಂದ ಬಂಡಾರಿ ಪ್ರಶಾಂತ್ ಶೆಟ್ಟಿ, ಮಾಲಾ ಕಣ್ಣಿ, ಗಿರಿಧರ ಭಟ್, ರಾಜಶೇಖರ ಶೆಳ್ಳಗಿ, ಮತ್ತಿತರರು ಶುಭಾಶಯ ಕೋರಿ ಅಭಿನಂದನೆ ಸಲ್ಲಿಸಿದ್ದಾರೆ.

## ಗಿಡಗಳಿಗೆ ರಾಖಿ ಕಟ್ಟಿ ವೃಕ್ಷಾ ಬಂಧನ ಕಾರ್ಯಕ್ರಮ ಆಚರಣೆ



**ಹಗರಿಬೊಮ್ಮನಹಳ್ಳಿ,ಆ.29** ರಕ್ಷಾಬಂಧನದ ನಿಮಿತ್ತ ಗದ್ದಿಕೆರೆ ಸರ್ಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ 'ವೃಕ್ಷ ಬಂಧನ' ಕಾರ್ಯಕ್ರಮವನ್ನು ಆಚರಿಸಲಾಯಿತು.

ಶಾಲೆಯ ಮಕ್ಕಳು ಗಿಡಗಳನ್ನು ಸಿಂಗರಿಸಿ, ಅವುಗಳಿಗೆ ರಾಖಿ ಕಟ್ಟುವ ಮೂಲಕ ವೃಕ್ಷ ಬಂಧನ ಆಚರಿಸಿದರು. ಅಲ್ಲದೆ, ತಾವು ಕಟ್ಟಿದ ರಾಖಿಯಂತೆ ಗಿಡಗಳ ರಕ್ಷಣೆಯ ಜವಾಬ್ದಾರಿಯನ್ನೂ ವಹಿಸಿಕೊಂಡರು.

ಈ ಸಂದರ್ಭದಲ್ಲಿ 50ಕ್ಕೂ ಹೆಚ್ಚು ಗಿಡಗಳನ್ನು ವಿದ್ಯಾರ್ಥಿಗಳು ದತ್ತು ಪಡೆದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಗುರು ನಾಗೇಂದ್ರಪ್ಪ ಬಿ. ಮೇವುಂಡಿ, ಮಾತನಾಡಿ ?ಪರಿಸರ ಪ್ರಜ್ಞೆ ಜಾಗೃತವಾದಾಗ ಮಾತ್ರ ನೈಸರ್ಗಿಕ ಅವಘಡಗಳನ್ನು ತಡೆಗಟ್ಟಲು ಸಾಧ್ಯ. ಪರಿಸರದ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಗಿಡಗಳನ್ನು ನೆಟ್ಟು ಬೆಳೆಸುವ ಮನೋಭಾವ ಮಕ್ಕಳಲ್ಲಿ ಬಾಲ್ಯದಿಂದಲೇ ಮೂಡಬೇಕು? ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಮಂಜುನಾಥ ಟಿ.ಎಸ್., ಕೊಟ್ರೇಶ ಬಿ., ಗೀತಾ, ರಾಜೇಶ್ವರಿ ಪಿ., ಗಾಯತ್ರಿ ಬಿ.ಆರ್., ದ್ವಿದಸ ಹಾಗೂ ನೀಲಮ್ಮ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಪರಿಸರ ಸಂರಕ್ಷಣೆಯ ಸಂಕಲ್ಪ ಮಾಡಿದರು.

## ದಂತ ಶಸ್ತ್ರಚಿಕಿತ್ಸೆಗೆ ನೆರವಾಗಲಿರುವ ಮೀನಿನ ತ್ಯಾಜ್ಯ ಮಂಗಳೂರು ಮೀನುಗಾರಿಕೆ ತಂತ್ರಜ್ಞಾನ ವಿವಿಯಿಂದ ಅಭಿವೃದ್ಧಿ

**ಮಂಗಳೂರು ,ಆ.29:** ಕಸವೆಂದು ಎಸೆಯುವ ಮೀನಿನ ತ್ಯಾಜ್ಯದಲ್ಲಿದೆ ಹಲ್ಲು, ಮೂಳೆ ಜೋಡಿಸುವ ಸಂಜೀವಿನಿ. ಮೀನಿನ ತ್ಯಾಜ್ಯದಿಂದ ಹಲ್ಲು ಹಾಗೂ ಮೂಳೆಗಳನ್ನು ಜೋಡಿಸುವ ಅತ್ಯಮೂಲ್ಯವಾದ ಬಯೋ ಮೆಡಿಕ್ ಕಾಂಪೌಂಡ್ ಆದ ನ್ಯಾನೋ ಹೈಡ್ರಾಕ್ಸಿ ಅಪಟೈಟ್ ಅನ್ನು ಮಂಗಳೂರು ಮೀನುಗಾರಿಕಾ ಮಹಾ ವಿದ್ಯಾಲಯದ ಮೀನು ಸಂಸ್ಕರಣಾ ತಂತ್ರಜ್ಞಾನ ವಿಭಾಗ ಅಭಿವೃದ್ಧಿ ಪಡಿಸಿದೆ.





ಮೀನಿನ ಖಾದ್ಯ ಎಂದರೆ ಹಲವರಿಗೆ ಬಾಯಲ್ಲಿ ನೀರೂರುತ್ತದೆ. ಆದರೆ, ಕೆಲವರಿಗೆ ಮೀನು ತಿನ್ನಲು ಇರುವ ದೊಡ್ಡ ಅಡ್ಡಿ ಎಂದರೆ ಅದರ ಮುಳ್ಳು ಮತ್ತು ಹುರುಪೆ. ಗಂಟಲಿನಲ್ಲಿ ಮುಳ್ಳು ಸಿಲುಕಿಕೊಳ್ಳ ಬಹುದು ಎಂಬ ಹೆದರಿಕೆಗೆ ಮೀನಿ ನಿಂದಲೇ ದೂರ ಉಳಿಯುವವರೂ ಇದ್ದಾರೆ.

ಮೀನು ಕತ್ತರಿಸುವಾಗ ಹೊರ ಬರುವ ಮುಳ್ಳು, ತಲೆ, ಕರುಳು ಮತ್ತು ಹುರುಪೆಗಳನ್ನು ಕಸವೆಂದು ಪರಿಗಣಿಸಲಾಗುತ್ತದೆ. ಆದರೆ, ಮೀನಿನ ಮುಳ್ಳು ಮತ್ತು ಹುರುಪೆ ಯಿಂದ ಮನುಷ್ಯನ ಮುರಿದ ಮೂಳೆ ಗಳನ್ನು ಜೋಡಿಸುವ ಹಾಗೂ ಹಲ್ಲಿನ ದಂತಕ್ಷಯವನ್ನು ಸರಿಪಡಿಸುವ ಮಹತ್ವದ ಬಯೋ ಮೆಡಿಕಲ್ ಕಾಂಪೌಂಡ್ ತಯಾರಿಸಬಹುದು ಎಂಬುದನ್ನು ಮಂಗಳೂರು ಮೀನು ಗಾರಿಕಾ ಮಹಾ ವಿದ್ಯಾಲಯದ ಮೀನು ಸಂಸ್ಕರಣಾ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ. ಮಂಜ ನಾಯ್ಕ್ ನೇತೃತ್ವದ ಸಂಶೋಧನಾ ತಂಡ ಸಾಬೀತುಪಡಿಸಿದೆ.

ಪ್ರೊ. ಡಾ. ಬಿ. ಮಂಜ ನಾಯ್ಕ್ ಮಾತನಾಡಿ, ಮೀನು ಪ್ರಕೃತಿಯಲ್ಲಿ ದೊರೆಯುವ ಸೂಪರ್ ಫುಡ್ ಆಗಿದ್ದು, ಮಾನವನ ದೇಹಕ್ಕೆ ಬೇಕಾದ ಎಲ್ಲಾ ಪೋಷಕಾಂಶಗಳನ್ನು ಒಳಗೊಂಡಿದೆ. ಕಸವೆಂದು ಎಸೆಯುವ ಮೀನಿನ ಮುಳ್ಳು ಮತ್ತು ಹುರುಪೆ ಯಲ್ಲೂ ಅಪಾರ ಪೌಷ್ಠಿಕಾಂಶವಿದೆ. ಈಗಾಗಲೇ ಮೀನಿನ ಚರ್ಮದಿಂದ ಲೆದರ್ ತಯಾರಿಸಿ ಯಶಸ್ವಿಯಾಗಿ ದ್ದೇವೆ. ಈಗ ಮುಳ್ಳು ಮತ್ತು ಹುರುಪೆಯಿಂದ ವೈದ್ಯಕೀಯ ರಂಗಕ್ಕೆ ಅತ್ಯಂತ ಉಪಯುಕ್ತವಾದ ನ್ಯಾನೋ ಹೈಡ್ರಾಕ್ಸಿ ಅಪಟೈಟ್ ಕಾಂಪೌಂಡ್ ಅಭಿವೃದ್ಧಿ ಪಡಿಸಿದ್ದೇವೆ.

ಮೀನಿನ ತ್ಯಾಜ್ಯ ಸಂಸ್ಕರಣೆ ಯಿಂದ ಪರಿಸರ ಮಾಲಿನ್ಯ ತಡೆಯುವ ಜೊತೆಗೆ ಬಯೋ–ಮೆಡಿಕಲ್ ವಲಯಕ್ಕೂ ಪರ್ಯಾಯ ಶಕ್ತಿ ತುಂಬಬಹುದು ಎಂದು ತಿಳಿಸಿದರು.

ಸಂಶೋಧನಾ ತಂಡದ ವಿದ್ಯಾರ್ಥಿನಿ ಪೂರ್ಣಿಮಾ, ಮೀನಿನ ಮುಳ್ಳು ಮತ್ತು ಹುರುಪೆ ಸಂಗ್ರಹಿಸಿ ಥರ್ಮಲ್ ಕ್ಯಾಲ್ಸಿನೇಷನ್ ಎಂಬ ವೈಜ್ಞಾನಿಕ ತಂತ್ರಜ್ಞಾದ ಮೂಲಕ ಸಂಸ್ಕರಿಸಿ ಅತಿ ದೊಡ್ಡ ಗಾತ್ರದ ನ್ಯಾನೋ ಹೈಡ್ರಾಕ್ಸಿ ಅಪಟೈಟ್ ಕಾಂಪೌಂಡ್ ಅನ್ನು ಸಿದ್ಧಪಡಿಸಲಾಗಿದೆ.

ಇದು ಹಲ್ಲುಗಳ ಪುನರ್ ನಿರ್ಮಾಣಕ್ಕೆ ಹಾಗೂ ದಂತ ಶಸ್ತ್ರಚಿಕಿತ್ಸೆಯಲ್ಲಿ ಬಳಕೆಯಾಗುತ್ತದೆ. ಅಲ್ಲದೆ, ಗಂಭೀರ ಅಪಘಾತ ಇಲ್ಲವೆ ವಯೋ ಸಹಜವಾಗಿ ಮುರಿದ ಮಾನವನ ಮೂಳೆಗಳನ್ನು ಜೋಡಿಸಲು ಸಹ ಸಹಕಾರಿಯಾಗಲಿದೆ ಎಂದರು.

## ಗ್ರಾಮೀಣ ಮಕ್ಕಳ ಆರೋಗ್ಯಕ್ಕಾಗಿ ಹಳ್ಳಿಗಳಲ್ಲಿ ಈಜುಕೊಳ ನಿರ್ಮಿಸಿ: ಸರ್ಕಾರಕ್ಕೆ ಟಿ.ಎಂ. ಶಹೀದ್ ತೆಕ್ಕಿಲ್ ಒತ್ತಾಯ



**ಮಂಗಳೂರು, ಆ.29–** ರಾಷ್ಟ್ರೀಯ ಕ್ರೀಡಾ ದಿನಾಚರಣೆ ಹಾಗೂ ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್ ಅವರ ಜನ್ಮದಿನದ ಅಂಗವಾಗಿ ಮಂಗಳೂರಿನ ಎಮ್ಮೆಕೆರೆ ಅಂತರಾಷ್ಟ್ರೀಯ ಈಜುಕೊಳದಲ್ಲಿ ಹಮ್ಮಿಕೊಳ್ಳಲಾಗಿದ್ದು, ದಕ್ಷಿಣ ಕನ್ನಡ ಜಿಲ್ಲಾಮಟ್ಟದ ಈಜುಸ್ಪರ್ಧೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಕರ್ನಾಟಕ ಸರಕಾರದ ಕಾರ್ಮಿಕ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ (ಸಚಿವ ದರ್ಜೆ) ಟಿ.ಎಂ. ಶಹೀದ್ ತೆಕ್ಕಿಲ್ ಅವರು, ಹಳೆಯ ದಿನಗಳನ್ನು ಮೆಲುಕು ಹಾಕಿದರು. "ಹಿಂದಿನ ಕಾಲದಲ್ಲಿ ನಾವೆಲ್ಲರೂ ಹಳ್ಳಿಗಳಲ್ಲಿ ದೇವಸ್ಥಾನ, ಮಸೀದಿ ಆಥವ ಮನೆಗಳ ಸಮೀಪ ಇರುವ ಕೆರೆ, ಕೊಳ ಹಾಗೂ ನದಿಗಳಲ್ಲಿ ಈಜಾಡುತ್ತಿದ್ದೆವು. ನೈಸರ್ಗಿಕ ಜಲಮೂಲಗಳಲ್ಲಿ ಈಜುವುದರಿಂದ ಅಂದಿನ ಜನರು ದೈಹಿಕವಾಗಿ ಅತ್ಯಂತ ಸದೃಢ ಹಾಗೂ ಆರೋಗ್ಯವಂತರಾಗಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅಂತಹ ಕೆರೆ–ಕೊಳಗಳು ಅಳಿವಿನ ಹಂಚಿನಲ್ಲಿವೆ, ಎಲ್ಲೆಡೆ ಕೃತಕ ಈಜುಕೊಳಗಳು ಪ್ರಾರಂಭವಾಗಿವೆ, ಇದು ಕೇವಲ ನಗರ ಪ್ರದೇಶಗಳಿಗೆ ಮಾತ್ರ ಈಜುಕೊಳಗಳು ಸೀಮಿತವಾಗಬಾರದು. ಗ್ರಾಮೀಣ ಭಾಗದ ಮಕ್ಕಳಿಗೂ ಈಜು ಕಲಿಯಲು ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಅನುಕೂಲವಾಗುವಂತೆ ಸರ್ಕಾರ ಗ್ರಾಮೀಣ ಪ್ರದೇಶಗಳಲ್ಲೂ ಆಧುನಿಕ ನೈಸರ್ಗಿಕ ಈಜುಕೊಳಗಳನ್ನು ನಿರ್ಮಿಸಬೇಕು" ಎಂದು ಒತ್ತಾಯ ಮಾಡಿದರು. ಹಾಗೂ ಈಜುಕಿಟ್ ವಿತರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ ವಹಿಸಿದರು. ಉದ್ಘಾಟನೆಯನ್ನು ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು ಅಧ್ಯಕ್ಷ ಎಂ.ಎ ಗಫೂರ್ ನೆರವೇರಿಸಿದರು.

ಜಿಲ್ಲಾಡಳಿತ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಮಹಾನಗರ ಪಾಲಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿ.ಎಸ್. ಅಕ್ವಾ ಸೆಂಟರ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಈ ಬೃಹತ್ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಸಂತೋಷ್ ಕುಮಾರ್ ಶೆಟ್ಟಿ, ವಿ.ಒನ್ ಅಕ್ವಾ ಸೆಂಟರ್ ನಿರ್ದೇಶಕ ನವೀನ್, ಪ್ರದೀಪ್ ಡಿಸೋಜ ಉಪಸ್ಥಿತರಿದ್ದರು.

## ಸಂಡೂರು: ನಾಲ್ವರು ಬಾಲಕಾರ್ಮಿಕರ ರಕ್ಷಣೆ



**ಬಳ್ಳಾರಿ,ಆ.29.**ಸಂಡೂರು ತಾಲೂಕಿನ ಕುರೆಕುಪ್ಪ ಪಟ್ಟಣ ವ್ಯಾಪ್ತಿಯಲ್ಲಿ ಬರುವ ವಿವಿಧ ಉದ್ದಿಮೆಗಳ ಮೇಲೆ ಶನಿವಾರ ಜಂಟಿ ಕಾರ್ಯಪಡೆ ಸಮಿತಿ ದಿಢೀರ್ ದಾಳಿ ನಡೆಸಿ, ನಾಲ್ವರು ಬಾಲ ಮತ್ತು ಕಿಶೋರ ಕಾರ್ಮಿಕರನ್ನು ರಕ್ಷಣೆ ಮಾಡಿದೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಕಾರ್ಮಿಕ ಇಲಾಖೆ, ಕಂದಾಯ, ಶಿಕ್ಷಣ, ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಚೈಲ್ಡ್‌ಲೈನ್ ಸಹಯೋಗದೊಂದಿಗೆ ಕುರೆಕುಪ್ಪದ ಸುಮಾರು 25 ಉದ್ದಿಮೆಗಳ ಪರಿಶೀಲನೆ ನಡೆಸಲಾಯಿತು. ಈ ವೇಳೆ ಕಂಡುಬಂದ ನಾಲ್ವರು ಮಕ್ಕಳಿಗೆ ಕೆಲಸದಿಂದ ಬಿಡುಗಡೆಗೊಳಿಸಿ, ಅವರ ವಯಸ್ಸಿನ ದಾಖಲೆಗಳನ್ನು ಪರಿಶೀಲಿಸಿ, ಹಿಂದೆ ವ್ಯಾಸಂಗ ಮಾಡುತ್ತಿದ್ದ ಶಾಲೆಗಳಿಗೆ ಮರು ದಾಖಲಿಸಲಾಗಿದೆ.

ಮಕ್ಕಳನ್ನು ನಿಯಮಬಾಹಿರವಾಗಿ ಕೆಲಸಕ್ಕೆ ನೇಮಿಸಿಕೊಂಡಿದ್ದ ಅಂಗಡಿ ಹಾಗೂ ಉದ್ದಿಮೆ ಮಾಲೀಕರ ವಿರುದ್ಧ ಬಾಲಕಾರ್ಮಿಕ ಕಾಯ್ದೆಯಡಿ ಸಂಬಂಧಿಸಿದ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಲಾಗುವುದು. ಇದೇ ವೇಳೆ, ಯಾವುದೇ ಕಾರಣಕ್ಕೂ ಬಾಲಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಳ್ಳಬಾರದು ಎಂದು ಅಂಗಡಿ ಗಳಿಗೆ ಜಾಗೃತಿ ಪೋಸ್ಟರ್‌ಗಳನ್ನು ಅಂಟಿಸಿ ಎಚ್ಚರಿಕೆ ನೀಡಲಾಗಿದೆ ಎಂದು ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಎ. ಮೌನೇಶ್ ತಿಳಿಸಿದ್ದಾರೆ.

ಈ ಜಂಟಿ ಕಾರ್ಯಾಚರಣೆಯಲ್ಲಿ ಉಪತಹಶೀಲ್ದಾರ್ ಸುಬ್ಬರಾವ್, ಸಂಡೂರು ಕಾರ್ಮಿಕ ನಿರೀಕ್ಷಕ ಮಂಜುನಾಥ ತೊಂಡೆಹಾಳ್, ಮೇಲ್ವಿಚಾರಕಿ ಚೇತನಾ, ತಂಬಾಕು ನಿಯಂತ್ರಣ ಕೋಶದ ಗೋವಿಂದಪ್ಪ, ಪುರಸಭೆ ಕಂದಾಯ ಅಧಿಕಾರಿ ಹರ್ಷ, ಪೊಲೀಸ್ ಇಲಾಖೆಯ ರವಿಕುಮಾರ್ ಹಾಗೂ ಮಕ್ಕಳ ಸಹಾಯವಾಣಿಯ ಕಾರ್ತಿಕ್ ಭಾಗವಹಿಸಿದ್ದರು.

## ಬೀದರ್‌ನಲ್ಲಿ ರಕ್ಷಾಬಂಧನ ಸಂಭ್ರಮ ಬಾಂಧವ್ಯ ಗಟ್ಟಿಗೊಳಿಸಿದ ಸಹೋದರಿಯರು



**ಬೀದರ್, ಆ. 29:** ಪ್ರೀತಿ, ವಾತ್ಸಲ್ಯ, ವಿಶ್ವಾಸ ಹಾಗೂ ಸಹೋದರತ್ವದ ಸಂಕೇತವಾದ ರಕ್ಷಾ ಬಂಧನ ಹಬ್ಬವನ್ನು ಜಿಲ್ಲೆಯಾದ್ಯಂತ ಸಂಭ್ರಮ ಹಾಗೂ ಆತ್ಮೀಯತೆಯಿಂದ ಆಚರಿಸಲಾಯಿತು. ಸಹೋದರಿಯರು ಸಹೋದರರಿಗೆ ರಾಖಿ ಕಟ್ಟಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿದರು.

ಬೀದರ್ ದಕ್ಷಿಣ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳು ನಗರದ ಪ್ರತಾಪನಗರದಲ್ಲಿರುವ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರ ಕಚೇರಿಯಲ್ಲಿ ರಕ್ಷಾ ಬಂಧನ ಆಚರಿಸಿದರು. ಮಹಿಳಾ ಮೋರ್ಚಾದ ಸಹೋದರಿಯರು ಶಾಸಕರಿಗೆ ರಾಖಿ ಕಟ್ಟಿ, ಸಿಹಿ ತಿನಿಸಿ ಹಬ್ಬದ ಶುಭಾಶಯ ಕೋರಿದರು.

ನಂತರ ಮಾತನಾಡಿದ ಶಾಸಕರು, ರಕ್ಷಾ ಬಂಧನವು ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಮಹತ್ವ ಹೊಂದಿರುವ ಹಬ್ಬವಾಗಿದೆ. ರಾಖಿಯ ಪವಿತ್ರ ದಾರಿಯು ಸಹೋದರ–ಸಹೋದರಿಯರ ನಡುವಿನ ಪ್ರೀತಿ, ವಿಶ್ವಾಸ, ಕಾಳಜಿ ಹಾಗೂ ರಕ್ಷಣೆಯ ಭಾವ ಪ್ರತಿಬಿಂಬಿಸುತ್ತದೆ ಎಂದರು.

ಬಿಜೆಪಿ ಮಹಿಳಾ ಮೋರ್ಚಾ ಕಾರ್ಯದರ್ಶಿ ಹೇಮಾ ತುಕ್ಕಾರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಸಂತೋಷಿ ನಿಡವಂಚಾ, ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಗುಂಡಮ್ಮ ಬುಧೇರಾ, ಪ್ರಧಾನ ಕಾರ್ಯದರ್ಶಿ ಸುಜಾತಾ ಮಂದಾ, ನಾಗಮ್ಮ ಮಲ್ಕಾಪುರ, ಕೆ. ದೇವಗಿರಿ, ಸುನೀತಾ ಶಾಪುರ, ಶಿಲ್ಪಾ ನಿಡವಂಚಾ, ಗೌರಮ್ಮ ಚಾಂಗಲೇರಾ, ಶ್ರೀದೇವಿ ಚಾಂಗಲೇರಾ, ಲಲಿತಾ ಬಗದಲ್, ಸುಮಂಗಲಾ ಚಟನಳ್ಳಿ ಇದ್ದರು. ಶಿವಪೂರ ಕಾಲೋನಿ: ನಗರದ ಲಾಡಗೇರಿಯ ಶಿವಪೂರ ಕಾಲೊನಿಯಲ್ಲಿ ರಕ್ಷಾ ಬಂಧನವನ್ನು ಸಂಭ್ರಮದಿಂದ ಆಚರಿಸಲಾಯಿತು. ಸಹಯೋದರಿಯರು ತನ್ನ ಅಣ್ಣತಮ್ಮಂದಿರಿಗೆ ಪ್ರೀತಿಯಿಂದ ರಾಖಿ ಕಟ್ಟಿ ಕಟ್ಟಿದರು. ರಾಖಿ ಕಟ್ಟಿದ ಸಂತಸಕ್ಕೆ ಪ್ರತಿಯಾಗಿ ಅಣ್ಣತಮ್ಮಂದಿರು ಸಾನ್ವಿಗೆ ಉಡುಗೊರೆಯಾಗಿ ಸಕ್ಕರೆ ಪ್ಯಾಕೇಟ್ ನೀಡಿ ಸಂತಸ ಹಂಚಿಕೊಂಡರು. ಸಂಕಲ್ಪ ಭಾವಿಕಟ್ಟಿ, ಕೃಷ್ಣ ಭಾವಿಕಟ್ಟಿ ಸೇರಿದಂತೆ ಕುಟುಂಬಸ್ಥರು ಉಪಸ್ಥಿತರಿದ್ದರು.

ಬಾಲ್ಯವಿವಾಹ ಅಪರಾಧವಾಗಿದ್ದು, ಇದರ ದುಷ್ಪರಿಣಾಮಗಳ ಕುರಿತು ಪ್ರತಿಯೊಬ್ಬರೂ ಜಾಗೃತರಾಗಬೇಕು. ಮಕ್ಕಳ ಭವಿಷ್ಯ ಉತ್ತಮವಾಗಿರಬೇಕಾದರೆ ಶಿಕ್ಷಣದತ್ತ ಹೆಚ್ಚಿನ ಗಮನ ಹರಿಸಬೇಕು. ಬಾಲ್ಯದ ಮಕ್ಕಳನ್ನು ಸುರಕ್ಷಿತ ಕಾಪಾಡುವುದೇ ಸಹೋದರರ ಕರ್ತವ್ಯವಾಗಿದ್ದು, ಇದು ರಕ್ಷಾ ಬಂಧನದ ಮೂಲಕ ಸಹೋದರಿ ತನ್ನ ಸಹೋದರನ ಸುರಕ್ಷೆಯೊಂದಿಗೆ ತನ್ನ ರಕ್ಷೆಯನ್ನು ಕೋರುತ್ತಳೆ ಎಂದು ಪಿಎಸ್‌ಐ ದಿನೇಶ್ ಹೇಳಿದರು.

ಸಂತಪೂರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಶುಕ್ರವಾರ ರಕ್ಷಾ ಬಂಧನ ಕಾರ್ಯಕ್ರಮ ದಲ್ಲಿ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿ, ಬಾಲ್ಯವಿವಾಹ ನಿಷೇಧವಿದೆ ಎಂಬುದು ಗೊತ್ತಿದ್ದರೂ ಕೆಲವರು ಮಕ್ಕಳನ್ನು ಬಾಲ್ಯವಿವಾಹಕ್ಕೆ ದೂಡುತ್ತಿರುವುದು ವಿಷಾದನೀಯ. ಇದರಿಂದ ಮಕ್ಕಳ ಆರೋಗ್ಯ ಹಾಗೂ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ ಬಾಲ್ಯವಿವಾಹದ ಬಗ್ಗೆ ಪಾಲಕರು ಹಾಗೂ ಸಹೋದರರು ತಮ್ಮ ಸಹೋದರಿಯನ್ನು ರಕ್ಷಿಸಬೇಕು ಎಂದರು.

ಪ್ರಾಂಶುಪಾಲ ತುಕಾರಾಮ ಯಾತಪ್ಪ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಧನರಾಜ ಮುಸ್ತಾಪೂರ, ಪ್ರಶಾಂತ ಮಾನೆ, ರಮೇಶ, ಇಮಾನ್ಯುಯೆಲ್, ರಾಜ ಕುಮಾರ, ದಯಾನಂದ, ಸ್ವರೂಪಾ, ಮಂಜುಳಾ, ಸಂಗೀತಾ, ಸಂಜುಕುಮಾರ ಪಾಟೀಲ ಇದ್ದರು.

## ಜಿಲ್ಲಾಧಿಕಾರಿ ಕಚೇರಿಯಲ್ಲಿ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನೆ ಕಸ ವಿಂಗಡಣೆಗೆ: ಅಗತ್ಯ ಕ್ರಮ ವಹಿಸಿ, ಸ್ವಚ್ಛ ನಗರವನ್ನಾಗಿಸಲು ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ

**ವಿಜಯಪುರ,ಆ.29:** ನಗರ ಪ್ರದೇಶ ಗಳಲ್ಲಿ ಸಂಗ್ರಹವಾಗುವ ಕಸವನ್ನು ನಾಲ್ಕು ರೀತಿಯಲ್ಲಿ (ಹಸಿ, ಒಣ, ಅಪಾಯಕಾರಿ ಹಾಗೂ ಇ–ತ್ಯಾಜ್ಯ) ವಿಂಗಡಿಸಿ ವಿಲೇವಾರಿ ಮಾಡುವ ಮೂಲಕ ಕಸ ಮುಕ್ತ ವಾರ್ಡ್ ಯೋಜನೆ ಯಶಸ್ವಿ ಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಗಳಾದ ಡಾ. ಆನಂದ ಕೆ. ರವರು ಅಧಿಕಾರಿಗಳಿಗೆ ಸೂಚಿಸಿದರು

ಜಿಲ್ಲಾಧಿಕಾರಿ ಕಚೇರಿ ಸಭಾಂಗಣ ದಲ್ಲಿ ಶನಿವಾರ ನಡೆದ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಕುರಿತು ಜನರಿಗೆ ತಿಳಿವಳಿಕೆ ನೀಡಬೇಕು ಹಾಗೂ ಪೌರಕಾರ್ಮಿಕರು ತಿಳಿಸಿ ಹೇಳುವ ಮೂಲಕ ಇದನ್ನು ಯಶಸ್ವಿಗೊಳಿಸಬೇಕು. ಸಾಲಿಡ್ ವೇಸ್ಟ್ ಮ್ಯಾನೇಜ ಮೆಂಟ್ ನಡಿ ನಾಲ್ಕು ರೀತಿಯ ವಿಂಗಡಣೆ ಮಾಡಿ ವಿಲೇವಾರಿ ಮಾಡಬೇಕಾಗುತ್ತದೆ. ಬಲ್ಕ್ ಜನರೇಟ್ ಲೋಕಲ್ ಬಾಡಿ ಗುರುತಿಸಿ ಅವುಗಳನ್ನು ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ ಎಂದರು.

ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈಗಾಗಲೇ ಆರಂಭಗೊಂಡ ಕಸ ಕಂಡರೆ ಫೋಟೋ ಕಳಿಸಿ ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದ್ದು, ಇನ್ನೂ ವ್ಯಾಪಕವಾಗಿ ಈ ಅಭಿಯಾನದ ಬಗ್ಗೆ ಜಾಗೃತಿ ಮೂಡಿಸಿ, ಸ್ವಚ್ಛ ನಗರವನ್ನಾಗಿಸಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಇಪ್ಪತ್ನಾಲ್ಕು ಗಂಟೆಯೊಳಗೆ ಕಸ ವಿಲೇವಾರಿಗೆ ಕ್ರಮ ಮಾಡಬೇಕು. ಈ ಬಗ್ಗೆ ಅಧಿಕಾರಿಗಳು ಗಮನ ಹರಿಸಬೇಕು. ಎಲ್ಲ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಮೇಲ್ವಿಚಾರಣೆ ಮಾಡಬೇಕು. ದೂರು ಬಂದ ತಕ್ಷಣ ನಿಮ್ಮ ಕೆಳಹಂತದ ಅಧಿಕಾರಿಗಳನ್ನು ನೇಮಿಸಿ, ಕಪ್ಪು ಸ್ಥಳ ಬಿದ್ದಲ್ಲಿ ಒಂದೆ ಕಡೆ ಕಸ ಹಾಕುವುದನ್ನು ನಿಗಾವಹಿಸಿ ಅಲ್ಲಿ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದರು.



# ಬೀದಿಬದಿ ವ್ಯಾಪಾರಿಗಳ ಶುಲ್ಕ ಹೆಚ್ಚಳ ಖಂಡಿಸಿ ಬಿಜೆಪಿ ಪ್ರತಿಭಟನೆ

**ಬೀದರ್, ಆ. 29:** ಬೀದಿ ಬದಿ ವ್ಯಾಪಾರಿಗಳ ಶುಲ್ಕ ಏರಿಕೆ ಮಾಡಿರುವ ಮಹಾನಗರ ಪಾಲಿಕೆಯ ಕ್ರಮವನ್ನು ಖಂಡಿಸಿ, ಬಿಜೆಪಿ ನಗರ ಘಟಕದ ಕಾರ್ಯಕರ್ತರು ನಗರದ ಗಣೇಶ್ ಮೈದಾನದಿಂದ ಪಾಲಿಕೆ ಕಚೇರಿ ವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಿ, ಕೂಡಲೇ ಹೆಚ್ಚಿಸಿರುವ ಶುಲ್ಕ ಹಿಂತೆಗೆದುಕೊಳ್ಳುವಂತೆ ಮನವಿ ಸಲ್ಲಿಸಿದರು. ಮಾರ್ಗದುದ್ದಕ್ಕೂ ಪಾಲಿಕೆ ವಿರುದ್ಧ ಘೋಷಣೆ ಕೂಗಿದರು. ಪಾಲಿಕೆಯು ಬೀದಿ ವ್ಯಾಪಾರಿಗಳ ಶುಲ್ಕವನ್ನು 20 ರಿಂದ 60 ರೂಗಳಿಗೆ ಹೆಚ್ಚಿಸಲಾಗಿದೆ. ಇದು ಬಡ ಬೀದಿಬದಿ ವ್ಯಾಪಾರಿಗಳಿಗೆ ಹೆಚ್ಚಿನ ಹೊರೆ ಹಾಕಿದಂತಾಗಿದೆ. ಈಗಾಗಲೇ ಜೀವನ ನಿರ್ವಹಣೆಗೆ ಕಷ್ಟಪಡುತ್ತಿರುವ ಸಣ್ಣ ವ್ಯಾಪಾರಿಗಳಿಗೆ



ಬೀದರನಲ್ಲಿ ಬೀದಿಬದಿ ವ್ಯಾಪಾರಿಗಳ ಶುಲ್ಕ ಹೆಚ್ಚಳ ವಿರೋಧಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿ ಹೆಚ್ಚಿಸಿರುವ ಶುಲ್ಕ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದರು.

ಇದರಿಂದ ಹೆಚ್ಚಿನ ಸಮಸ್ಯೆಯಾಗುತ್ತದೆ. ಆದಕಾರಣ ಕೂಡಲೇ ಹಿಂಪಡೆಯ ಬೇಕು ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ ಒತ್ತಾಯಿಸಿದರು. ಶುಲ್ಕ ವಸೂಲಿ ಮಾಡುವ ಅಧಿಕಾರ ಯಾರಿಗೆ ನೀಡಲಾಗಿದೆ? ಟೆಂಡರ್ ಪ್ರಕ್ರಿಯೆ ಹೇಗೆ ನಡೆದಿದೆ? ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ? ವ್ಯಾಪಾರಿಗಳಿಂದ ಎಷ್ಟು ಹಣ ವಸೂಲಿ ಮಾಡಲಾಗುತ್ತಿದೆ? ಎಂಬುದನ್ನು ಪಾಲಿಕೆ ಅಧಿಕಾರಿಗಳು ಸಾರ್ವಜನಿಕರಿಗೆ ತಿಳಿಸಬೇಕು ಎಂದು ಹಕ್ಕೊತ್ತಾಯ ಮಾಡಿದರು. ಇದಕ್ಕೆ ಸಚಿವರೊಬ್ಬರನ್ನೇ ಹೊಣೆಗಾರರನ್ನಾಗಿ ಮಾಡುವುದು ಸರಿಯಲ್ಲ. ಪಾಲಿಕೆ ಅಧಿಕಾರಿಗಳಿಗೂ ಸಮಾನ ಜವಾಬ್ದಾರಿ ಇದೆ. ಶುಲ್ಕ ವಸೂಲಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ಇರಬೇಕು. ಡುಪ್ಲಿಕೇಟ್ ರಸೀದಿ ಮೂಲಕ ಹಣ ವಸೂಲಿ ಮಾಡಲಾಗು ತ್ತಿದೆಯೇ ಎಂಬುದನ್ನೂ ಪರಿಶೀಲಿಸಬೇಕು ಎಂದು ಆಗ್ರಹಿಸಿದರು. ನಗರದ ವಾಕಿಂಗ್ ಸ್ಟ್ರೀಟ್ ಸೇರಿದಂತೆ ವಿವಿಧ ವ್ಯಾಪಾರ ಪ್ರದೇಶಗಳಲ್ಲಿ ಬೀದಿ ವ್ಯಾಪಾರಿಗಳಿಗೆ ಸೂಕ್ತ ಸ್ಥಳಾವಕಾಶ ಕಲ್ಪಿಸಬೇಕು. ವಾಹನ ಸಂಚಾರ ಹಾಗೂ ವ್ಯಾಪಾರ ವ್ಯವಸ್ಥೆಯನ್ನು ಸಮರ್ಪಕವಾಗಿ ನಿಯಂತ್ರಿಸಿ, ವ್ಯಾಪಾರಿಗಳ ಜೀವನೋಪಾಯಕ್ಕೆ ತೊಂದರೆಯಾಗದಂತೆ ಪಾಲಿಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

**ವ್ಯಾಪಾರಿಗಳಿಂದ ಹಣ ವಸೂಲಿ ಮಾಡುವಾಗ ಅಧಿಕೃತ ರಸೀದಿ ನೀಡಬೇಕು. ಸಾಧ್ಯವಾದರೆ ಕ್ಯೂಆರ್ ಕೋಡ್ ಮೂಲಕ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಬೇಕು**
**–ಸೋಮನಾಥ ಪಾಟೀಲ, ಬಿಜೆಪಿ ಜಿಲ್ಲಾ ಅಧ್ಯಕ್ಷ**

ನಗರ ಘಟಕದ ಅಧ್ಯಕ್ಷ ಶಶಿ ಹೊಸಳ್ಳಿ ಮಾತನಾಡಿ, ನಗರದ ಅಭಿವೃದ್ಧಿ ಕಾಮಗಾರಿಗಳಲ್ಲಿ ಗುತ್ತಿಗೆದಾರರು ಹಾಗೂ ಪ್ರಭಾವಿ ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ ಎಂದು ಆರೋಪಿಸಿದರು.



ರಾಜ್ಯ ಸರ್ಕಾರ ಬರಪೀಡಿತ ತಾಲೂಕುಗಳ ಪಟ್ಟಿಯಿಂದ ಕಲಬುರಗಿಯನ್ನು ಹೊರಗಿಟ್ಟಿರುವುದನ್ನು ವಿರೋಧಿಸಿ ಸಿಪಿಐಎಂ ಕಾರ್ಯಕರ್ತರು ಶನಿವಾರ ಕಲಬುರಗಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

# ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಪುನರಾರಂಭಕ್ಕೆ ಆಗ್ರಹ



ಬೀದರ ಸಹಕಾರಿ ಸಕ್ಕರೆ ಕಾರ್ಖಾನೆ ಖಾಸಗಿಯವರಿಗೆ ಮಾರಾಟ ಮಾಡದೇ ಪುನರಾರಂಭಿಸಿ ಕಬ್ಬು ಬೆಳೆಗಾರರ ರೈತರ ಶೋಷಣೆ ತಪ್ಪಿಸಲು ಕ್ರಮ ಕೈಕೊಳ್ಳಬೇಕು ಎಂದು ಸಂಯುಕ್ತ ಕಿಸಾನ್ ಜಿಲ್ಲಾ ಘಟಕ ಮತ್ತು ಬಿಎಸ್‌ಎಸ್‌ಕೆ ಕಾರ್ಮಿಕ ಸಂಘಗಳು ಜಂಟಿಯಾಗಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದವು.

ಬೀದರ್, ಆ. 29: ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ (ಬಿಎಸ್‌ಎಸ್‌ಕೆ) ಖಾಸಗಿಯವರಿಗೆ ಮಾರಾಟ ಮಾಡದೇ ಪುನರಾರಂಭಕ್ಕೆ ಕ್ರಮ ಕೈಗೊಳ್ಳಬೇಕೆಂದು ಸಂಯುಕ್ತ ಕಿಸಾನ್ ಮೋರ್ಚಾ ಜಿಲ್ಲಾ ಘಟಕ ಹಾಗೂ ಬಿಎಸ್‌ಎಸ್‌ಕೆ ಕಾರ್ಮಿಕರ ಸಂಘ ಒತ್ತಾಯಿಸಿದೆ.

ಸಂಘಟನೆಗಳ ಮುಖಂಡರು ಮುಖ್ಯಮಂತ್ರಿ ಹೆಸರಿಗೆ ಬರೆದ ಮನವಿ ಪತ್ರವನ್ನು ನಗರದಲ್ಲಿ ಜಿಲ್ಲಾಧಿಕಾರಿಗೆ ಸಲ್ಲಿಸಿ ಆಗ್ರಹಿಸಿದರು.

ಸಹಕಾರಿ ವಲಯದಲ್ಲಿ ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿದ್ದ ಬಿಎಸ್‌ಎಸ್‌ಕೆ ಕಾರ್ಖಾನೆ ಬೀದರ್ ಜಿಲ್ಲೆಯ ರೈತರ ಪ್ರಮುಖ ಆಧಾರ ವಾಗಿತ್ತು. ಕಾರ್ಖಾನೆ ನಂಬಿಕೊಂಡು ಜಿಲ್ಲೆಯ ಸಾವಿರಾರು ಕುಟುಂಬಗಳು ಜೀವನ ನಡೆಸುತ್ತಿದ್ದವು. ಆದರೆ, ಆಡಳಿತ ಮಂಡಳಿಯ ದುರಾಡಳಿತದಿಂದಾಗಿ ಸರ್ಕಾರದ ಅನುಮತಿಯಿಲ್ಲದೆ ಕಾರ್ಖಾನೆಯನ್ನು ಅಕ್ರಮವಾಗಿ ಮುಚ್ಚಲಾಗಿದೆ ಎಂದು ಆರೋಪಿಸಿದರು.

ಕಾರ್ಖಾನೆ ಮೇಲೆ 241.44 ಕೋಟಿ ಸಾಲ ಹಾಗೂ 189.40 ಕೋಟಿ ಬಡ್ಡಿ ಸೇರಿದಂತೆ ಒಟ್ಟು 430.84 ಕೋಟಿ ಸಾಲ ಇದೆ. ಕಾರ್ಖಾನೆ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕು. ಕಾರ್ಖಾನೆ ಮಾರಾಟದ ನಿರ್ಧಾರ ಕೈಬಿಡಬೇಕು. ರೈತರ ಷೇರು ಹಣ ಹಾಗೂ ಕಾರ್ಖಾನೆಯ ಜಮೀನನ್ನು ಪಟ್ಟಭದ್ರ ಹಿತಾಸಕ್ತಿಗಳು ಸ್ವಾಧೀನಕ್ಕೆ ಮುಂದಾಗಿವೆ. ಸರ್ಕಾರವೇ ಕ್ರಮ ಕೈಗೊಂಡು ಪುನರಾರಂಭಿಸಬೇಕು ಎಂದು ಆಗ್ರಹಿಸಿದರು.

# ಪಿಒಪಿ ಗಣೇಶನ ಬದಲಿಗೆ ಪರಿಸರಸ್ನೇಹಿ ಗಣೇಶ ಪ್ರತಿಷ್ಠಾಪಿಸಿ: ವಿಜಯಪುರ ಜಿಲ್ಲಾಧಿಕಾರಿ ಕರೆ




**ವಿಜಯಪುರ,ಆ.29:** ಜಿಲ್ಲೆಯಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ರಾಸಾಯನಿಕ ಬಣ್ಣ ಲೇಪಿತ ಗಣೇಶ ಮೂರ್ತಿಗಳ ತಯಾರಿಕೆ, ಸಂಗ್ರಹಣೆ, ಮಾರಾಟ ಹಾಗೂ ವಿಸರ್ಜನೆಯನ್ನು ಸರ್ಕಾರದ ಆದೇಶದ ಮೇರೆಗೆ ನಿಷೇಧಿಸಲಾಗಿದ್ದು, ಪರಿಸರ ಸ್ನೇಹಿ ಗಣೇಶೋತ್ಸವ ಆಚರಿಸಲು ನಿಗಾವಹಿಸಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಶನಿವಾರ ನಡೆದ ಗಣೇಶ ಹಬ್ಬ ಆಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಈ ಸೂಚನೆ ನೀಡಿದರು.

ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿಗಳ ತಯಾರಿಕೆ ಮತ್ತು ಮಾರಾಟಕ್ಕೆ ಅನುಮತಿಸಿ, ಎಲ್ಲಾ ಸ್ಥಳೀಯ ಸಂಸ್ಥೆಗಳು ಮೂರ್ತಿ ತಯಾರಕರು ಹಾಗೂ ಗಣೇಶ ಮಹಾಮಂಡಳಗಳೊಂದಿಗೆ ಸಭೆ ನಡೆಸಿ ಈ ಬಗ್ಗೆ ಕಟ್ಟುನಿಟ್ಟಿನ ಮಾಹಿತಿ ನೀಡಬೇಕು. ಸಾರ್ವಜನಿಕರಲ್ಲಿ ಪರಿಸರ ಸ್ನೇಹಿ ಹಬ್ಬದ ಆಚರಣೆ ಕುರಿತು ಅರಿವು ಮೂಡಿಸಿ ಎಂದರು.

ಕೃತಕ ಹೊಂಡಗಳಲ್ಲಿ ವಿಸರ್ಜನೆ: ನೈಸರ್ಗಿಕ ಜಲಮೂಲಗಳು ಕಲುಷಿತಗೊಳ್ಳದಂತೆ ಸೂಕ್ತ ಪ್ರದೇಶಗಳಲ್ಲಿ ಕೃತಕ ಕೆರೆ ಅಥವಾ ಹೊಂಡಗಳನ್ನು ನಿರ್ಮಿಸಿ ಮೂರ್ತಿಗಳನ್ನು ವಿಸರ್ಜಿಸಲು ವ್ಯವಸ್ಥೆ ಮಾಡಲಾಗುವುದು. ಹಾಗಾಗಿ ಸಾರ್ವಜನಿಕರು ಗಣೇಶ ಮೂರ್ತಿಗಳನ್ನು ಕೃತಕ ಹೊಂಡಗಳಲ್ಲೇ ವಿಸರ್ಜಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು. ಜೊತೆಗೆ ಹೂವು, ವಸ್ತ್ರ, ಪ್ಲಾಸ್ಟಿಕ್ ಹಾರ ಮುಂತಾದ ಅಲಂಕಾರಿಕ ವಸ್ತುಗಳ ತ್ಯಾಜ್ಯಗಳನ್ನು ಮೂರ್ತಿಗಳ ಜೊತೆ ವಿಸರ್ಜಿಸಲು ಅವಕಾಶ ವಿರುವುದಿಲ್ಲ ಎಂಬುದನ್ನು ಗಣೇಶ ಮಹಾಮಂಡಳಿಯವರಿಗೆ ತಿಳಿವಳಿಕೆ ನೀಡಬೇಕು ಎಂದರು.

ಪಿ.ಒ.ಪಿ ಮೂರ್ತಿ ತಯಾರಿಸುವ ಹಾಗೂ ಮಾರಾಟ ಮಾಡುವ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ವ್ಯಾಪಾರ ಲೈಸೆನ್ಸ್ ನೀಡಲಾಗುವುದಿಲ್ಲ. ಈಗಾಗಲೇ ನೀಡಿದ್ದರೆ ಅದನ್ನು ತಕ್ಷಣ ಹಿಂಪಡೆಯಬೇಕು ಎಂದೂ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ಪಿಒಪಿ ಗಣೇಶ ಮೂರ್ತಿಗಳ ಮಾರಾಟ ಹಾಗೂ ಹೊರರಾಜ್ಯಗಳಿಂದ ಅವುಗಳ ಪೂರೈಕೆಯನ್ನು ನಿಷೇಧಿಸ ಲಾಗಿದೆ. ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವ ಪಿ.ಒ.ಪಿ ಮೂರ್ತಿಗಳನ್ನು ತಡೆಯಲು ಗಡಿ ಭಾಗದ ಎಲ್ಲಾ ಚೆಕ್ ಪೋಸ್ಟ್‌ಗಳಲ್ಲಿ ನಿಗಾವಹಿಸಿ ಎಂದರು.

ಪರಿಸರಸ್ನೇಹಿ ಮಣ್ಣಿನ ಗಣಪತಿ ಮೂರ್ತಿಗಳ ಬಳಕೆಗೆ ಸಂಘ–ಸಂಸ್ಥೆಗಳೊಂದಿಗೆ ಸಭೆ ನಡೆಸಿ ಜಾಗೃತಿ ಮೂಡಿಸಬೇಕು. ಹಾಗಾಗಿ ಗಣೇಶ ಪ್ರತಿಷ್ಠಾಪನೆಯಿಂದ ವಿಸರ್ಜನೆಯಾಗುವವರೆಗೂ ಸರ್ಕಾರದ ನಿಯಮಾನುಸಾರ ಪರಿಸರ ಸ್ನೇಹಿ ಗಣೇಶೋತ್ಸವ ಆಚರಿಸಲಿಕ್ಕೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಪಟಾಕಿ ಮಾರಾಟಕ್ಕೆ ನಿಗದಿಪಡಿಸಿದ ಸ್ಥಳಗಳಲ್ಲಿ ಸುರಕ್ಷತಾ ನಿಯಮ ಪಾಲಿಸಿ ಲೈಸೆನ್ಸ್ ನೀಡಲಾಗುವುದು. ಹಬ್ಬದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಲು ಅವಕಾಶವಿದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗಣೇಶ ಮೆರವಣಿಗೆ ಮಾರ್ಗದಲ್ಲಿ ವಿದ್ಯುತ್ ಕಂಬ ಸೇರಿದಂತೆ ಅಗತ್ಯ ಕ್ರಮ ವಹಿಸಬೇಕು. ಮೆರವಣಿಗೆ ಸಾಗುವ ಮಾರ್ಗಗಳಲ್ಲಿನ ವಿದ್ಯುತ್ ಕಂಬಗಳ ಬಗ್ಗೆ ಹೆಸ್ಕಾಂ ಅಧಿಕಾರಿಗಳು ನಿಗಾವಹಿಸಬೇಕು. ಗಣೇಶ ಮೂರ್ತಿಗಳ ಎತ್ತರಕ್ಕೆ ತಕ್ಕಂತೆ ವಿದ್ಯುತ್ ಲೈನ್‌ಗಳ ಸುರಕ್ಷತೆ ಖಾತ್ರಿಪಡಿಸಿಕೊಂಡು, ಯಾವುದೇ ವಿದ್ಯುತ್ ಅವಘಡ ಸಂಭವಿಸದಂತೆ ನೋಡಿಕೊಳ್ಳಬೇಕು ಎಂದೂ ಸೂಚಿಸಿದರು.

ಗಣೇಶ ವಿಸರ್ಜನಾ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರಾ ವ್ಯವಸ್ಥೆ ಮಾಡಬೇಕು ಎಂದು ಪಟ್ಟಣ ಪಂಚಾಯತಿ ಹಾಗೂ ಪುರಸಭೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಧ್ವನಿವರ್ಧಕ ಬಳಕೆ ಬಗ್ಗೆಯೂ ಅಧಿಕಾರಿಗಳು ತ ಗಮನ ಹರಿಸಬೇಕು ಎಂದ ಜಿಲ್ಲಾಧಿಕಾರಿಗಳು, ಸರ್ಕಾರ ಮತ್ತು ಪೊಲೀಸ್ ಇಲಾಖೆಯ ನಿಯಮಗಳಂತೆ ಧ್ವನಿವರ್ಧಕಗಳ ಬಳಕೆಗೆ ನಿಗದಿಪಡಿಸಿದ ಸಮಯ ಹಾಗೂ ಡೆಸಿಬಲ್ ನಿಯಮಗಳನ್ನು ಪಾಲಿಸಬೇಕು ಎಂದು ತಿಳಿಸಿದರು.

ಗಣೇಶ ವಿಸರ್ಜನಾ ಸ್ಥಳಗಳಲ್ಲಿ ಕೃತಕ ಹೊಂಡಗಳನ್ನು ನಿರ್ಮಿಸಬೇಕು. ಸುರಕ್ಷತೆಯ ದೃಷ್ಟಿಯಿಂದ ಸಿಸಿಟಿವಿ ಕ್ಯಾಮರಾ ಹಾಗೂ ಸೂಕ್ತ ಬೆಳಕಿನ ವ್ಯವಸ್ಥೆಯನ್ನು ಪಟ್ಟಣ ಪಂಚಾಯತಿ ಮತ್ತು ಪುರಸಭೆ ಅಧಿಕಾರಿಗಳು ಮಾಡಬೇಕು ಎಂದರು.

# ಸಕಾಲದಲ್ಲಿ ವಿಲೇವಾರಿಯಾಗದ 568 ಅರ್ಜಿಗಳು...!

ಕಲಬುರಗಿ, ಆ. 29: ಕಳೆದ ವರ್ಷ ರಾಜ್ಯದಲ್ಲೇ ಸಕಾಲ ಅರ್ಜಿಗಳ ವಿಲೇವಾರಿಯಲ್ಲಿ ಮೊದಲ ಸ್ಥಾನದಲ್ಲಿದ್ದ ಕಲಬುರಗಿ ಜಿಲ್ಲೆ, ಇದೀಗ ನಿಗದಿತ ಅವಧಿಯೊಳಗೆ ಸರ್ಕಾರಿ ಸೇವೆಗಳನ್ನು ಖಾತರಿಪಡಿಸುವ 'ಸಕಾಲ' ಯೋಜನೆ ಯಡಿ ಜಿಲ್ಲೆಯ ಜನರು ಸಲ್ಲಿಸಿದ 568 ಅರ್ಜಿಗಳ ವಿಲೇವಾರಿ ಅವಧಿ ಮುಗಿದಿದ್ದು, ತಾಂತ್ರಿಕ ಕಾರಣಗಳಿಗಾಗಿ ಅರ್ಜಿಗಳ ವಿಲೇವಾರಿ ಸಾಧ್ಯವಾಗಿಲ್ಲ ಎನ್ನುತ್ತಾರೆ ಅಧಿಕಾರಿಗಳು.

'ಇಂದು ನಾಳೆ ಇನ್ನಿಲ್ಲ; ಹೇಳಿದ ದಿನ ತಪ್ಪೊಲ್ಲ' ಎನ್ನುವುದು ಈ ಯೋಜನೆಯ ಧ್ಯೇಯ. ಇದರಡಿ 114 ಇಲಾಖೆ–ಸಂಸ್ಥೆಗಳು ಹಾಗೂ 1,446 ಸೇವೆಗಳು ಬರುತ್ತವೆ. ಇಲ್ಲಿಯವರೆಗೂ ಸಲ್ಲಿಕೆಯಾದ 30,66,900 ಅರ್ಜಿಗಳ ಪೈಕಿ 30,61,880 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. 2,97,596 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಜಿಲ್ಲೆಯಲ್ಲಿ ಕಲಬುರಗಿ ನಗರ ಹಾಗೂ ತಾಲ್ಲೂಕಿನಲ್ಲಿ ಹೆಚ್ಚು ಅರ್ಜಿ ವಿಲೇವಾರಿ ಮಾಡಲಾಗಿದೆ. ಇದುವರೆಗೂ 12,54,793 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಕಲಬುರಗಿ ತಾಲ್ಲೂಕಿನಲ್ಲಿಯೇ ಹೆಚ್ಚು ಅಂದರೆ 257 ಅರ್ಜಿಗಳ ಅವಧಿ ಮುಗಿದಿದೆ.

ಹೆಚ್ಚು ಅರ್ಜಿ ಬಾಕಿ ಉಳಿಸಿಕೊಂಡ ತಾಲ್ಲೂಕುಗಳಲ್ಲಿ ಚಿಂಚೋಳಿ ಎರಡನೇ ಸ್ಥಾನದಲ್ಲಿದ್ದು, 1,84,542 ಅರ್ಜಿ ವಿಲೇವಾರಿ ಮಾಡಲಾಗಿದ್ದು, 158 ಬಾಕಿ ಇವೆ. ಸೇಡಂ 43, ಚಿತ್ತಾಪುರ 29, ಆಳಂದ 11, ಅಫಜಲಪುರ 20, ಜೇವರ್ಗಿ 14 ಹಾಗೂ ಕಾಳಗಿ ತಾಲ್ಲೂಕುಗಳಲ್ಲಿ 17 ಅರ್ಜಿಗಳು ಬಾಕಿ ಇವೆ.

ಇಲಾಖೆಗಳ ಪೈಕಿ ಮಾಲಿನ್ಯ ನಿಯಂತ್ರಣ ಮಂಡಳಿ ಹೆಚ್ಚು ದಿನಗಳವರೆಗೆ ಅರ್ಜಿ ಬಾಕಿ ಉಳಿಸಿಕೊಂಡಿದೆ. ಕೆಲ ಅರ್ಜಿಗಳ ಅವಧಿ ಮುಗಿದು 488, 417, 230, 197, 69 ದಿನಗಳಾಗಿವೆ. 2ನೇ ಸ್ಥಾನದಲ್ಲಿ ಕಂದಾಯ ಇಲಾಖೆ ಇದೆ. ಕೆಲ ಅರ್ಜಿಗಳ ಅವಧಿ ಮುಗಿದು 163, 107 ದಿನಗಳಾಗಿವೆ. ಇ–ಸ್ವತ್ತು ಕೋರಿ ಚಿಂಚೋಳಿ ತಾಲ್ಲೂಕಿನ ಹೊಡೆಬೀರನಳ್ಳಿ ಗ್ರಾಮ ಪಂಚಾಯಿತಿಗೆ ಹಲವಾರು ಅರ್ಜಿಗಳು ಸಲ್ಲಿಕೆಯಾಗಿವೆ. ಅವಧಿ ಮುಗಿದು 148 ದಿನ ಮೇಲಾದರೂ ವಿಲೇವಾರಿ ಮಾಡುವ ಗೋಜಿಗೆ ಹೋಗಿಲ್ಲ. ಜಾತಿ ಪ್ರಮಾಣಪತ್ರದಲ್ಲಿ ಹೆಸರು ತಿದ್ದುಪಡಿ ಕೋರಿ ಕಂದಾಯ ಇಲಾಖೆಗೆ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಪೂರಕ ದಾಖಲೆ ಸಲ್ಲಿಸದ ಕಾರಣ ಕೆಲವು ಅರ್ಜಿಗಳನ್ನು ವಿಲೇವಾರಿ ಮಾಡಿಲ್ಲ ಎನ್ನುತ್ತಾರೆ ಇಲಾಖೆಯ ಅಧಿಕಾರಿಗಳು.

ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸುವುದು, ಆರ್‌ಟಿಸಿ ತಿದ್ದುಪಡಿ, ನಿರುದ್ಯೋಗ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣಪತ್ರ, ಆದಾಯ ಪ್ರಮಾಣ ಪತ್ರ, ಬೆಳೆ ಪ್ರಮಾಣಪತ್ರ ಕೋರಿ ಸಲ್ಲಿಸಿದ ಅರ್ಜಿಗಳೂ ಬಾಕಿ ಇವೆ.

**ಜಾತಿ ಮತ್ತು ಆದಾಯ ಪ್ರಮಾಣಪತ್ರ; 21, ನಿರುದ್ಯೋಗ ಪ್ರಮಾಣಪತ್ರ ; 7, ಭೂರಹಿತ ಪ್ರಮಾಣಪತ್ರ ; 7, ಮರಣ ಪ್ರಮಾಣಪತ್ರ ; 7, ಇಡಬ್ಲ್ಯೂಎಸ್ ಪ್ರಮಾಣಪತ್ರ ; 21, ವ್ಯಾಪಾರ ಪರವಾನಗಿ ; 15, ಮೆಟ್ರಿಕ್‌ಪೂರ್ವ ಶಿಷ್ಯವೇತನ (ಸಮಾಜಕಲ್ಯಾಣ) ; 60, ನೂತನ ನಲ್ಲಿ ಸಂಪರ್ಕ ; 3, ಇ–ಸ್ವತ್ತು ; 45, ನೌಕರಿಗೆ ಪೊಲೀಸ್ ಪರಿಶೀಲನಾ ಪ್ರಮಾಣಪತ್ರ ; 20 ವಿಲೇವಾರಿ ಆಗಬೇಕಿದೆ.**
**–ಸಂಜುಕುಮಾರ್ ದಾಸರ, ತಹಶೀಲ್ದಾರ್.**

ಪ್ರೈಜ್‌ಮನಿ ಅರ್ಜಿಗಳು ಬಾಕಿ: ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಕೋರ್ಸ್‌ಗಳಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕ ಪಡೆದ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಸರ್ಕಾರ ಪ್ರೋತ್ಸಾಹಧನ ನೀಡುತ್ತಿದೆ. ಅದಕ್ಕಾಗಿ ಜೂನ್‌ನಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗೆ ಹಲವಾರು ವಿದ್ಯಾರ್ಥಿಗಳು ಸಕಾಲ ಯೋಜನೆ ಅಡಿ ಅರ್ಜಿ ಸಲ್ಲಿಸಿದ್ದಾರೆ. ಆ ಅರ್ಜಿಗಳು ಬಾಕಿ ಇವೆ. ವಿವಿಯಲ್ಲಿ 'ವಿರಳ': ಕಲಬುರಗಿ ವಿಶ್ವವಿದ್ಯಾಲಯದಲ್ಲಿ ವಲಸೆ ಪ್ರಮಾಣ ಪತ್ರ ವಿತರಣೆ ಸೇರಿದಂತೆ ವಿವಿಧ ಸೇವೆಗಳನ್ನು ಯೋಜನೆಯಡಿ ತರಲಾಗಿದೆ. ಆದರೆ, ವಿದ್ಯಾರ್ಥಿಗಳು ಸೇವೆಗಳನ್ನು ಕೋರಿ 'ಸಕಾಲ'ದಲ್ಲಿ ಅರ್ಜಿ ಸಲ್ಲಿಸುವುದು ವಿರಳ. ಆದ್ದರಿಂದ ವಿವಿ ಸಿಬ್ಬಂದಿ ಆನ್‌ಲೈನ್‌ನಲ್ಲಿ ಕೋರಿಕೆಗಳನ್ನು ಪರಿಶೀಲಿಸುವುದೂ 'ವಿರಳ'. ಯೋಜನೆ ಆರಂಭವಾದಾಗ ಹೆಚ್ಚಿನ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುತ್ತಿದ್ದರು. ಈಗ ಯಾರೂ ಸಲ್ಲಿಸುವುದಿಲ್ಲ. ನೇರವಾಗಿ ವಿಶ್ವವಿದ್ಯಾಲಯಕ್ಕೆ ಬಂದು ಅರ್ಜಿ ಸಲ್ಲಿಸುತ್ತಾರೆ ಎಂದು ವಿವಿ ಸಿಬ್ಬಂದಿಯೊಬ್ಬರು ತಿಳಿಸಿದರು.

# ರಾಯಚೂರು ಜಿಲ್ಲೆಯ ಭೂಗರ್ಭದ ಚಿನ್ನ, ತಾಮ್ರ ನಿಕ್ಷೇಪ ಸಮೀಕ್ಷೆಗೆ ಚಾಲನೆ




**ರಾಯಚೂರು, ಆ. 29:** ಜಿಲ್ಲೆಯ ಲಿಂಗದಹಳ್ಳಿ ಗ್ರಾಮದ ಪರಮಾನಂದ ದೇವಸ್ಥಾನದ ಆವರಣದಲ್ಲಿ ಸಿಂಗರಾಣಿ ಕಲರ್ಸ್ ಲಿಮಿಟೆಡ್ ಸಂಸ್ಥೆ ವತಿಯಿಂದ ನಿಕ್ಷೇಪ ಸಮೀಕ್ಷೆ ಕಾರ್ಯಕ್ಕೆ ತೆಲಂಗಾಣ ರಾಜ್ಯದ ಉಪ ಮುಖ್ಯಮಂತ್ರಿ ಭಟ್ಟಿ ವಿಕ್ರಮಾರ್ಕ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಈ ಪ್ರದೇಶದಲ್ಲಿ ಎಷ್ಟರಮಟ್ಟಿಗೆ ಅದಿರು ಇದೆ ಎನ್ನುವುದನ್ನು ಸಿಂಗರೇಣಿ ಗಣಿ ಸಂಸ್ಥೆ ಮುಂದಿನ ಮೂರು ವರ್ಷಗಳ ಕಾಲ ಎಲ್ಲಾ ರೀತಿಯ ಪರಿಶೀಲನೆ ಮಾಡಿ ವರದಿಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ನೀಡುತ್ತದೆ. ಮುಂದೆ ಗಣಿಗಾರಿಕೆ ಮಾಡುವುದು ಬಿಡುವುದು ಸರ್ಕಾರದ ವಿವೇಚನೆಗೆ ಬಿಟ್ಟಿದ್ದು. ಈ ಸಂಸ್ಥೆ ಇಲ್ಲಿನ ರೈತರ ಜಮೀನುಗಳಲ್ಲಿ ಕೊಳವೆ ಕೊರೆದು ಪರಿಶೀಲಿಸುತ್ತದೆ. ಅಗತ್ಯಕ್ಕೆ ಬೇಕಾಗುವಷ್ಟು ಕೂಲಿಕಾರ್ಮಿಕರನ್ನು ಸಂಸ್ಥೆಯು ತಾತ್ಕಾಲಿಕವಾಗಿ ಕೆಲಸಕ್ಕೆ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಈ ಪ್ರದೇಶದಲ್ಲಿ ಚಿನ್ನ ಹಾಗೂ ತಾಮ್ರ ಪರಿಶೋಧನೆ ಮಾಡಲು ಪರವಾನಗಿ ನೀಡಲಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ಜೋತಿಪ್ರಕಾಶ ತಿಳಿಸಿದರು.

ಪರಮಾನಂದ ದೇವಸ್ಥಾನದಿಂದ ಉತ್ತರ ಭಾಗಕ್ಕೆ ಕೃಷ್ಣ ನದಿ ಇದ್ದು, ದೇವಸ್ಥಾನದಿಂದ ಪೂರ್ವಕ್ಕೆ ಸುಮಾರು 17 ಕಿ.ಮೀ ಉದ್ದ ಹಾಗೂ ದಕ್ಷಿಣಕ್ಕೆ 15 ಕಿ.ಮೀ ಉದ್ದದವರೆಗೆ ಸರ್ವೆ ಕಾರ್ಯ ಪ್ರಾರಂಭಿಸಲಾಗುತ್ತದೆ ಎಂದು ಸಂಸ್ಥೆಯ ಸಿಬ್ಬಂದಿ ತಿಳಿಸಿದರು.

ಉಪವಿಭಾಗಾಧಿಕಾರಿ ಹಂಪಣ್ಣ ಸಜ್ಜನ್,ಗಣಿ–ಭೂ ವಿಜ್ಞಾನ ಇಲಾಖೆಯ ಅಧಿಕಾರಿ ಮುತ್ತಪ್ಪ, ಉಪ ತಹಶೀಲ್ದಾರ್ ಗೋವಿಂದ ನಾಯಕ, ಕಂದಾಯ ನಿರೀಕ್ಷಕ ದೇವರೆಡ್ಡಿ, ಮುಖಂಡ ರವಿ ಬೋಸ ರಾಜ್, ರಾಮಣ್ಣ ಇರಬಗೇರ, ಬಸವರಾಜ ಎಚ್.ಪಿ., ತಿಮ್ಮಪ್ಪ ನಾಯಕ, ದುರಗಪ್ಪ ರಾಂಪಳ್ಳಿ ಇದ್ದರು.

# ಆರೋಗ್ಯಕರ ದೇಹ, ಆರೋಗ್ಯಕರ ಮನಸ್ಸಿಗೆ ಕ್ರೀಡೆ ಅಗತ್ಯ: ಡಾ. ಜಾವಿದ್



**ವಿಜಯಪುರ, ಆ.29:** ಕ್ರೀಡೆ ಹಾಗೂ ವ್ಯಾಯಾಮ ದೇಹವನ್ನು ಸದೃಢವಾಗಿಸುವುದರ ಜೊತೆಗೆ ಮನಸ್ಸನ್ನು ಸಕ್ರಿಯವಾಗಿರಿಸುತ್ತವೆ. ಆರೋಗ್ಯಕರ ದೇಹವು ಆರೋಗ್ಯಕರ ಮನಸ್ಸಿಗೆ ಕಾರಣವಾಗುತ್ತದೆ ಎಂದು ಅಧ್ಯಕ್ಷ ಡಾ. ಜಾವಿದ್ ಜಮಾದಾರ ಹೇಳಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿವಿಧ ಕ್ರೀಡಾ ಸಂಸ್ಥೆಗಳ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಉದ್ಘಾಟಿಸಿ, ಕ್ರೀಡೆಗಳು ತಂಡದ ಕೆಲಸ, ಶಿಸ್ತು, ತಾಳ್ಮೆ ಹಾಗೂ ಗೆಲುವು–ಸೋಲನ್ನು ಸಮಚಿತ್ತದಿಂದ ಸ್ವೀಕರಿಸುವ ಮನೋಭಾವ ಕಲಿಸುತ್ತವೆ. ಸದೃಢ ಆರೋಗ್ಯ ಹಾಗೂ ರೋಗಮುಕ್ತ ಜೀವನಕ್ಕಾಗಿ ಕ್ರೀಡೆಯನ್ನು ಸಕ್ರಿಯ ಜೀವನಶೈಲಿಯ ಭಾಗವಾಗಿಸಿಕೊಳ್ಳಬೇಕು ಎಂದರು.

ಎಸ್.ಕೆ. ಇನಾಮದಾರ ಮಾತನಾಡಿ, ಹಾಕಿಯ ಮಾಂತ್ರಿಕ ಮೇಜರ್ ಧ್ಯಾನಚಂದ ಅವರ ಸಾಧನೆ ಇಂದಿಗೂ ಯುವ ಕ್ರೀಡಾಪಟುಗಳಿಗೆ ಸ್ಫೂರ್ತಿಯಾಗಿದೆ ಎಂದರು. ಭೀಮಸೇನ ಕೊಕರೆ ಮಾತನಾಡಿ, ವಿಜಯಪುರದಲ್ಲಿ ಸರ್ಕಾರ ಮೀಸಲಿಟ್ಟಿರುವ 200 ಎಕರೆ ಪ್ರದೇಶದಲ್ಲಿ ಬೃಹತ್ ಕ್ರೀಡಾ ಸಂಕೀರ್ಣ ನಿರ್ಮಿಸಿ ಎಲ್ಲ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ವಿವಿಧ ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಗೌರವಿಸಲಾಯಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರಾಜಶೇಖರ ಧೈವಾಡಿ, ರಾಜು ಬಿರಾದಾರ, ಎಸ್.ಎಸ್. ಹಿರೇಮಠ, ಶ್ರೀಧರ ಜೋಶಿ, ರಾಜು ಬಿದರಿ, ಯುವ ಮುಖಂಡ ನಾಗರಾಜ ಲಂಬು ಕ್ರೀಡಾಪಟುಗಳು ಉಪಸ್ಥಿತರಿದ್ದರು.

# ಅನಧಿಕೃತ ನೀರಾವರಿ ತೆರವು ಮಾಡಲಿ: ರೈತರ ಪ್ರತಿಭಟನೆ

ರಾಯಚೂರು, ಆ. 29: ತುಂಗಭದ್ರಾ ಎಡದಂಡೆ ಕಾಲುವೆಗೆ ನೀರು ಹರಿಸಿ 12 ದಿನಗಳಾದರೂ ಜಿಲ್ಲೆಯ ಸಿರವಾರ ತಾಲೂಕಿನಲ್ಲಿ ನಾಲೆ ಕೊನೆಯ ಭಾಗಕ್ಕೆ ಇನ್ನೂ ನೀರು ತಲುಪಿಲ್ಲ. ಇದಕ್ಕೆ ಮುಖ್ಯ ಕಾರಣ ಕಾಲುವೆ ಮೇಲ್ಭಾಗದಲ್ಲಿ ಅಧಿಸೂಚಿತ ಪ್ರದೇಶವಲ್ಲದ ಅನಧಿಕೃತ ನೀರಾವರಿ ನಡೆಯುತ್ತಿದ್ದು, ಕೂಡಲೇ, ಅಧಿಕಾರಿಗಳು ಇದನ್ನು ತಡೆದು, ಅಧಿಸೂಚಿತ ಪ್ರದೇಶವಾದ ಕಾಲುವೆ ಕೊನೆ ಭಾಗಕ್ಕೆ ನೀರು ಹರಿಸಲು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿ ರೈತರು ಪ್ರತಿಭಟನೆ ನಡೆಸಿದರು.



ರಾಯಚೂರು ಜಿಲ್ಲೆಯ ಸಿರವಾರ ನೀರಾವರಿ ಅಧಿಸೂಚಿತ ಪ್ರದೇಶಕ್ಕೆ ತುಂಗಭದ್ರಾ ಕಾಲುವೆ ನೀರು ಹರಿಯುತ್ತಿಲ್ಲ ಎಂದು ಆರೋಪಿಸಿ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರ ನೇತೃತ್ವದಲ್ಲಿ ರೈತರು ನೀರಾವರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಈ ರೀತಿ ಅನಧಿಕೃತ ನೀರಾವರಿಗೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವೈಫಲ್ಯವಾಗಿದೆ ಎಂದು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಆಕ್ರೋಶ ವ್ಯಕ್ತಪಡಿಸಿದರು.

ನೀರಾವರಿ ಇಲಾಖೆ ಕಚೇರಿ ಆವರಣದಲ್ಲಿ ಪಕ್ಷಾತೀತವಾಗಿ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಧರಣಿಯಲ್ಲಿ ಮಾತನಾಡಿದ ಅವರು, ಸಿರವಾರ ಮತ್ತು ಯರಮರಸ್ ವಿಭಾಗಕ್ಕೆ ಸಮರ್ಪಕ ನೀರು ಬಾರದಿರಲು ಗಂಗಾವತಿ, ವಡ್ಡರಹಟ್ಟಿ, ಕಾರಟಗಿ, ತುರ್ವಿಹಾಳ್ ವಿಭಾಗದಲ್ಲಿ ಅನಧಿಕೃತವಾಗಿ ಲಕ್ಷಾಂತರ ಎಕರೆ ನೀರಾವರಿ ಇರುವುದು ಮುಖ್ಯ ಕಾರಣ ಎಂದು ದೂರಿದರು.

ಮುಖ್ಯನಾಲೆ ಮತ್ತು ಉಪ ಕಾಲುವೆಗಳಿಂದ ಅನಧಿಕೃತವಾಗಿ ನೀರನ್ನು ಪಂಪ್‌ಸೆಟ್ ಮುಖಾಂತರ ಉಪಯೋಗಿಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಸಿರವಾರ, ಮಾನ್ವಿ ಹಾಗೂ ರಾಯಚೂರು ತಾಲೂಕುಗಳ ರೈತರು ಹತಾಶರಾಗಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲೇ ಹೆಚ್ಚು ಅನಧಿಕೃತ ನೀರಾವರಿ ಪ್ರದೇಶ ಇರುವುದರಿಂದ ಮೈಲ್ 47ರಲ್ಲಿ ನೀರು ಕಡಿಮೆ ಬರುತ್ತಿದೆ. ಈ ಕುರಿತು ಕೊಪ್ಪಳ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಕಾಲುವೆ ನೀರಿನ ನಿರ್ವಹಣೆ ಜವಾಬ್ದಾರಿಯನ್ನು ಕಲಬುರಗಿ ಪ್ರಾದೇಶಿಕ ಆಯುಕ್ತರಿಗೆ ವಹಿಸಬೇಕು. ತುಂಗಭದ್ರಾ ಎಡದಂಡೆ ಕಾಲುವೆ ಮೈಲ್ 69 ರಿಂದ 104ರವರೆಗೆ ನಿಗದಿತ ಗೇಜ್ ನಿರ್ವಹಣೆ ಮಾಡಬೇಕು. ಮೈಲ್ 47ರಲ್ಲಿ 12 ಅಡಿ, 69ರಲ್ಲಿ ಒಂಬತ್ತು ಅಡಿ, ಮೈಲ್ 104ರಲ್ಲಿ ಆರು ಅಡಿ ಗೇಜ್ ನಿರ್ವಹಣೆ ಮಾಡಬೇಕು. ಮೈಲ್ 69ರಲ್ಲಿನ ಗೇಜ್ ಸರಿಯಾಗಿಲ್ಲ. ಕೂಡಲೇ ಗೇಜ್ ಸರಿಪಡಿಸಬೇಕು. ಸಿರವಾರ ವಿಭಾಗದ ಎಲ್ಲ ಉಪ ಕಾಲುವೆಗಳ ಹೂಳು ಮತ್ತು ಜಂಗಲ್ ತೆರವು ಮಾಡಬೇಕು. ತುಂಗಭದ್ರಾ ಎಡದಂಡೆ ನಾಲೆ ನೀರು ನಿರ್ವಹಣೆ ಮಾಡಲು ಸಿಬ್ಬಂದಿ ಕೊರತೆ ಇದ್ದು, ಅದನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು. ರಾಯಚೂರು ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ್ ನೀರು ಹರಿಸುವ ಭರವಸೆ ನೀಡಿದರು. ಆದರೆ ವಿಭಾಗೀಯ ಆಯುಕ್ತರು ಆಗಮಿಸಿ ನೀರು ಹರಿಸುವ ಭರವಸೆ ನೀಡಿದರೆ ಮಾತ್ರ ಧರಣಿ ಹಿಂಪಡೆಯಲಾ ಗುವುದು ಎಂದು ಪಟ್ಟು ಹಿಡಿದರು. ಬುಧವಾರ ಸಿರವಾರ ಬಂದ್ ನಡೆಸಲಾಗುವುದು ಎಂದು ಪ್ರತಿಭಟನಕಾರರು ತಿಳಿಸಿದರು.

ಮಾಜಿ ಶಾಸಕರಾದ ಗಂಗಾಧರ ನಾಯಕ, ಬಸನಗೌಡ ಬ್ಯಾಗವಾಟ್, ಪ್ರಮುಖರಾದ ಜೆ.ಶರಣಪ್ಪಗೌಡ, ಜಿ.ಲೋಕರೆಡ್ಡಿ, ವಿಜಯಲಕ್ಷ್ಮೀ, ಅನಿತಾ ನವಲಕಲ್, ಹರವಿ ಶಂಕರ ಗೌಡ, ಎನ್.ಆರ್. ಪಾಟೀಲ್, ಜೆ.ದೇವರಾಜಗೌಡ ಪಾಟೀಲ್, ಎನ್.ಉದಯ ಕುಮಾರ ಪಾಟೀಲ್, ಚಾಮರಸ್ ಮಾಲಿಪಾಟೀಲ್, ಉದಯ ಕುಮಾರ ಚಾಗಬಾವಿ, ಜಯಪ್ಪಗೌಡ ಜಕ್ಕಲದಿನ್ನಿ, ಎಚ್. ಕೆ.ಅಮರೇಶ, ಕೊಟ್ರೇಶಪ್ಪ ಕೋರಿ, ಗಣದಿನ್ನಿ ರಾಜಪ್ಪಗೌಡ, ಬಡ್ಡ ಹನುಮಂತ, ದೊರಬಾಬು, ಅರಳಪ್ಪ ಯದ್ದಲದಿನ್ನಿ, ಸವಾರೆಪ್ಪ, ಮಲ್ಲೇಶ ನಾಯಕ ಕಡದಿನ್ನಿ, ಶಿವುಗೇನಿ ಇತರರಿದ್ದರು.

# ತಾಷ್ಕೆಂಟ್‌ಗೆ ಬಂದಿಳಿದ ಪ್ರಧಾನಿ ಮೋದಿ, ಉಜ್ಬೇಕಿಸ್ತಾನ್ ಅಧ್ಯಕ್ಷರಿಂದ ಆತ್ಮೀಯ ಸ್ವಾಗತ

**ನವದೆಹಲಿ, ಆ.29:** ನಾಲ್ಕು ದಿನಗಳ ಮಧ್ಯ ಏಷ್ಯಾ ಪ್ರವಾಸದ ಮೊದಲ ಹಂತದಲ್ಲಿ ಪ್ರಧಾನಿ ನರೇಂದ್ರ ಮೋದಿ ಶನಿವಾರ ತಾಷ್ಕೆಂಟ್‌ಗೆ ಆಗಮಿಸಿದರು, ಉಜ್ಬೇಕಿಸ್ತಾನ್ ಅಧ್ಯಕ್ಷ ಶವ್ಕತ್ ಮಿರ್ಜಿಯೋಯೆವ್ ಅವರಿಂದ ಆತ್ಮೀಯ ಮತ್ತು ವಿಶೇಷ ಸ್ವಾಗತ ಪಡೆದರು, ಅವರು ತಾಷ್ಕೆಂಟ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅವರನ್ನು ವೈಯಕ್ತಿಕವಾಗಿ ಬರಮಾಡಿಕೊಂಡರು. ಅಧ್ಯಕ್ಷ ಮಿರ್ಜಿಯೋಯೆವ್ ಅವರ ಈ ಸೂಚನೆಯು ಭಾರತ ಮತ್ತು ಉಜ್ಬೇಕಿಸ್ತಾನ್ ನಡುವಿನ ಸಂಬಂಧಗಳಲ್ಲಿ ಹೆಚ್ಚುತ್ತಿರುವ ಉಷ್ಣತೆ ಮತ್ತು ಕಾರ್ಯತಂತ್ರದ ಆಳವನ್ನು ಒತ್ತಿಹೇಳುತ್ತದೆ, ಎರಡೂ ದೇಶಗಳು ವ್ಯಾಪಾರ, ಸಂಪರ್ಕ, ರಕ್ಷಣೆ, ಇಂಧನ ಮತ್ತು ಇತರ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸಲು ಪ್ರಯತ್ನಿಸುತ್ತಿವೆ. 2015, 2016 ಮತ್ತು 2022 ರಲ್ಲಿನ ಹಿಂದಿನ ಭೇಟಿಗಳ ನಂತರ ಪ್ರಧಾನಿ ಮೋದಿ ಉಜ್ಬೇಕಿಸ್ತಾನ್‌ಗೆ ನೀಡುತ್ತಿರುವ ನಾಲ್ಕನೇ ಭೇಟಿ ಇದಾಗಿದ್ದು, ಇದು ಕಾರ್ಯತಂತ್ರದ ಮಹತ್ವವುಳ್ಳ ಮಧ್ಯ ಏಷ್ಯಾದ ರಾಷ್ಟ್ರದೊಂದಿಗೆ ವಿಸ್ತರಿಸುವ ಒಪ್ಪಂದಕ್ಕೆ ನವದೆಹಲಿ ನೀಡುವ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ. ತಾಷ್ಕೆಂಟ್‌ಗೆ ಬಂದಿಳಿದ ಕೂಡಲೇ, ಪ್ರಧಾನಿ ಮೋದಿ ಉಜ್ಬೇಕಿಸ್ತಾನ್ ಅಧ್ಯಕ್ಷರಿಗೆ ಸ್ವಾಗತಕ್ಕಾಗಿ ಧನ್ಯವಾದ ಅರ್ಪಿಸಿದರು ಮತ್ತು ಅವರ ಇತ್ತೀಚಿನ ಭೇಟಿಯನ್ನು ದ್ವಿಪಕ್ಷೀಯ ಸಂಬಂಧಗಳಲ್ಲಿನ ಬಲವರ್ಧನೆಯ ಆವೇಗದ ಪ್ರತಿಬಿಂಬ ಎಂದು ಬಣ್ಣಿಸಿದರು. ಇತ್ತೀಚಿನ ವರ್ಷಗಳಲ್ಲಿ ಭಾರತ ಮತ್ತು ಉಜ್ಬೇಕಿಸ್ತಾನ್ ತಮ್ಮ ಸಂಬಂಧವನ್ನು ಗಮನಾರ್ಹವಾಗಿ ವಿಸ್ತರಿಸಿದ್ದು, ಸಹಕಾರವು ಕಾರ್ಯತಂತ್ರ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿಸ್ತರಿಸಿದೆ. ಎರಡೂ ದೇಶಗಳು ವ್ಯಾಪಾರ ಮತ್ತು ಹೂಡಿಕೆ, ರಕ್ಷಣೆ ಮತ್ತು ಭದ್ರತೆ, ಸಂಪರ್ಕ, ಇಂಧನ ಮತ್ತು ಜನರಿಂದ ಜನರ ನಡುವಿನ ಸಂಬಂಧಗಳಿಗೆ ಹೆಚ್ಚಿನ ಒತ್ತು ನೀಡಿವೆ. ಆಗಸ್ಟ್ 29 ರಿಂದ 30 ರವರೆಗೆ ಉಜ್ಬೇಕಿಸ್ತಾನ್‌ಗೆ ತಮ್ಮ ಎರಡು ದಿನಗಳ ರಾಜ್ಯ ಭೇಟಿಯ ಸಂದರ್ಭದಲ್ಲಿ, ಪ್ರಧಾನಿ ಮೋದಿ ಅವರು ಅಧ್ಯಕ್ಷ ಮಿರ್ಜಿಯೋಯೆವ್ ಅವರೊಂದಿಗೆ



ವ್ಯಾಪಕ ಶ್ರೇಣಿಯ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲಿದ್ದಾರೆ. ನಾಯಕರು ದ್ವಿಪಕ್ಷೀಯ ಸಹಕಾರದ ಸಂಪೂರ್ಣ ವರ್ಣಪಟಲವನ್ನು ಪರಿಶೀಲಿಸುವ ಮತ್ತು ಸಹಯೋಗಕ್ಕಾಗಿ ಹೊಸ ಮಾರ್ಗಗಳನ್ನು ಅನ್ವೇಷಿಸುವ ನಿರೀಕ್ಷೆಯಿದೆ. ಚರ್ಚೆಗಳ ಪ್ರಮುಖ ಗಮನವು ಭಾರತದ ವಿಕಸಿತ ಭಾರತ 2047 ದೃಷ್ಟಿಕೋನವನ್ನು ಉಜ್ಬೇಕಿಸ್ತಾನ್ನ ಉಜ್ಬೇಕಿಸ್ತಾನ್–2030 ಅಭಿವೃದ್ಧಿ ಕಾರ್ಯತಂತ್ರದೊಂದಿಗೆ ಜೋಡಿಸುವ ಪ್ರಯತ್ನಗಳಾಗಿರುತ್ತದೆ, ಇದು ಎರಡೂ ದೇಶಗಳ ಆಯಾ ರಾಷ್ಟ್ರೀಯ ಅಭಿವೃದ್ಧಿ ಆದ್ಯತೆಗಳ ಸುತ್ತ ದೀರ್ಘಕಾಲೀನ ಪಾಲುದಾರಿಕೆಯನ್ನು ನಿರ್ಮಿಸುವ ಆಸಕ್ತಿಯನ್ನು ಪ್ರತಿಬಿಂಬಿಸುತ್ತದೆ. ಮಾತುಕತೆಗಳು ವ್ಯಾಪಾರ ಮತ್ತು ಹೂಡಿಕೆ, ರಕ್ಷಣಾ ಸಹಕಾರ, ಡಿಜಿಟಲ್ ಸಂಪರ್ಕ, ನಿರ್ಣಾಯಕ ಖನಿಜಗಳು, ಇಂಧನ, ಶಿಕ್ಷಣ ಮತ್ತು ಆರೋಗ್ಯವನ್ನು ಒಳಗೊಳ್ಳುವ ನಿರೀಕ್ಷೆಯಿದೆ. ಎರಡೂ ಕಡೆಯವರು ಆರ್ಥಿಕ ಸಂಪರ್ಕಗಳನ್ನು ಬಲಪಡಿಸುವ ಮತ್ತು ಭಾರತ ಮತ್ತು ಮಧ್ಯ ಏಷ್ಯಾ ನಡುವಿನ ಸಂಪರ್ಕವನ್ನು ಸುಧಾರಿಸುವ ಮಾರ್ಗಗಳನ್ನು ಅನ್ವೇಷಿಸುವ ಸಾಧ್ಯತೆಯಿದೆ. ಉಜ್ಬೇಕಿಸ್ತಾನ್‌ನಲ್ಲಿ ತಮ್ಮ ಕಾರ್ಯಕ್ರಮಗಳನ್ನು ಮುಗಿಸಿದ ನಂತರ, ಪ್ರಧಾನಿ ಮೋದಿ ಅವರು ತಮ್ಮ ಮಧ್ಯ ಏಷ್ಯಾ ಪ್ರವಾಸದ ಎರಡನೇ ಹಂತಕ್ಕಾಗಿ ಕಿರ್ಗಿಜ್ ಗಣರಾಜ್ಯದ ಬಿಷ್ಕೆಕ್ಗೆ ಪ್ರಯಾಣಿಸಲಿದ್ದಾರೆ. ಅವರು ಆಗಸ್ಟ್ 31 ರಿಂದ ಸೆಪ್ಟೆಂಬರ್ 1 ರವರೆಗೆ 26 ನೇ ಶಾಂಘೈ ಸಹಕಾರ ಸಂಸ್ಥೆ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಎಸ್ಸಿಒ ಶೃಂಗಸಭೆಯಲ್ಲಿ, ಪ್ರಧಾನಿ ಮೋದಿ ಪ್ರಾದೇಶಿಕ ಭದ್ರತೆ, ಸಂಪರ್ಕ ಮತ್ತು ಆರ್ಥಿಕ ಅವಕಾಶಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಗಮನಹರಿಸುವ ನಿರೀಕ್ಷೆಯಿದೆ. ಯುರೇಷಿಯನ್ ಪ್ರದೇಶ ಎದುರಿಸುತ್ತಿರುವ ವಿಶಾಲ ಭೌಗೋಳಿಕ ಮತ್ತು ಭದ್ರತಾ ಸವಾಲುಗಳ ಕುರಿತು ಚರ್ಚಿಸಲು ಭಾಗವಹಿಸುವ ದೇಶಗಳಿಗೆ ಈ ಸಭೆ ಅವಕಾಶವನ್ನು ಒದಗಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಂತಹ ಪ್ರಮುಖ ಪ್ರಾದೇಶಿಕ ಮತ್ತು ಜಾಗತಿಕ ನಾಯಕರೊಂದಿಗೆ ಶೃಂಗಸಭೆಯ ಹೊರತಾಗಿ ಪ್ರಧಾನಿ ಮೋದಿ ಹಲವಾರು ದ್ವಿಪಕ್ಷೀಯ ಸಭೆಗಳನ್ನು ನಡೆಸುವ ಸಾಧ್ಯತೆಯಿದೆ. ನಾಲ್ಕು ದಿನಗಳ ಪ್ರವಾಸವು ಭಾರತವು ಮಧ್ಯ ಏಷ್ಯಾದೊಂದಿಗೆ ತನ್ನ ರಾಜತಾಂತ್ರಿಕ ಮತ್ತು ಕಾರ್ಯತಂತ್ರ ಹೆಚ್ಚಿಸುತ್ತಿರುವಾಗ ಬರುತ್ತದೆ, ಈ ಪ್ರದೇಶವು ತನ್ನ ಸ್ಥಳ, ಸಂಪನ್ಮೂಲಗಳು ಮತ್ತು ಪ್ರಾದೇಶಿಕ ಸಂಪರ್ಕದಲ್ಲಿನ ಪಾತ್ರದಿಂದಾಗಿ ಬೆಳೆಯುತ್ತಿರುವ ಭೌಗೋಳಿಕ ರಾಜಕೀಯ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

## ಜಂಟಿ ರಕ್ಷಣಾ ಒಪ್ಪಂದಕ್ಕೆ ಪಾಕಿಸ್ತಾನ–ಕುವೈತ್ ಸಹಿ

**ಇಸ್ಲಾಮಾಬಾದ್,ಆ.28:** ಯುಎಸ್–ಇರಾನ್ ಯುದ್ಧದ ಪರಿಣಾಮಗಳನ್ನು ಗಲ್ಫ್ ಪ್ರದೇಶವು ಎದುರಿಸುತ್ತಿರುವಂತೆಯೇ, ಪಾಕಿಸ್ತಾನ ಮತ್ತು ಕುವೈತ್ ಹೊಸ ರಕ್ಷಣಾ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿವೆ. ಇದು ಗಲ್ಫ್ ಪ್ರದೇಶದಲ್ಲಿ ಇಸ್ಲಾಮಾಬಾದ್ನ ಮಿಲಿಟರಿ ಉಪಸ್ಥಿತಿಯ ವಿಸ್ತರಣೆಯನ್ನು ಸೂಚಿಸುತ್ತದೆ. ಕುವೈತ್ ರಕ್ಷಣಾ ಸಚಿವ ಶೇಖ್ ಅಬ್ದುಲ್ಲಾ ಅಲಿ ಅಬ್ದುಲ್ಲಾ ಅಲ್–ಸೇಲಂ ಅಲ್–ಸಬಾಹ್ ಅವರ ಇಸ್ಲಾಮಾಬಾದ್ ಭೇಟಿಯ ಸಮಯದಲ್ಲಿ ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಮುಹಮ್ಮದ್ ಆಸಿಫ್ ಅವರೊಂದಿಗೆ "ಶಿಷ್ಟಾಚಾರ ಒಪ್ಪಂದ–2026" ಗೆ ಸಹಿ ಹಾಕಲಾಯಿತು.



ಕುವೈತ್‌ನ ರಕ್ಷಣಾ ಸಚಿವಾಲಯವು ಈ ಒಪ್ಪಂದವನ್ನು ದ್ವಿಪಕ್ಷೀಯ ರಕ್ಷಣಾ ಸಹಕಾರದಲ್ಲಿ ಒಂದು "ಪ್ರಮುಖ ಮೈಲಿಗಲ್ಲು" ಎಂದು ಕರೆದಿದ್ದು, ಇದು ಎರಡೂ ರಾಷ್ಟ್ರಗಳ ಹಂಚಿಕೆಯ ಹಿತಾಸಕ್ತಿಗಳನ್ನು ಮುನ್ನಡೆಸುತ್ತದೆ ಮತ್ತು ಪ್ರಾದೇಶಿಕ ಭದ್ರತೆಗೆ ಕೊಡುಗೆ ನೀಡುತ್ತದೆ ಎಂದು ಹೇಳಿದೆ. ಈ ರಕ್ಷಣಾ ಒಪ್ಪಂದವು ಹಿಂದೆ ಹೆಚ್ಚಾಗಿ ಹಂಗಾಮಿ ರೂಪದಲ್ಲಿದ್ದ ಮಿಲಿಟರಿ ಸಹಕಾರಕ್ಕೆ ಅಧಿಕೃತ ಚೌಕಟ್ಟನ್ನು ನೀಡುತ್ತದೆ. ಅಲ್ಲದೆ, ಎರಡೂ ಸಶಸ್ತ್ರ ಪಡೆಗಳ ನಡುವೆ ನಿಕಟ ಸಮನ್ವಯವನ್ನು ಒದಗಿಸುತ್ತದೆ ಮತ್ತು ಪರಿಣತಿಯ ವಿನಿಮಯ ಹಾಗೂ ಹೆಚ್ಚಿನ ಮಿಲಿಟರಿ ಸಂಯೋಜನೆಗೆ ಅನುಕೂಲ ಮಾಡಿಕೊಡುತ್ತದೆ. ಈ ಒಪ್ಪಂದದಡಿಯಲ್ಲಿ, ಇಸ್ಲಾಮಾಬಾದ್ ಮತ್ತು ಕುವೈತ್ ಸಿಟಿ ಜಂಟಿ ಮಿಲಿಟರಿ ತರಬೇತಿ ಮತ್ತು ಶಿಕ್ಷಣ, ಗುಪ್ತಚರ ಮಾಹಿತಿ ವಿನಿಮಯ (ಇಂಟೆಲಿಜೆನ್ಸ್ ಶೇರಿಂಗ್), ಸಾಗಣೆ (ಲಾಜಿಸ್ಟಿಕ್ಸ್), ರಕ್ಷಣಾ ತಂತ್ರಜ್ಞಾನ, ಸಂಶೋಧನೆ, ಎಲೆಕ್ಟ್ರಾನಿಕ್ ಸಂಪರ್ಕ ವ್ಯವಸ್ಥೆಗಳು ಮತ್ತು ಮಿಲಿಟರಿ ಪರಿಣತಿಯ ವಿನಿಮಯದಲ್ಲಿ ಸಹಕರಿಸಲಿವೆ. ಪಾಕಿಸ್ತಾನದ ಸಶಸ್ತ್ರ ಪಡೆಗಳು ಕುವೈತ್ಗೆ ಸಿಬ್ಬಂದಿ ತರಬೇತಿ, ಗಡಿ ನಿರ್ವಹಣೆ ಮತ್ತು ರಕ್ಷಣಾ ಸಹಕಾರದ ಇತರ ಕ್ಷೇತ್ರಗಳಲ್ಲಿ ಸಹಾಯ ಮಾಡಲಿವೆ. ಈ ಒಪ್ಪಂದವು ಮಿಲಿಟರಿ ಉತ್ಪಾದನೆ ಮತ್ತು ರಕ್ಷಣಾ ತಂತ್ರಜ್ಞಾನಗಳ ಅಭಿವೃದ್ಧಿಗೆ ಸಂಬಂಧಿಸಿದ ನಿಬಂಧನೆಗಳನ್ನು ಒಳಗೊಂಡಿದೆ. ಜೊತೆಗೆ ನಿಯಮಿತ ಜಂಟಿ ಕವಾಯತುಗಳು, ದ್ವಿಪಕ್ಷೀಯ ಭೇಟಿಗಳು ಮತ್ತು ಮಿಲಿಟರಿ ವಿನಿಮಯಗಳು ಸಹ ನಡೆಯಲಿವೆ. ಈ ಒಪ್ಪಂದವು ಐದು ವರ್ಷಗಳ ಕಾಲ ಜಾರಿಯಲ್ಲಿರುತ್ತದೆ ಮತ್ತು ಯಾವುದೇ ದೇಶವು ಅಧಿಕೃತವಾಗಿ ಹಿಂತೆಗೆದುಕೊಳ್ಳಲು ನಿರ್ಧರಿಸದಿದ್ದರೆ ಸ್ವಯಂಚಾಲಿತವಾಗಿ ನವೀಕರಣಗೊಳ್ಳುತ್ತದೆ.

ಈ ಒಪ್ಪಂದದ ಸಮಯವು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಏಕೆಂದರೆ ನಡೆಯುತ್ತಿರುವ ಅಮೆರಿಕ –ಇರಾನ್ ಯುದ್ಧದಿಂದ ಉಂಟಾಗುವ ಭದ್ರತಾ ಮತ್ತು ಆರ್ಥಿಕ ಒತ್ತಡದ ತೀವ್ರತೆಯನ್ನು ಕುವೈತ್ ಎದುರಿಸುತ್ತಿದೆ. ಇರಾನ್ ಗಲ್ಫ್ ದೇಶಗಳಲ್ಲಿನ ಇಂಧನ ಸ್ಥಾವರಗಳು ಮತ್ತು ಉಪ್ಪು ನೀರನ್ನು ಸಿಹಿ ನೀರಾಗಿಸುವ (ಡೆಸಾಲಿನೇಷನ್) ಸೌಲಭ್ಯಗಳು ಸೇರಿದಂತೆ ಮೂಲಸೌಕರ್ಯಗಳನ್ನು ಮತ್ತು ಯುಎಸ್ ಪಡೆಗಳನ್ನು ಹೊಂದಿರುವ ಸ್ಥಳಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದೆ. ಈ ಹೊಸ ರಕ್ಷಣಾ ಚೌಕಟ್ಟು ಕುವೈತ್‌ಗೆ ಪಾಕಿಸ್ತಾನದೊಂದಿಗೆ ಮಿಲಿಟರಿ ಸಹಕಾರವನ್ನು ಆಳವಾಗಿಸಲು ಅವಕಾಶವನ್ನು ನೀಡುತ್ತದೆ. ಪಾಕಿಸ್ತಾನವು ಇಸ್ಲಾಮಿಕ್ ಜಗತ್ತಿನಲ್ಲಿ ಏಕೈಕ ಅಣ್ವಸ್ತ್ರ ಹೊಂದಿರುವ ದೇಶವಾಗಿರುವುದರಿಂದ ವಿಶಿಷ್ಟ ಸ್ಥಾನವನ್ನು ಹೊಂದಿದೆ.

ಪಾಕಿಸ್ತಾನವು ದೀರ್ಘಕಾಲದಿಂದ ಬಹ್ರೇನ್ ಮತ್ತು ಕತಾರ್‌ನೊಂದಿಗೆ ಬಲವಾದ ಮಿಲಿಟರಿ ಸಂಬಂಧಗಳನ್ನು ಕಾಯ್ದುಕೊಂಡಿದೆ. ಆದರೆ ಯುಎಇ, ಒಮಾನ್ ಮತ್ತು ಕುವೈತ್ನೊಂದಿಗಿನ ರಕ್ಷಣಾ ಸಹಕಾರವು ಹಿಂದಿನ ವರ್ಷಗಳಲ್ಲಿ ಕ್ಷೀಣಿಸಿತ್ತು. ಆದರೆ, ಇರಾನ್ ಯುದ್ಧ ಪ್ರಾರಂಭವಾದಂದಿನಿಂದ ಜರುಗಿದ ಬೆಳವಣಿಗೆಗಳು ಈ ಸಂಬಂಧಗಳು ಮತ್ತೊಮ್ಮೆ ಆಯಕಟ್ಟಿನ ದೃಷ್ಟಿಯಿಂದ (ಸ್ಟ್ರಾಟೆಜಿಕ್) ಪ್ರಮುಖವಾಗುತ್ತಿರುವುದನ್ನು ಸೂಚಿಸುತ್ತವೆ.

## ಹಿಜ್ಬುಲ್ಲಾ ಮುಖ್ಯಸ್ಥರಿಂದ ಇಸ್ರೇಲ್–ಲೆಬನಾನ್ ಒಪ್ಪಂದಕ್ಕೆ ಮತ್ತೆ ತಿರಸ್ಕಾರ

**ಬೈರುತ್, ಆ.29:** ಹಿಜ್ಬುಲ್ಲಾ ಮುಖ್ಯಸ್ಥ ನಯೀಮ್ ಖಾಸಿಮ್ ಅವರು ಶುಕ್ರವಾರ ಇಸ್ರೇಲ್ ಮತ್ತು ಲೆಬನಾನ್ ನಡುವಿನ ಚೌಕಟ್ಟಿನ ಒಪ್ಪಂದವನ್ನು ಮತ್ತೊಮ್ಮೆ ತಿರಸ್ಕರಿಸಿದ್ದಾರೆ. ಇಸ್ರೇಲ್ನೊಂದಿಗಿನ ಇತ್ತೀಚಿನ ಯುದ್ಧ ಪ್ರಾರಂಭವಾಗಿ ಸುಮಾರು ಆರು ತಿಂಗಳ ನಂತರ, ಇರಾನ್ ಬೆಂಬಲಿತ ಈ ಸಶಸ್ತ್ರ ಪಡೆ ಶರಣಾಗುವುದಿಲ್ಲ ಅಥವಾ ತನ್ನ ಶಸ್ತ್ರಾಸ್ತ್ರಗಳನ್ನು ತ್ಯಜಿಸುವ ಯಾವುದೇ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಅವರು ಹೇಳಿದ್ದಾರೆ. ಹಿಜ್ಬುಲ್ಲಾದ ಅಲ್–ಮನ್ನಾರ್ ದೂರದರ್ಶನದಲ್ಲಿ ಚಿತ್ರಗೊಂಡ ಟಿವಿ ಭಾಷಣದಲ್ಲಿ ಖಾಸಿಮ್, "ನಾವು ಈ ಚೌಕಟ್ಟಿನ ಒಪ್ಪಂದಕ್ಕೆ ವಿರುದ್ಧವಾಗಿದ್ದೇವೆ ಮತ್ತು ಇದರ ಪತನಕ್ಕೆ ಕರೆ ನೀಡುತ್ತೇವೆ" ಎಂದು ಹೇಳಿದರು. ಮಾರ್ಚ್ 2 ರಂದು ಹಿಜ್ಬುಲ್ಲಾ ಇಸ್ರೇಲ್ ಮೇಲೆ ದಾಳಿ ಮಾಡಿ ಲೆಬನಾನ್ ಅನ್ನು ಇರಾನ್ ಯುದ್ಧಕ್ಕೆ ಎಳೆದ ನಂತರ, ಇಸ್ರೇಲ್ ಮತ್ತು ಲೆಬನಾನ್ ಅಮೆರಿಕದ ಮಧ್ಯಸ್ಥಿಕೆಯಲ್ಲಿ ನೇರ ಮಾತುಕತೆಗಳನ್ನು ಪ್ರಾರಂಭಿಸಿದವು. ಇಸ್ರೇಲ್ ಸೇನೆಯು ತೀವ್ರ ವೈಮಾನಿಕ ದಾಳಿಗಳು ಮತ್ತು ಭೂಸೇನಾ ದಾಳಿಯ ಮೂಲಕ ಪ್ರತ್ಯುತ್ತರ ನೀಡಿದ್ದು, ಇದರಲ್ಲಿ 4,300 ಕ್ಕೂ ಹೆಚ್ಚು ಜನರು ಟ್ಟಿದ್ದಾರೆ ಎಂದು ಲೆಬನಾನ್ ಅಧಿಕಾರಿಗಳು ತಿಳಿಸಿದ್ದಾರೆ. ಜೂನ್



ಕೊನೆಯಲ್ಲಿ ನಡೆದ ಮಾತುಕತೆಗಳ ಸಮಯದಲ್ಲಿ, ಇಸ್ರೇಲ್ ಮತ್ತು ಲೆಬನಾನ್ ಚೌಕಟ್ಟಿನ ಒಪ್ಪಂದಕ್ಕೆ ಸಹಿ ಹಾಕಿದ್ದವು. ಇದು ಹಿಜ್ಬುಲ್ಲಾ ತನ್ನ ಶಸ್ತ್ರಾಸ್ತ್ರಗಳನ್ನು ತ್ಯಜಿಸುವುದು, ದಕ್ಷಿಣ ಲೆಬನಾನ್ನಿಂದ ಇಸ್ರೇಲಿ ಪಡೆಗಳು ಹಂತ ಹಂತವಾಗಿ ಹಿಂತೆಗೆದುಕೊಳ್ಳುವುದು ಮತ್ತು ಆರಂಭದಲ್ಲಿ ನಿರ್ದಿಷ್ಟಪಡಿಸಿದ "ಪೈಲಟ್ ವಲಯಗಳ" ಮೂಲಕ ಲೆಬನಾನ್ ಸೇನೆಯನ್ನು ಆ ಪ್ರದೇಶದಲ್ಲಿ ನಿಯೋಜಿಸುವುದನ್ನು ಒಳಗೊಂಡಿತ್ತು.

ಖಾಸಿಮ್ ಈ ವ್ಯವಸ್ಥೆಯನ್ನು ಕಾನೂನುಬಾಹಿರ ಮತ್ತು ಲೆಬನಾನ್ನ ಸಾರ್ವಭೌಮತ್ವಕ್ಕೆ ಧಕ್ಕೆ ತರುವಂತಹದ್ದು ಎಂದು ತಿರಸ್ಕರಿಸಿದರು.

"ಈ ಚೌಕಟ್ಟಿನ ಒಪ್ಪಂದವು ಕಾನೂನುಬಾಹಿರ, ಅಕ್ರಮ, ಅವಮಾನಕರ ಮತ್ತು ಲೆಬನಾನ್ ಸಾರ್ವಭೌಮತ್ವಕ್ಕೆ ವಿನಾಶಕಾರಿ" ಎಂದು ಅವರು ಹೇಳಿದರು. "ನಾವು 'ಪೈಲಟ್ ವಲಯಗಳಿಗೆ' ಅಥವಾ ಅವುಗಳಿಂದ ಬರುವ ಯಾವುದೇ ವಿಷಯಕ್ಕೆ ಒಪ್ಪುವುದಿಲ್ಲ" ಎಂದು ಅವರು ತಿಳಿಸಿದರು. ಜೂನ್‌ನಲ್ಲಿ ಒಪ್ಪಂದಕ್ಕೆ ಬಂದ ನಂತರ ಯುದ್ಧದ ತೀವ್ರತೆ ಕಡಿಮೆಯಾಗಿದ್ದರೂ, ದಕ್ಷಿಣ ಲೆಬನಾನ್ನ ನಗರಗಳು ಮತ್ತು ಹಳ್ಳಿಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ, ಫಿರಂಗಿ ದಾಳಿ ಮತ್ತು ನಾಗರಿಕ ರಚನೆಗಳ ವ್ಯಾಪಕ ಧ್ವಂಸವನ್ನು ಮುಂದುವರಿಸಿದೆ ಎಂದು ಲೆಬನಾನ್ ಅಧಿಕಾರಿಗಳು ವರದಿ ಮಾಡುತ್ತಿದ್ದಾರೆ. ಇಸ್ರೇಲಿ ಪಡೆಗಳು ಗಡಿಯುದ್ದಕ್ಕೂ ಲೆಬನಾನ್ ಭೂಪ್ರದೇಶದೊಳಗೆ ಸುಮಾರು ಆರು ಮೈಲಿಗಳಷ್ಟು ವಿಸ್ತರಿಸಿರುವ ಸ್ವಯಂ–ಘೋಷಿತ "ಸುರಕ್ಷತಾ ವಲಯ" ದಲ್ಲಿ ಕಾರ್ಯಾಚರಣೆಯನ್ನು ಮುಂದುವರಿಸಿವೆ. ಇಸ್ರೇಲ್‌ನೊಂದಿಗಿನ ಹಿಂದಿನ ಸಂಘರ್ಷವನ್ನು ಕೊನೆಗೊಳಿಸುವ ಉದ್ದೇಶದಿಂದ ನವೆಂಬರ್ 2024ರ ಕದನ ವಿರಾಮದ ಅನುಷ್ಠಾನವನ್ನು ಹಿಜ್ಬುಲ್ಲಾ ಬೆಂಬಲಿಸುತ್ತದೆ ಎಂದು ಖಾಸಿಮ್ ಹೇಳಿದರು, ಆದರೆ ಇತ್ತೀಚಿನ ಚೌಕಟ್ಟಿನ ಮೂಲಕ ಹೊಸ ಷರತ್ತುಗಳನ್ನು ಹೇರುವ ಪ್ರಯತ್ನಗಳನ್ನು ಅವರು ತಿರಸ್ಕರಿಸಿದರು.

"ನಾವು ನಮ್ಮ ತಲೆಯನ್ನು ಎತ್ತಿ ಹಿಡಿಯುತ್ತೇವೆ ಮತ್ತು ನಾವು ಶರಣಾಗುವುದಿಲ್ಲ" ಎಂದು ಅವರು ಹೇಳಿದರು.

## ವೆನೆಜುವೆಲಾದ 65 ಶತಕೋಟಿ ಬ್ಯಾರಲ್ ತೈಲ ನಿಕ್ಷೇಪಗಳ ಮೇಲೆ ಅಮೆರಿಕದ ನಿಯಂತ್ರಣ: ಟ್ರಂಪ್ ಘೋಷಣೆ

**ವಾಷಿಂಗ್ಟನ್, ಆ.29:** ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ವೆನೆಜುವೆಲಾದೊಂದಿಗೆ ಅಮೆರಿಕವು ಒಪ್ಪಂದಕ್ಕೆ ಬಂದಿದ್ದು, ದೇಶದ ಸಾಬೀತಾಗಿರುವ ತೈಲ ನಿಕ್ಷೇಪಗಳಲ್ಲಿ 65 ಶತಕೋಟಿ ಬ್ಯಾರಲ್‌ಗಳಿಗಿಂತ ಹೆಚ್ಚಿನ ಮೇಲೆ ಬಹುಮತದ ನಿಯಂತ್ರಣವನ್ನು ನೀಡಿದೆ ಎಂದು ಹೇಳಿದರು, ಇದನ್ನು ಅವರು "ವಿಶ್ವ ಇತಿಹಾಸದಲ್ಲಿ ಅತಿದೊಡ್ಡ ತೈಲ ಒಪ್ಪಂದ" ಎಂದು ಬಣ್ಣಿಸಿದರು. ಖಾಸಗಿ ವ್ಯವಹಾರದೊಂದಿಗಿನ ಪಾಲುದಾರಿಕೆಯ ಮೂಲಕ ಈ ಒಪ್ಪಂದವನ್ನು ತಲುಪಲಾಗಿದೆ ಮತ್ತು ಇದು ಅಮೆರಿಕದ ತೆರಿಗೆದಾರರಿಗೆ ಯಾವುದೇ ವೆಚ್ಚವನ್ನುಂಟು ಮಾಡುವುದಿಲ್ಲ ಎಂದು ಟ್ರಂಪ್ ಹೇಳಿದರು. ಈ ಒಪ್ಪಂದವು ಅಮೆರಿಕದ ತೈಲ ನಿಕ್ಷೇಪಗಳನ್ನು ದ್ವಿಗುಣಗೊಳಿಸುತ್ತದೆ, ಸರಬರಾಜುಗಳನ್ನು ಹೆಚ್ಚಿಸುತ್ತದೆ ಮತ್ತು ಅಂತಿಮವಾಗಿ ಪೆಟ್ರೋಲ್ ಬೆಲೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು. "ವಿಶ್ವ ಇತಿಹಾಸದಲ್ಲಿ ಅತಿದೊಡ್ಡ ತೈಲ ಒಪ್ಪಂದ!" ಟ್ರಂಪ್ ಟ್ರೂತ್ ಸೋಷಿಯಲ್‌ನಲ್ಲಿ ತಿಳಿಸಿದ್ದಾರೆ. ವೆನೆಜುವೆಲಾದ ಮಧ್ಯಂತರ ಅಧ್ಯಕ್ಷ ಡೆಲ್ಸಿ ರೊಡ್ರಿಗಸ್ ಸುಮಾರು 65 ಶತಕೋಟಿ ಬ್ಯಾರಲ್‌ಗಳಷ್ಟು ಸಾಬೀತಾದ ನಿಕ್ಷೇಪಗಳನ್ನು ಹೊಂದಿರುವ ತೈಲ ನಿಕ್ಷೇಪಗಳನ್ನು ನಿರ್ವಹಿಸಲು ಖಾಸಗಿ ಜಂಟಿ ಉದ್ಯಮಕ್ಕೆ 100 ವರ್ಷಗಳ ರಿಯಾಯಿತಿಯನ್ನು ನೀಡಿದ್ದರು. ಖಾಸಗಿ ಆಪರೇಟರ್‌ನ ಗುರುತನ್ನು ತಕ್ಷಣವೇ ಬಹಿರಂಗಪಡಿಸಲಾಗಿಲ್ಲ. ವರದಿಗಳ ಪ್ರಕಾರ, ಯುಎಸ್ ಮೂಲದ ಚೆವ್ರಾನ್, ಸ್ಪೇನ್‌ನ ರೆಪ್ಸೋಲ್ ಮತ್ತು ಇಟಲಿಯ ಎನಿ ಸೇರಿದಂತೆ ಸಣ್ಣ ಸಂಖ್ಯೆಯ ವಿದೇಶಿ ಇಂಧನ ಕಂಪನಿಗಳು ವೆನೆಜುವೆಲಾದಲ್ಲಿ ಕಾರ್ಯನಿರ್ವಹಿಸುತ್ತಲೇ ಇವೆ. ಈ ಒಪ್ಪಂದವು ಸುಮಾರು $100 ಶತಕೋಟಿ ಖಾಸಗಿ ಹೂಡಿಕೆಯನ್ನು ತರುತ್ತದೆ, ಸಾವಿರಾರು ಹೆಚ್ಚಿನ ಸಂಬಳದ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಮತ್ತು ವೆನೆಜುವೆಲಾದ ಆರ್ಥಿಕತೆಯ ಪುನರ್ನಿರ್ಮಾಣವನ್ನು ಬೆಂಬಲಿಸುತ್ತದೆ ಎಂದು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಹೇಳಿದರು. "ವೆನೆಜುವೆಲಾದ ಜನರಿಗೆ, ಈ ಒಪ್ಪಂದವು 100 ಶತಕೋಟಿ ಡಾಲರ್ ಖಾಸಗಿ ಹೂಡಿಕೆಯನ್ನು ತರುತ್ತದೆ, ಸಾವಿರಾರು ಹೆಚ್ಚಿನ ಸಂಬಳದ ಉದ್ಯೋಗಗಳನ್ನು ಬೆಂಬಲಿಸುತ್ತದೆ ಮತ್ತು ವೆನೆಜುವೆಲಾದ ಆರ್ಥಿಕತೆಯ ಪುನರ್ನಿರ್ಮಾಣಕ್ಕೆ ಚಾಲನೆ ನೀಡುತ್ತದೆ" ಎಂದು ಟ್ರಂಪ್ ಘೋಷಣೆಯ ಸ್ವಲ್ಪ ಸಮಯದ ನಂತರ ರೂಬಿಯೊ ಹೇಳಿದರು.



ವರ್ಷದ ಆರಂಭದಲ್ಲಿ, ಅಮೆರಿಕ ವೆನೆಜುವೆಲಾದ ನಿಕೋಲಸ್ ಮಡುರೊ ಅವರನ್ನು ದೊಡ್ಡ ಪ್ರಮಾಣದ ಮಿಲಿಟರಿ ಕಾರ್ಯಾಚರಣೆಯಲ್ಲಿ ವಶಪಡಿಸಿಕೊಂಡಿತು, ನಾಯಕ ಮತ್ತು ಅವರ ಪತ್ನಿಯನ್ನು ಕ್ರಿಮಿನಲ್ ಆರೋಪಗಳನ್ನು ಎದುರಿಸಲು ನ್ಯೂಯಾರ್ಕ್ಗೆ ಕರೆತಂದಿತು. ಮಿಲಿಟರಿ ಕಾರ್ಯಾಚರಣೆಯ ನಂತರ, ಅಮೆರಿಕನ್ ಕಂಪನಿಗಳು ವೆನೆಜುವೆಲಾದ ತೈಲ ಉದ್ಯಮವನ್ನು ಪುನರ್ನಿರ್ಮಿಸಲು ಕೆಲಸ ಮಾಡುತ್ತವೆ ಎಂದು ಟ್ರಂಪ್ ಹೇಳಿದರು. ರೋಡ್ರಿಗಸ್ ಒಪ್ಪಂದವನ್ನು ದೃಢಪಡಿಸಿದರು, ಇದು ವೆನೆಜುವೆಲಾದ ಆರ್ಥಿಕ ಚೇತರಿಕೆಗೆ ಕೊಡುಗೆ ನೀಡುವ "ಐತಿಹಾಸಿಕ" ಒಪ್ಪಂದ ಎಂದು ವಿವರಿಸಿದರು. ಈ ವ್ಯವಸ್ಥೆಯು ವೆನೆಜುವೆಲಾದ ಸರ್ಕಾರಕ್ಕೆ $209 ಶತಕೋಟಿಗಿಂತ ಹೆಚ್ಚಿನ ತೆರಿಗೆ ಆದಾಯವನ್ನು ಗಳಿಸಬಹುದು ಎಂದು ಅವರು ಹೇಳಿದರು.

ಈ ಒಪ್ಪಂದವು ವೆನೆಜುವೆಲಾದ ತೈಲ ಉದ್ಯಮವನ್ನು ಪುನರುಜ್ಜೀವನಗೊಳಿಸಲು ಮತ್ತು ವರ್ಷಗಳ ನಿರ್ಬಂಧಗಳು, ಕಡಿಮೆ ಹೂಡಿಕೆ ಮತ್ತು ಹದಗೆಡುತ್ತಿರುವ ಮೂಲಸೌಕರ್ಯದ ನಂತರ ವಿದೇಶಿ ಹೂಡಿಕೆಯನ್ನು ಆಕರ್ಷಿಸಲು ಟ್ರಂಪ್ ಆಡಳಿತದ ವಿಶಾಲ ಪ್ರಯತ್ನದ ಭಾಗವಾಗಿದೆ. ಯುಎಸ್ ಇಂಧನ ಮಾಹಿತಿ ಆಡಳಿತದ ಪ್ರಕಾರ, ವೆನೆಜುವೆಲಾ ವಿಶ್ವದ ಅತಿದೊಡ್ಡ ಸಾಬೀತಾಗಿರುವ ಕಚ್ಚಾ ತೈಲ ನಿಕ್ಷೇಪಗಳನ್ನು ಹೊಂದಿದೆ, ಇದು 300 ಶತಕೋಟಿ ಬ್ಯಾರೆಲ್ಗಳಿಗಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ. ಅಮೆರಿಕ 50 ಶತಕೋಟಿ ಬ್ಯಾರಲ್‌ಗಳಿಗಿಂತ ಕಡಿಮೆ ಸಾಬೀತಾಗಿರುವ ನಿಕ್ಷೇಪಗಳನ್ನು ಹೊಂದಿದೆ. ಅದರ ಅಪಾರ ನಿಕ್ಷೇಪಗಳ ಹೊರತಾಗಿಯೂ, ವೆನೆಜುವೆಲಾ ಜಾಗತಿಕ ತೈಲ ಉತ್ಪಾದನೆಯಲ್ಲಿ ಕೇವಲ ಒಂದು ಸಣ್ಣ ಪಾಲನ್ನು ಮಾತ್ರ ಉತ್ಪಾದಿಸುತ್ತದೆ. ವರ್ಷಗಳ ಕಡಿಮೆ ಹೂಡಿಕೆ, ಹಾನಿಗೊಳಗಾದ ಮೂಲಸೌಕರ್ಯ, ನಿರ್ಬಂಧಗಳು ಮತ್ತು ಪ್ರಮುಖ ಅಂತರರಾಷ್ಟ್ರೀಯ ತೈಲ ಕಂಪನಿಗಳ ನಿರ್ಗಮನವು ಉತ್ಪಾದನಾ ಸಾಮರ್ಥ್ಯವನ್ನು ತೀವ್ರವಾಗಿ ಕಡಿಮೆ ಮಾಡಿದೆ. ಮಾಜಿ ಅಧ್ಯಕ್ಷ ಹ್ಯೂಗೋ ಚಾವೆಜ್ ಸರ್ಕಾರವು ವಿದೇಶಿ ಒಡೆತನದ ತೈಲ ಸ್ವತ್ತುಗಳನ್ನು ರಾಷ್ಟ್ರೀಕರಣಗೊಳಿಸಿದ ನಂತರ ಎಕ್ಸಾನ್ಮೊಬಿಲ್ ಮತ್ತು ಕೊನೊಕೊಫಿಲಿಪ್ಸ್ ಸೇರಿದಂತೆ ಹಲವಾರು ಪ್ರಮುಖ ತೈಲ ಕಂಪನಿಗಳು ವೆನೆಜುವೆಲಾವನ್ನು ತೊರೆದವು. ದೇಶದಲ್ಲಿ ಗಮನಾರ್ಹ ಉಪಸ್ಥಿತಿಯನ್ನು ಕಾಯ್ದುಕೊಳ್ಳುವ ಏಕೈಕ ಪ್ರಮುಖ ಯುಎಸ್ ತೈಲ ಕಂಪನಿ ಚೆವ್ರಾನ್.

ಈ ವರ್ಷದ ಆರಂಭದಲ್ಲಿ ಅಧ್ಯಕ್ಷ ನಿಕೋಲಸ್ ಮಡುರೊ ಅವರನ್ನು ಪದಚ್ಯುತಗೊಳಿಸಿದ ನಂತರ ಟ್ರಂಪ್ ಈ ಹಿಂದೆ ಯುಎಸ್ ಇಂಧನ ಕಂಪನಿಗಳನ್ನು ವೆನೆಜುವೆಲಾಗೆ ಮರಳುವಂತೆ ಒತ್ತಾಯಿಸಿದ್ದಾರೆ. ಅಂದಿನಿಂದ ಆಡಳಿತವು ವೆನೆಜುವೆಲಾದ ತೈಲ ಕ್ಷೇತ್ರದ ಮೇಲಿನ ಕೆಲವು ನಿರ್ಬಂಧಗಳನ್ನು ಸಡಿಲಿಸಲು ಮತ್ತು ಖಾಸಗಿ ಹೂಡಿಕೆಯನ್ನು ಪ್ರೋತ್ಸಾಹಿಸಲು ಮುಂದಾಗಿದೆ. ಎಕ್ಸಾನ್ಮೊಬಿಲ್ ಸಿಇಒ ಡ್ಯಾರೆನ್ ವುಡ್ಸ್ ವೆನೆಜುವೆಲಾ ಒಂದು ಅವಕಾಶವನ್ನು ಒದಗಿಸುತ್ತದೆ ಎಂದು ಹೇಳಿದ್ದಾರೆ ಆದರೆ ಕಂಪನಿಯು ಮರಳುವುದನ್ನು ಪರಿಗಣಿಸುವ ಮೊದಲು ದೇಶಕ್ಕೆ ಗಮನಾರ್ಹ ಕಾನೂನು ಮತ್ತು ಆರ್ಥಿಕ ಸುಧಾರಣೆಗಳು ಬೇಕಾಗುತ್ತವೆ ಎಂದು ಎಚ್ಚರಿಸಿದ್ದಾರೆ. ಹೊಸ ಒಪ್ಪಂದವು ಜಾಗತಿಕ ಮತ್ತು ಅಮೆರಿಕದ ತೈಲ ಪೂರೈಕೆಗಳ ಮೇಲೆ ಬೀರುವ ಸಂಭಾವ್ಯ ಪರಿಣಾಮವು ಕಾರ್ಯರೂಪಕ್ಕೆ ಬರಲು ಸಮಯ ತೆಗೆದುಕೊಳ್ಳುವ ಸಾಧ್ಯತೆಯಿದೆ. ವೆನೆಜುವೆಲಾದ ಹಳೆಯ ಮೂಲಸೌಕರ್ಯ ಮತ್ತು ಸೀಮಿತ ಉತ್ಪಾದನಾ ಸಾಮರ್ಥ್ಯವು ಅದರ ಮೀಸಲುಗಳನ್ನು ನಿರಂತರ ಹೆಚ್ಚುವರಿ ಉತ್ಪಾದನೆಯಾಗಿ ಅಭಿವೃದ್ಧಿಪಡಿಸಲು ಗಣನೀಯ ಹೂಡಿಕೆಯ ಅಗತ್ಯವಿರುತ್ತದೆ ಎಂದು ಅಮೆರಿಕದ ಮಾಧ್ಯಮ ವರದಿಗಳು ತಿಳಿಸಿವೆ. ಆದಾಗ್ಯೂ, ಇಂಧನ ಪೂರೈಕೆಯನ್ನು ಹೆಚ್ಚಿಸಲು ಮತ್ತು ಅಮೆರಿಕದ ದಲ್ಲಿ ಇಂಧನ ಬೆಲೆಗಳ ಮೇಲೆ ಇಳಿಮುಖ ಒತ್ತಡ ಹೇರಲು ಹೆಚ್ಚಿದ ವೆನೆಜುವೆಲಾದ ತೈಲ ಉತ್ಪಾದನೆಯನ್ನು ಬಳಸುವ ಟ್ರಂಪ್ ಅವರ ತಂತ್ರಕ್ಕೆ ಈ ಒಪ್ಪಂದವು ಪ್ರಮುಖ ಪರೀಕ್ಷೆಯಾಗಬಹುದು.



ನವದೆಹಲಿಯ ಮೇಜರ್ ಧ್ಯಾನ್‌ಚಂದ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ 'ರಾಷ್ಟ್ರೀಯ ಕ್ರೀಡಾ ದಿನದ ಅಂಗವಾದ 'ಏಕ್ ಘಂಟಾ ಖೇಲ್ ಕೆ ಮೈದಾನ್ ಮೇನ್' ಕಾರ್ಯಕ್ರಮದ ವೇಳೆ, ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯಾ ಮೇಜರ್ ಧ್ಯಾನ್ ಚಂದ್ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

## ಒಲಿಂಪಿಕ್ಸ್‌ನಲ್ಲಿ ಕನ್ನಡಿಗರು ಹೆಚ್ಚು ಪದಕ ಗೆಲ್ಲಬೇಕು

### ಕೆಓಎನಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಸಂಭ್ರಮ

**ಬೆಂಗಳೂರು, ಆ.29:** ಮುಂಬರುವ ಒಲಿಂಪಿಕ್ ಕ್ರೀಡಾಕೂಟಗಳಲ್ಲಿ ಕರ್ನಾಟಕದ ಕ್ರೀಡಾಪಟುಗಳು ಕನಿಷ್ಠ 10 ಪದಕಗಳನ್ನು ಗೆಲ್ಲುವಂತಾಗಬೇಕು. ಅವರಿಗೆ ಸರ್ಕಾರದಿಂದ ಅಗತ್ಯ ಪ್ರೋತ್ಸಾಹ ಕೊಡಿಸಲು ನಾನು ಸಿದ್ಧ' ಎಂದು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಡಾ.ಕೆ. ಗೋವಿಂದರಾಜು ಕರ್ನಾಟಕ ಒಲಿಂಪಿಕ್ ಭವನದಲ್ಲಿ ಶನಿವಾರ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು.' ಒಲಿಂಪಿಕ್ಸ್ ನಲ್ಲಿ ಕರ್ನಾಟಕದಿಂದ 15 ರಿಂದ 20 ಕ್ರೀಡಾಪಟುಗಳು ಭಾಗವಹಿಸುವಂತಾಗಬೇಕು. ಈ ಪೈಕಿ 10 ರಿಂದ 15 ಪದಕಗಳನ್ನು ಕನ್ನಡಿಗರು ಗೆಲ್ಲಬೇಕು ಎಂಬುದೇ ನನ್ನ ಕನಸು' ಎಂದರು. 'ಹಾಕಿ ಮಾಂತ್ರಿಕ ಮೇಜರ್ ಧ್ಯಾನ್ ಚಂದ್ ಜನ್ಮದಿನದ ನೆನಪಿಗಾಗಿ ಆಗಸ್ಟ್ 29 ರಂದು ರಾಷ್ಟ್ರೀಯ ಕ್ರೀಡಾ ದಿನವೆಂದು ಆಚರಿಸಲಾಗುತ್ತಿದೆ. ಜನರಲ್ಲಿ ಕ್ರೀಡಾ ಮನೋಭಾವ ಬೆಳೆಸಲು ಇಂಥ ಆಚರಣೆಗಳು ಮಹತ್ವ ಪಾತ್ರವಹಿಸುತ್ತದೆ' ಎಂದು ಹೇಳಿದರು.



**ಧ್ಯಾನ್ ಚಂದ್ ಪ್ರತಿಮೆಗೆ ಪುಷ್ಪಾರ್ಚನೆ:** ಧ್ಯಾನ್ ಚಂದ್ ಅವರ ಪ್ರತಿಮೆ ಹಾಗೂ ಭಾವಚಿತ್ರಕ್ಕೆ ಡಾ.ಕೆ. ಗೋವಿಂದರಾಜು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಾದ ಎಂ.ಎನ್. ಅನುಚೇತ್ ಪುಷ್ಪಾರ್ಚನೆ ಮಾಡಿದರು. ಕೆಒಎ ಕಾರ್ಯದರ್ಶಿ ಅನಂತರಾಜು, ಮಾಜಿ ಹಾಕಿ ಆಟಗಾರರಾದ ಸುನೀಲ್, ಅರ್ಜುನ್ ಹಾಲಪ್ಪ, ನಿಕ್ಕಿನ್ ತಿಮ್ಮಯ್ಯ, ಮಾಜಿ ಕ್ರೀಡಾಪಟುಗಳಾದ ಉದಯ್ ಪ್ರಭು, ಜಿ.ದಿಲೀಪ್ ಸೇರಿದಂತೆ ಕೆಒಎ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಮೊಣಕಾಲು ನೋವಿನಿಂದ ಏಷ್ಯನ್ ಗೇಮ್ಸ್‌ನ ಡೈಮಂಡ್ ಲೀಗ್ ಫೈನಲ್‌ನಿಂದ ಹೊರಗುಳಿದ ನೀರಜ್ ಚೋಪ್ರಾ

**ನವದೆಹಲಿ, ಆ.29:** ಐಚಿ–ನಗೋಯಾದಲ್ಲಿ ನಡೆಯಲಿರುವ ಮುಂಬರುವ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪದಕದ ನಿರೀಕ್ಷೆಗೆ ಭಾರಿ ಹಿನ್ನಡೆಯಾಗಿ, ಸ್ಟಾರ್ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಮೊಣಕಾಲಿನ ಗಾಯದಿಂದಾಗಿ ಈ ಋತುವಿನ ಉಳಿದ ಪಂದ್ಯಗಳಿಂದ ಹಿಂದೆ ಸರಿದಿದ್ದಾರೆ. ಈ ಗಾಯದಿಂದಾಗಿ ಮುಂದಿನ ವಾರ ಬ್ರಸೆಲ್ಸ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಫೈನಲ್‌ನಿಂದಲೂ ಅವರು ಹೊರಗುಳಿದಿದ್ದಾರೆ. 28 ವರ್ಷದ ಅವರು ಕೊನೆಯ ಬಾರಿಗೆ ಲೌಸಾನ್ನೆ ಡೈಮಂಡ್ ಲೀಗ್‌ನಲ್ಲಿ ಸ್ಪರ್ಧಿಸಿದ್ದರು, ಅಲ್ಲಿ ಅವರು 88.05 ಮೀಟರ್ ದೂರ ಎಸೆದು ಎರಡನೇ ಸ್ಥಾನ ಪಡೆದರು. ಈ ಋತುವಿನಲ್ಲಿ ಅವರ ಏಕೈಕ



ಡೈಮಂಡ್ ಲೀಗ್ ಪ್ರದರ್ಶನವು ದೋಹಾದಲ್ಲಿ ಬಂದಿತು, ಅಲ್ಲಿ ಅವರು 85.69 ಮೀಟರ್ ದೂರ ಎಸೆದು ನಾಲ್ಕನೇ ಸ್ಥಾನ ಪಡೆದರು. ಕೇವಲ ಎರಡು ಡೈಮಂಡ್ ಲೀಗ್ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರೂ, ನೀರಜ್ ಈ ಋತುವಿನಲ್ಲಿ ಆರನೇ ಅತ್ಯುತ್ತಮ ಕ್ರೀಡಾಪಟುವಾಗಿ ಬ್ರಸೆಲ್ಸ್‌ನಲ್ಲಿ ನಡೆದ ಅಂತಿಮ ಪಂದ್ಯಕ್ಕೆ ಅರ್ಹತೆ ಪಡೆದಿದ್ದರು. ಕಳೆದ ತಿಂಗಳು ಗ್ಲಾಸ್ಗೋದಲ್ಲಿ ನಡೆದ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ 85.83 ಮೀಟರ್ ದೂರ ಎಸೆದು ಬೆಳ್ಳಿ ಪದಕ ಗೆದ್ದಿದ್ದರು. ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್ ಲೌಸನ್ನೆಯಲ್ಲಿ ತಮ್ಮ ಋತುವಿನ ಅತ್ಯುತ್ತಮ ಥ್ರೋ ಮಾಡಿದ ಗಾಯ ಸಂಭವಿಸಿದೆ ಎಂದು ಹೇಳಿದರು, ಆ ಸಮಯದಲ್ಲಿ ಅವರು ಅಂತಿಮವಾಗಿ ಅವರು ಹುಡುಕುತ್ತಿದ್ದ ಲಯವನ್ನು ಕಂಡುಕೊಳ್ಳಲು

ಪ್ರಾರಂಭಿಸುತ್ತಿದ್ದಾರೆಂದು ಭಾವಿಸಿದರು. "ಈಗ ನನ್ನ ಗಮನವು ಚೆನ್ನಾಗಿ ಚೇತರಿಸಿಕೊಳ್ಳುವುದು ಮತ್ತು ಇನ್ನಷ್ಟು ಬಲವಾಗಿ ಮರಳುವುದು" ಎಂದು ಚೋಪ್ರಾ ಹೇಳಿದರು, ಅಭಿಮಾನಿಗಳ "ಪ್ರೀತಿ ಮತ್ತು ಬೆಂಬಲ" ಕ್ಕೆ ಧನ್ಯವಾದ ಹೇಳಿದರು.